ರೂಪಾಯಿಗಳನ್ನು ಜನಸಾಮಾನ್ಯರು ಉಪಯೋಗ ಮಾಡಿದ್ದಕ್ಕೆ ಕಟ್ಟಬೇಕೆಂದು. ಅಷ್ಟೂ ಶಕ್ತಿ ಇರುವುದಿಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಾಗಲ್ಲ ಎಂಟು ವರ್ಷಗಳ ಬಿಲ್ ಒಮ್ಮೆಗೆ ತುಂಬಿ ಅಂದರೆ ಅವರಿಗೆ ಕಷ್ಟವಾಗುವುದಿಲ್ಲವೆ ?

ಶ್ರೀ ಜೆ.ಎಚ್ ಪಟೇಲ್.—ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆಯನ್ನು ನಾನು ಜಿಲ್ಲಾ ಪರಿಷತ್‌ನವರ ಸಹಾಯದಿಂದ ಮತ್ತು ಸಹಕಾರದಿಂದ ಜಾರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಈಗ ಬೇಡಿಕೆ ಮೇಲಿನ ಚರ್ಚೆ ಮುಗಿಯಿತು. ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯು ಸಂಖ್ಯೆ ೪೯ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ-೪೯ ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ ಯೋಜನೆಗಳು ಸಂದಾಯ ಮಾಡುವಲ್ಲಿ ಬರುವ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೫೧,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೬೨,೬೮,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಮಂತ್ರಿಯವರಿಂದ ಹೇಳಿಕೆ

ರಾಜ್ಯದಲ್ಲಿ ಕೈಗಾರಿಕಾ ನೀತಿ ಮತ್ತು ಕೊಡತಕ್ಕ ಸೌಲಭ್ಯಗಳ ಕುರಿತು

ಶ್ರೀ ಜೆ.ಹೆಚ್. ಪಟೇಲ್ —ಕೈಗಾರಿಕೆಗಳ ಬಗ್ಗೆ ಸರ್ಕಾರದ ಪಾಲಿಸಿ ಸ್ಟೇಟ್‌ಮೆಂಟನ್ನು ಈ ಗ ಮಾಡುತ್ತೇನೆ. ೧೯೮೩ರಲ್ಲಿ ನಮ್ಮ ಸರ್ಕಾರ ಇಂಡಸ್ಟ್ರಿಯಲ್ ಪಾಲಿಸಿಯನ್ನು ಜೂನ್‌ನಲ್ಲಿ ಅನೌನ್ಸ್ ಮಾಡಿತು. ಈಗ ೧೯೮೩ರ ಪಾಲಿಸಿಯಲ್ಲಿ ಬ್ಯಾಕ್‌ವರ್ಡ್ ಏರಿಯಾಸ್. ಅದನ್ನು ಮೂರು ಜೋನ್ ಮಾಡುವುದು, ಮೇಜರ್ ಮೀಡಿಯಂ ಮತ್ತು ಅವುಗಳಲ್ಲಿ ಯಾವುದಕ್ಕೆ ಪ್ರಿಯಾರಿಟಿ, ಯಾವ್ಯಾವುದಕ್ಕೆ ಎಷ್ಟೆಷ್ಟು ಇನ್‌ಸೆಂಟೀವ್ಸ್ ಇವನ್ನೆಲ್ಲ ಅದೇ ಫ್ರೇಮ್‌ವರ್ಕ್‌ನಲ್ಲಿ ಇಟ್ಟುಕೊಂಡು ವಿವರಗಳನ್ನು ಮಾತ್ರ ಬೇರೆ ಇಡಬೇಕಾಗುತ್ತದೆ. ಹಿಂದಿನ ಪಾಲಿಸಿಯಲ್ಲೇನೋ ಸಬ್ಸಿಡಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಕೊಡಲಿಲ್ಲ, ಎಂದು ಮೊಯ್ಲಿಯವರು ಹೇಳಿದರು. ಆದನ್ನು ಪೂರ್ಣವಾಗಿ ನಾನು ಅನುಮೋದಿಸುತ್ತೇನೆ. ಏಕೆಂದರೆ ಸರ್ಕಾರ ಇಂತಿಂಥ ಸೌಲಭ್ಯ ಕೊಡುತ್ತದೆಂದು ಹೇಳಿದ ಮೇಲೆ ಅದನ್ನು ನೆಚ್ಚಿಕೊಂಡು ಇಂಡಸ್ಟ್ರಿಯಲಿಸ್ಟ್ಸ್ ಮುಂದೆ ಬರುತ್ತಾರೆ, ಹಾಗೆ ಕೊಡದಿದ್ದಾಗ ಅವರಿಗೆ ನಿರಶನವಾಗುತ್ತದೆ. ಹೇಳದೇ ಇದ್ದಿದ್ದರೆ ಬೇರೆ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಈ ಸಲದಿಂದ ಅದನ್ನು ಕೊಡುತ್ತಿದ್ದೇವೆ. ನನ್ನ ಹೇಳಿಕೆ ಈ ರೀತಿ ಇದೆ.

The package of Incentive and Concessions for new industries which was introduced vide Government Order No. CI 121 SPC 82 dated 30th October, 1982 with effect from 1st November, 1982 was in force for five years and came to a close on 31st October. 1987. This Incentive Package has however been continued till 31st March, 1988 without the development loan.

2. The revised Package of Incentives and Concession for new industries has been made more comprehensive an at the same time easier to operate keeping in view the industrial development that has taken place in the State in the recent past and the need to develop indentified growth cesntres. The salient features of the revised Package of Incentives are :

(i) The State has been devided into three zones as against 4 zones as per earlier package, Zone-I not being eligible for any incentives and concessions (comprising 17 taluks), Zone-II comprising 37 taluks which are in the process of development and Zone-III comprising of 121 taluks which are backward.

(ii) Investment subsidy of 15% of the value of fixed assets subject to a maximum of Rs. 15 00 lakhs would be offered for industries in Zone-II while this would be at a rate of 20% of the value of fixed assets subjects to a maximum of Rs. 20.00 lakhs for Zone-III.

(iii) Provision of interest free development loan and interest free working capital loan is proposed to be discontinued and instead, Sales Tax exemption for tiny and small scale industries for periods of five to seven years in Zones II and II respectively and Sales Tax deferment for medium and large scale industries upto periods of five and seven years in Zones II and III respectively are being proposed.

(iv) A number of concessions which were offered earlier and many of which were not utilised by the entrepreneurs have been proposed to be discontinued. However, continuation of exemption of stop duty and concessional registration charges for tiny small scale industries, special concessions for SC/STs and physically handicapped entrepreneurs as also women entrepreneurs are being introduced.

(v) Keeping in view the importance of promoting industries in the areas of Electronics, Telecommunication, Food Processing and Bio-technology, it is proposed to offer special incentives at the rate proposed for Zone-III irrespective of the location of these industries. However, such industries will be permitted only in notified functional industrial areas/estates.

(vi) 29 specific industries have been deleted from the purview of any incentives and concessions and these mostly partain to power intensive industries, wood based industries. industries in ths State/Co-operative sector etc.,

(vii) Another notable feature of the revised package of incentives is that with a view to encourage employment for the local people, a condition will be imposed stipulating employment to local people atleast to the extent of 80% before sanction/disbursal of incentives.

(viii) It is also proposed to give incentives and concessions to Belgaum on the same lines as is given to Bidar District.''

These are the main features of the change in the Industrial Policy.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.)

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಾಣಪ್ಪನವರು, ಶ್ರೀಮತಿ ಮುಕ್ತರುನ್ನೀಸಾ, ಶ್ರೀ ಲೈಕುದ್ದೀನ್. ಶ್ರೀ ನಂಜಯ್ಯನಮಠ್ ಮತ್ತಿತರರು ಸಣ್ಣ ಕೈಗಾರಿಕೆಗಳ ಬೇಡಿಕೆಯ ಮೇಲೆ ಕೆಲವು ಪ್ರಮುಖವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಲಹೆಗಳನ್ನು ಉತ್ತಮವಾದ ಸಲಹೆಗಳೆಂದು ಪರಿಗಣಿಸುತ್ತಾ ಮತ್ತೆ ಕೆಲವು ಟೀಕೆಗಳನ್ನು ಏನು ಮಾಡಿದ್ದಾರೆ ಆ ಟೀಕೆಗಳಿಗೆ ಉತ್ತರವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನಾನು ಈಗ ತಾನೆ ಈ ಖಾತೆಯನ್ನು ವಹಿಸಿಕೊಂಡಿದ್ದೇನೆ. ಇದನ್ನು ವಹಿಸಿಕೊಂಡು ಒಂದು ತಿಂಗಳಾಗಿದೆ ಆ ಅವಧಿಯಲ್ಲಿ ಕೆಲವು ಕಾರ್ಯಕ್ರಮಂಗಳನ್ನು ಜಾರಿಗೆ ತರುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಈ ದಿಶೆಯಲ್ಲಿ ಈ ಸದನದ ಸಹಕಾರವನ್ನು ಬೇಡುತ್ತಾ ನಾನು ನನ್ನ ಬೇಡಿಕೆ ಮೇಲಿನ ಚರ್ಚೆಗೆ ಉತ್ತರವನ್ನು ಕೊಡುತ್ತೇನೆ. ಮೊದಲನೆಯದಾಗಿ ಕೈಮಗ್ಗಗಳ ಬಗ್ಗೆ ವಿವರಣೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಶ್ರೀಮಾನ್ ಮೊಯಿಲಿಯವರು ಲೂಮ್ ಕವರೇಜ್ ಆಗಲಿಲ್ಲವೆಂದು ಹೇಳಿದರು ನಿಜ. ೫ ವರ್ಷ ಲೂಮ್ಸ್‌ಗಳನ್ನು ಪ್ರತಿ ವರ್ಷ ಕವರ್ ಮಾಡುತ್ತೇವೆಂದು ಹೇಳಿದ್ದು ನಿಜ. ಆದರೆ ಹೋದ ವರ್ಷ ಅದನ್ನು ಮೈನ್‌ಟೇನ್ ಮಾಡಿಕೊಂಡು ಬಂದೆವು ಆದರೆ ಈ ವರ್ಷ ಮೈನ್‌ಟೇನ್ ಮಾಡುವುದಕ್ಕಾಗಲಿಲ್ಲ ಇದಕ್ಕೆ ಹಲವಾರು ಕಾರಣಗಳು ಇವೆ. ಅದನ್ನೆಲ್ಲಾ ಪಟ್ಟಿ ಮಾಡಿಕೊಂಡು ಹೋದರೆ ದೊಡ್ಡ ಪಟ್ಟಿಯಾಗುತ್ತದೆ. ಪ್ರಮುಖವಾದುದನ್ನು ಮಾತ್ರ ಹೇಳುತ್ತೇನೆ. ಯಾರ್ನ್ ಬೆಲೆ ಜಾಸ್ತಿಯಾಗಿ ಅಷ್ಟು ಬೆಲೆ ಕೊಟ್ಟು ತೆಗೆದುಕೊಳ್ಳುವುದಕ್ಕೆ ಶಕ್ತಿಯಿಲ್ಲದೇ ಇರುವುದು, ಕೇಂದ್ರದ ಜವಳಿ ನೀತಿಯೇನು ಇದೆ ಅದು ಮತ್ತೊಂದು ಕಾರಣವಾಗಿದೆ. ಈ ಮೂರು ಪ್ರಮುಖವಾದ ಕಾರಣಗಳಿಂದಾಗಿ ನಾವು ಎಷ್ಟು ಹುಮ್ಮಸ್ಸಿನಿಂದ ಈ ಕೆಲಸ ಪ್ರಾರಂಭ ಮಾಡಿದೆವೋ ಅಷ್ಟು ಹುಮ್ಮಸ್ಸಿನಿಂದ ಈ ವರ್ಷ ಮಾತ್ರ ಸಾಧನೆ ಮಾಡುವುದಕ್ಕಾಗಿಲ್ಲ ೧೯೮೭-೮೮ರಲ್ಲಿ ೨೧೦೨ ಲೂಮ್ ಕವರೇಜ್ ಮಾಡಿದ್ದೇವೆ ಬಟ್ಟೆ ಎಷ್ಟು ತಯಾರಾಗಿದೆಯೆಂದರೆ ೩೧೮ ಲಕ್ಷ ಮೀಟರ್‌ಗಳಷ್ಟು ಬಟ್ಟೆಯನ್ನು ತಯಾರು ಮಾಡಿದ್ದೇವೆ. ಸೇಲ್ಸ್ ಟರ್ನ್ ಓವರ್ ಲಕ್ಷಗಳಲ್ಲಿ ೩೩.೦೪ ಟರ್ನ್ ಓವರ್ ಆಗಿದೆ, ೪೨ ಲಕ್ಷ ಬೆನಿಫಿಷಿರೀಸ್ ಇದ್ದಾರೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಎರಡು ಲಕ್ಷ ಜನ ಬೆನಿಫಿಷಿಯರೀಸ್ ಆಗಿದ್ದಾರೆ. ಮತ್ತೆ ಶ್ರೀಮಾನ್ ಮೊಯಿಲಿಯವರು ೧೯೭೬-೭೭ ರಿಂದ ೧೯೮೨-೮೩ ರವರೆಗೆ ಲೂಮ್ಸ್ ಕವರೇಜ್ ಆಗಿದ ಎಂದು ಕೇಳಿದ್ದಾರೆ. ೧೨ ಸಾವಿರ ಲೂಮ್ ಕವರೇಜ್ ಆಗಿದೆ. ಪ್ರಾರಂಭ ಮಾಡಿದ ದಿನದಿಂದ ೧೨ ಸಾವಿರ ಲೂಮ್ಸ್ ಕವರೇಜ್ ಆಗಿದೆ. ೧೯೮೩-೮೪ ರಿಂದ ೮೮ ರವರೆಗೆ ೧೬,೭೪೭ ಲೂಮ್ಸ್ ಕವರೇಜ್ ಆಗಿದೆ, ಅಂದರೆ ಲೂಮ್ಸ್ ಕವರೇಜ್ ಜಾಸ್ತಿಯಾಗಿದೆಯೇ ಹೊರತು ಕಡಿಮೆಯಾಗಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಮಾಡಿದ್ದೇವೆ ಎಂದು ತಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ. ೧೯೭೬-೭೭ ರಲ್ಲಿ ತಾವು ಪ್ರಾರಂಭ ಮಾಡಿದ್ದೀರಿ, ಇದರಲ್ಲಿ ಎಷ್ಟು ಮಾಡಿದ್ದೇವೆ ಎಂದರೆ ೩,೦೧೭, ೧೯೭೭-೭೮ ರಲ್ಲಿ ೧,೮೫೫, ೧೯೭೮-೭೯ ರಲ್ಲಿ ಎಷ್ಟು ಕಡಿಮೆ ಎಂದರೆ

೫೯೭ಕ್ಕೆ ಇಳಿದಿದೆ. ಮತ್ತು ೧೯೭೯-೮೦ರಲ್ಲಿ ೧೫೩೬. ೧೯೮೦-೮೧ ರಲ್ಲಿ ೧,೧೩೬, ೧೯೮೧-೮೨ ರಲ್ಲಿ ೧,೫೭೨, ಮತ್ತೆ ೧೯೮೨-೮೩ ರಲ್ಲಿ ಆ ವರ್ಷ ಹೆಚ್ಚಿಗೆ ಮಾಡಿರುವುದು. ಆ ವರ್ಷವೇ ಹೆಚ್ಚಿಗೆ ಪ್ರಾರಂಭ ಮಾಡಿದ್ದು ಅಂದರೆ ೧೮೯೧. ೧೯೮೩-೮೪ ರಲ್ಲಿ ೧,೬೧೮. ಮತ್ತೆ ೧೯೮೪-೮೫ರಲ್ಲಿ ೩,೦೬೯, ೧೯೮೫-೮೬ರಲ್ಲಿ ನಾವು ಪಾಲಿಸಿಯನ್ನು ಅನೌನ್ಸ್ ಮಾಡಿದ್ದೆವಲ್ಲಾ ಆಗ ೪,೭೫೩ ಮತ್ತೆ ೧೯೮೬-೮೭ರಲ್ಲಿ ೫,೧೨೫. ಆದರೆ ಈ ವರ್ಷ ಮಾತ್ರ ೧೯೮೭-೮೮ ಕ್ಕೆ ೨,೧೮೨, ಕಡಿಮೆಯಾಗಿದೆ. ನಾನು ಮೊದಲೇ ಹೇಳಿದ ಕಾರಣದಿಂದ ಕಡಿಮೆಯಾಗಿದೆ. ಮತ್ತೆ ಪ್ರೊಡಕ್ಷನ್ ಬಗ್ಗೆ ಹೇಳಿ ವಿವರಗಳನ್ನು ಕೊಟ್ಟಿದ್ದೇನೆ. ಮತ್ತೆ ಶ್ರೀಮಾನ್ ಮೊಯಿಲಿಯವರು ಈ ವೀವರ್ಸ್‌ಗೆ ಕೊಡುವ ವೇಜಸ್ ಬಗ್ಗೆ ಹೇಳಿದರು. ಈ ವೇಜಸ್ ಬಗ್ಗೆ ಪರ್ ಮೀಟರ್ ಕೊಡುವುದು. ಪರ್ ಡೈಲಿ ಅಲ್ಲ. ಮೀಟರ್‌ಗೆ ಇಷ್ಟು ಎಂದು ಕೊಡುತ್ತೇವೆ. ೧೯೮೦-೮೧ರಲ್ಲಿ ಎಷ್ಟು ಇತ್ತು ಎಂದರೆ ೫ ರೂಪಾಯಿ ಪರ್ ಮೀಟರ್ ಕೊಡುತ್ತಿದ್ದೆವು. ಯಾವುದಕ್ಕೆ ಅಂದರೆ ಸಿಲ್ಕಿಗೆ. ಈಗ ಪರ್ ಮೀಟರ್ ೧೪ ರೂಪಾಯಿ ಕೊಡುತ್ತಿದ್ದೇವೆ. ಮತ್ತು ಈ ಕಾಟನ್ ವೀವರ್ಸ್‌ಗೆ ೧.೦೫ ಪೈಸೆ ಕೊಡುತ್ತಿದ್ದೀರಿ. ಈಗ ಎಷ್ಟು ಕೊಡುತ್ತಿದ್ದೇವೆ ಎಂದರೆ ೧.೬೦ ಪೈಸೆ ಕೊಡುತ್ತಿದ್ದೇವೆ. ಸ್ವಲ್ಪ ತೊಂದರೆ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ಮತ್ತೆ ತಾವು ಹೇಳಿದಿರಿ. ಅಧಿಕಾರಕ್ಕೆ ಬಂದಮೇಲೆ ಯಾವುದೇ ನ್ಯೂ ಪ್ರೋಗ್ರಾಮ್‌ಗಳನ್ನು ಮಾಡಿಲ್ಲ ಎಂದು ಹೇಳಿದಿರಿ. ಗುಲ್ಬರ್ಗ, ಹಾಸನ, ಚಿತ್ರದುರ್ಗ ಈ ಮೂರು ಜಿಲ್ಲೆಗಳಲ್ಲಿ ನಾವು ಮಾಡಿದ್ದು ಹೇಳುತ್ತಿದ್ದೇನೆ. ಮೂರು ಜಿಲ್ಲೆಗಳಲ್ಲಿ ನಾವು ಪ್ರಾರಂಭ ಮಾಡಿದ್ದೇವೆ.

ಶ್ರೀಮತಿ ಮುಕ್ತಾರುನ್ನೀಸಾ.—ಯಾವ ಯಾವ ಕಾರ್ಯಕ್ರಮಗಳನ್ನು ಮಾಡಿದ್ದೀರಿ ?

ಶ್ರೀ ಕೆ. ಬಿ. ಶಾಣಪ್ಪ.—ತಾವು ಗುಲ್ಬರ್ಗ, ಚಿತ್ರದುರ್ಗ ಮತ್ತು ಹಾಸನ್ ಜಿಲ್ಲೆಗಳಲ್ಲಿ ಕಾರ್ಯಕ್ರಮಗಳನ್ನು ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಅವರು ಕೇಳುತ್ತಿರುವುದು ಯಾವ ಯಾವ ಕಾರ್ಯಗಳನ್ನು ತಾವು ಮಾಡಿದ್ದೀರಿ ಎಂದು. ಹ್ಯಾಂಡ್‌ಲೂಂ ವೀವರ್ಸ್‌ಗೆ ಯಾರಿಗಾಗಿ ಏನೇನು ಕಾರ್ಯಕ್ರಮ ಗಳನ್ನು ಮಾಡುತ್ತಿದ್ದೀರಿ ಎಂದು ಅವರ ಕ್ಲಾರಿಫಿಕೇಷನ್.

ಶ್ರೀ ಎಂ ರಘುಪತಿ.—ಹ್ಯಾಂಡ್‌ಲೂಂ ವೀವರ್ಸ್ ಬಗ್ಗೆ ಮೊಯಿಲಿಯವರು ಮಾಡಿದ್ದು. ಅವರು ಮಾತನಾಡಿದ್ದರ ಬಗ್ಗೆ ನಾನು ಉತ್ತರ ಹೇಳುತ್ತಾ ಯಾವ ಯಾವ ಸೆಂಟರ್ಸ್‌ನಲ್ಲಿ ಪ್ರಾರಂಭ ಮಾಡಿದ್ದೇವೆ, ಯಾವ ಯಾವ ರೀತಿಯಲ್ಲಿ ಆಗಿಲ್ಲ ಎಂದು ಶ್ರೀಮಾನ್ ಮೊಯಿಲಿಯವರಿಗೆ ಉತ್ತರವನ್ನು ಹೇಳುತ್ತಿದ್ದೇನೆಯೇ ಹೊರತು ಬೇಗಂರವರು ಮೊಯಿಲಿಯವರ ಭಾಷಣವನ್ನು ಕೇಳಿದ್ದರೆ ಈ ಪ್ರಶ್ನೆಯನ್ನು ಕೇಳುತ್ತಿರಲಿಲ್ಲ. ಅವರು ಅವರ ಭಾಷಣವನ್ನು ಕೇಳಲಿಲ್ಲ. ಅವರು ಕಾಫಿ ಕುಡಿಯುವುದಕ್ಕೆ ಹೋಗಿದ್ದರು.

ಉಪ ಸಭಾಧ್ಯಕ್ಷರು.—ಮುಂದುವರಿಸಿ.

ಶ್ರೀ ಎಂ. ರಘುಪತಿ.—ಇನ್ನು ಶಿವರಾಂ ಕಮಿಟಿ ಬಗ್ಗೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೊದಲೇ ಗುರುಮಿಟ್ಕಲ್‌ನಲ್ಲಿ ಪ್ರಾರಂಭವಾಗಿದೆ. ಆ ಮೇಲೆ ಮುಧೋಳ್‌ನಲ್ಲಿ ರಂಗಂಪೇಟೆಯಲ್ಲಿ ಆಮೇಲೆ ಆಯಿತು.

ಶ್ರೀ ಎಂ. ರಘುಪತಿ.—ಇಲ್ಲ ಎಂದು ಹೇಳಲಿಲ್ಲ. ನಿಮಗೆ ಡಿಟೈಲ್ಸ್ ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮೊಳಕಾಲ್ಮೂರಿನಲ್ಲಿ ಆಗಲೇ ಪ್ರಾರಂಭವಾಗಿತ್ತು.

ಉಪ ಸಭಾಧ್ಯಕ್ಷರು.—ಮೊದಲು ಮುಂದುವರಿಸಲಿ.

ಶ್ರೀ ಎಂ. ರಘುಪತಿ.—ನಿಮಗೆ ಸಂಪೂರ್ಣವಾಗಿ ಡಿಟೈಲ್ಸ್ ಕಳುಹಿಸಿ ಕೊಡುತ್ತೇನೆ. ಲೂಮ್ಸ್ ಕವರೇಜ್ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕೊಡಲಿಲ್ಲವೇ, ಅದೇ ರೀತಿ ಸಂಪೂರ್ಣ ಮಾಹಿತಿ ಯನ್ನು ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಗುಲ್ಬರ್ಗದ ಮುಧೋಳ, ಅಂಗನಪೇಟೆಯಲ್ಲಿ ಫಸ್ಟ್ ಆಗಿದ್ದು.

ಶ್ರೀ ಎಂ. ರಘುಪತಿ.—ಇಲ್ಲ ಎಂದು ನಾನು ಹೇಳಲಿಲ್ಲ, ನಿಮಗೆ ಡೀಟೈಲ್ಸ್ ಕಳಿಸಿಕೊಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮೊಳಕಾಲ್ಮೂರ್‌ನಲ್ಲಿ ನಾವು ಈಗಾಗಲೇ ಪ್ರಾರಂಭ ಮಾಡಿದ್ದೆವು.

ಉಪಾಧ್ಯಕ್ಷರು —ಅವರು ಮುಂದುವರೆಸಲಿ ಬಿಡಿ.

ಶ್ರೀ ಎಂ. ರಘುಪತಿ.—ನಿಮಗೆ ಸಂಪೂರ್ಣವಾಗಿ ಡೀಟೈಲ್ಸ್ ಕಳಿಸಿಕೊಡುತ್ತೇನೆ. ಲೂಮ್ಸ್ ಕವರೇಜ್ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿಲ್ಲವೇ. ಅದೇ ರೀತಿ ಸಂಪೂರ್ಣವಾದ ಮಾಹಿತಿಯನ್ನು ಕಳಿಸಿಕೊಡುತ್ತೇನೆ. ಮಾನ್ಯ ನಂಜಯ್ಯ ಮಠ್‌ರವರು ಶಿವರಾಮನ್ ಕಮಿಟಿ ಬಗ್ಗೆ ಹೇಳಿದ್ದಾರೆ. ಶಿವರಾಮನ್ ಕಮಿಟಿಯವರು ಪ್ರಮುಖ್ಯವಾದ ಶಿಫಾರಸ್ಸುಗಳನ್ನು ಏನು ಮಾಡಿದ್ದಾರೆ ಅಂದರೆ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ೫ ವರ್ಷ ಆದ ಮೇಲೆ ತರಬೇಕು, ಕರ್ನಾಟಕದಲ್ಲಿ ಎಷ್ಟು ಪ್ರಯತ್ನ ಮಾಡಿದರೂ ಇದರ ಬಗ್ಗೆ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ತರುವುದಕ್ಕೆ ಆಗುತ್ತಾ ಇಲ್ಲ. ಆದರೂ ನಾವು ಪ್ರಯತ್ನವನ್ನು ಬಿಡುವುದಿಲ್ಲ, ಪ್ರಯತ್ನವನ್ನು ಮುಂದುವರೆಸಿಕೊಂಡು ಹೋಗುತ್ತೇವೆ, ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ತರುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಸಬ್ಸಿಡಿ ಹಣವನ್ನು ವೀವರ್ಸ್‌ಗೆ ಕೊಟ್ಟಿಲ್ಲ ಎಂದು ಶ್ರೀಮಾನ್ ಮೊಯಿಲಿಯವರು ಹೇಳಿದರು. ಇದು ಸೆಂಟ್ರಲ್‌ನಿಂದ ಬಂದಿದ್ದು ನಮ್ಮಿಂದ ಅಲ್ಲ ತ್ರಿಫ್ಟ್ ಬಗ್ಗೆ ಹೇಳಿದ್ದಾರೆ ಸಬ್ಸಿಡಿ ಅಮೌಂಟ್‌ನಲ್ಲಿ ೬.೨೫ ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ, ಕೊಟ್ಟಿದ್ದೇವೆ. ಇನ್ನು ಕೇವಲ ೧೨ ಲಕ್ಷ ರೂಪಾಯಿಗಳನ್ನು ಕೊಡಬೇಕು. ಅದನ್ನು ಬಿಡುಗಡೆ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಅದನ್ನು ಕೊಡುತ್ತೇವೆ. ತಾವು ತ್ರಿಫ್ಟ್ ಫಂಡ್ ಬಗ್ಗೆ ಹೇಳಿದ್ದೀರಿ. ಹೋದ ವರ್ಷ ಕೊಡಲಿಲ್ಲ ಎಂದು ಹೇಳಿದಿರಿ, ಕೊಡುತ್ತೇವೆ. ಆದರೆ ಸ್ಕೀಮ್ ಅಪ್ರೂವ್ ಆಗಿರಲಿಲ್ಲ. ಈಗ ಅಪ್ರೂವ್ ಆಗಿದೆ, ಅಪ್ರೂವ್ ಮಾಡಿದ್ದೇವೆ ಈಗ ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಈ ವರ್ಷ ಬಜೆಟ್‌ನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮತ್ತು ಹೋದ ವರ್ಷ ಕೊಡಬೇಕಾದ ೧೦ ಲಕ್ಷ ರೂಪಾಯಿಗಳನ್ನು ಕೂಡ ಕೊಡುತ್ತೇವೆ. ಅವರಿಗೆ ಏನೂ ತೊಂದರೆ ಆಗುವುದಿಲ್ಲ. ನಾವು ಇನ್ನು ೧೦ ಲಕ್ಷ ರೂಪಾಯಿಗಳನ್ನು ಕೊಡಬೇಕು. ಅಷ್ಟು ಹಣವನ್ನು ತ್ರಿಫ್ಟ್ ಫಂಡ್‌ನಲ್ಲಿ ಕೊಡುತ್ತೇವೆ ತ್ರಿಫ್ಟ್ ಫಂಡ್‌ನಿಂದ ಯಾವುದೇ ರೀತಿಯ ತೊಂದರೆ ಇಲ್ಲವೆಂದು ಹೇಳುತ್ತೇನೆ. ಮಾನ್ಯ ನಂಜಯ್ಯ ಮಠ್ ಒಂದು ವಿಷಯವನ್ನು ಹೇಳಿದರು. ಬಟ್ಟೆ ನೇಕಾರರು ಅವರು ಟವೆಲ್ ಅನ್ನು ನೇಯುವಾಗ ಅವರನ್ನು ಇದ್ದಕ್ಕಿದ್ದ ಹಾಗೆ ಸೀರೆ ನೇಯಬೇಕು ಇಲ್ಲವೇ ಧೋತಿ ನೇಯಬೇಕು ಎಂದು ಹೇಳುತ್ತೀರಿ, ಇದು ಕಷ್ಟವಾಗುತ್ತದೆ. ನಿಜ, ಈ ತರಹ ಮಾಡಕೂಡದು ಎಂದು ಆದೇಶವನ್ನು ಕೊಡುತ್ತೇನೆ. ಏನೇ ಆದರೂ ಅವರು ಯಾವುದನ್ನು ನೇಯುತ್ತಿರುತ್ತಾರೆ ಅದಕ್ಕೆ ಒತ್ತು ಕೊಡುತ್ತೇನೆ ಅವರು ಕೆಲವು ಮೆಟೀರಿಯಲ್ಸ್‌ಗೆ ತಕ್ಕ ಹಾಗೆ ಚಾರ್ಜಸ್ ಮಾಡಿಕೊಂಡಿರುತ್ತಾರೆ ತಾವು ಹೇಳಿದ ಹಾಗೆ ಎರಡು ನೂರು ಅಥವಾ ಮೂರು ನೂರು ಬಡವರಿಗೆ, ನೇಕಾರರು ಬಡವರು, ಅವರಿಗೆ ಅಷ್ಟು ಮುನ್ನೂರು ಅಥವಾ ನಾನ್ನೂರು ರೂಪಾಯಿ ಅಡ್ಜೆಸ್ಟ್ ಮಾಡುವುದು ಕಷ್ಟವಾಗುತ್ತದೆ ಆ ತರಹ ಮಾಡಬಾರದು ಎಂಬ ಆದೇಶವನ್ನು ಕೊಡುತ್ತೇನೆ. ಈಗ ತಮಗೆ ಗೊತ್ತಿದೆ ಯಾರ್ನ್ ಪ್ರೈಸ್ ಜಾಸ್ತಿ ಆಗುತ್ತಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇದರಿಂದ ತೊಂದರೆ ಆಗಿದೆ. ಹೌಸಿಂಗ್ ಸ್ಕೀಮಿನ ಬಗ್ಗೆ ಹೇಳುತ್ತಾ ಡಚ್ ಸ್ಕೀಮ್‌ನಲ್ಲಿ ನಾಲ್ಕು ಪರ್ಸೆಂಟ್ ವಸೂಲು ಮಾಡುತ್ತಿದ್ದಾರೆ ನೀವು ಚಕೋ ಆಪರೇಟೀವ್ ಸೆಕ್ಟಾರ್‌ನಲ್ಲಿ ೧೧ ಪರ್ಸೆಂಟ್ ವಸೂಲು ಮಾಡುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಎಸ್ ಜಿ. ನಂಜಯ್ಯನ ಮಠ್.—ಡಚ್ ಸ್ಕೀಮ್‌ನಲ್ಲಿ ೪ ಪರ್ಸೆಂಟ್ ಇದೆ, ಆದರೆ ಸರ್ಕಾರಿ ಸಂಘಗಳು ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಮನೆ ಕಟ್ಟಿಕೊಳ್ಳಲು ಹಣ ಸಹಾಯ ಮಾಡಿದರೆ ಯಾವ ರೀತಿ ಡಚ್ ಸ್ಕೀಮ್‌ನವರು ವಸೂಲು ಮಾಡುತ್ತಾರೆ, ಅದೇ ರೀತಿ ಇಂಟರೆಸ್ಟ್ ಸಬ್ಸಿಡಿ ಮಾಡಿದರೆ ಮಾತ್ರ ಅನುಕೂಲವಾಗುತ್ತದೆ. ಈಗ ೧೪ ಪರ್ಸೆಂಟ್ ಮಾಡಿರುವುದರಿಂದ ಸಬ್ಸಿಡೈಸ್ ಮಾಡುವುದು ಒಂದು ಕೆಲಸ, ೨೦ ಸಾವಿರ ನೀವು ಕೆಮ್ಮತ್ತು ಮನೆ ಕಟ್ಟಿಕೊಳ್ಳಲಿಕ್ಕೆ ಕೊಟ್ಟಿದ್ದರೆ ಅದು ದುಡ್ಡು ತುಂಬುವುದರಲ್ಲಿ ೩೫ ಸಾವಿರ ಆಗುತ್ತದೆ. ನೀವು ದುಡ್ಡು ಕೊಟ್ಟರೂ ಉಪಯೋಗ ಆಗುವುದಿಲ್ಲ. ಅತ ದುಡ್ಡನ್ನು ಕೊಡುವಾಗ ಮನೆಯನ್ನು ಮಾರಿ ತಿಂದಿರುವ ಎಷ್ಟೋ ಪ್ರಸಂಗಗಳು ಇವೆ. ನಮ್ಮಲ್ಲಿ ಬಡ್ಡಿ ಕಟ್ಟಲು ಮನೆ ಮಾರಿಕೊಂಡು ಅನೇಕ ಪ್ರಸಂಗಗಳು ಇವೆ.

ಶ್ರೀ ಎಂ. ರಘುಪತಿ.—ತಾವು ಏನು ಒಂದು ಸಲಹೆ ಕೊಟ್ಟಿದ್ದೀರಿ, ಅದನ್ನು ನಾನು ಒಪ್ಪುತ್ತೇನೆ, ಸ್ಯಾಂಕ್ಷನ್ ಆದ ದಿನದಿಂದ ಬಡ್ಡಿಯನ್ನು ವಸೂಲು ಮಾಡಿದರೆ ಅವರುಗಳಿಗೆ ಕಷ್ಟವಾಗುತ್ತದೆ. ಅವರು ಯಾವ ದಿನ ಸ್ಯಾಂಕ್ಷನ್ ಅನ್ನು ಅವೈಲ್ ಮಾಡಿಕೊಳ್ಳುತ್ತಾರೆ ಅಂದಿನಿಂದ ಬಡ್ಡಿಯನ್ನು ವಸೂಲು ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ, ಹೊರತು ತಾವು ಹೇಳಿದ ಹಾಗೆ ಸ್ಯಾಂಕ್ಷನ್ ಆದ ದಿನದಿಂದ ಅಂದರೆ ಆತ ಪಾಪ ಏನು ಮಾಡಬೇಕು, ಅದು ಮಾಡಬಾರದು. ನಾವು ಫೈನಾನ್ಸಿಯಲ್ ಇನ್‌ಸ್ಟಿಟ್ಯೂಷನ್ಸ್‌ನಿಂದ ಹಣವನ್ನು ತಂದಿರುತ್ತೇವೆ, ಇಂಟರೆಸ್ಟ್ ಕೊಡಬೇಕಾಗಿರುತ್ತದೆ. ನಾನು ಈ ವಿಷಯದ ಬಗ್ಗೆ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಯಾವ ರೀತಿ ಅವರಿಗೆ ಅವರು ಸ್ಯಾಂಕ್ಷನ್ ಆದ ಹಣವನ್ನು ಅವೈಲ್ ಮಾಡಿಕೊಂಡಿರುತ್ತಾರೆ, ಆ ದಿವಸದಿಂದ ಮಾತ್ರ ಬಡ್ಡಿ ವಸೂಲಿ ಮಾಡಿ ಯಾವ ರೀತಿ ಕನ್‌ಸೆಷನ್ ಕೊಡುವುದಕ್ಕೆ ಸಾಧ್ಯ ಎಂದು ನೋಡಿ ಅಷ್ಟನ್ನು ವಸೂಲು ಮಾಡುವುದಕ್ಕೆ ಹೇಳುತ್ತೇನೆ.

೧೧–೩೦ ಎ. ಎಂ.

ಮತ್ತೆ ಅವರು ಏನು ಹೇಳಿದ್ದಾರೆಂದರೆ ಕೋ–ಆಪರೇಟಿವ್ ಸೆಕ್ಟಾರ್‌ನಿಂದ ಪಡೆದ ಸಾಲಕ್ಕೆ ೧೨ ಪರ್ಸೆಂಟ್ ಬಡ್ಡಿ ವಸೂಲಿ ಮಾಡುತ್ತಾರೆ, ಅದನ್ನು ಕಡಿಮೆ ಮಾಡಿ ಎಂದು. ನಾನು ಈ ಖಾತೆಯನ್ನು ಇತ್ತೀಚಿಗೆ ವಹಿಸಿಕೊಂಡಿದ್ದೇನೆ. ಆದ್ದರಿಂದ ಈ ಬಗ್ಗೆ ನಮ್ಮ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡುತ್ತೇನೆ. ನಂತರ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಏನಾದರೂ ಕಡಿಮೆ ಮಾಡಲು ಸಾಧ್ಯವಿದ್ದರೆ ಮಾಡುತ್ತೇನೆ. ಆದರೆ ಇಲ್ಲಿ ಸಮ್ಮನೆ ಮಾಡುತ್ತೇನೆ ಎಂದು ಹೇಳಿ ನಂತರ ಮಾಡದಿದ್ದರೆ ಅದು ಚೆನ್ನಾಗಿರುವುದಿಲ್ಲ.

ಶ್ರೀ ಎಸ್. ಜಿ. ನಂಜಯ್ಯನಮಠ್.—ನೀವು ಮನಸ್ಸು ಮಾಡಿದರೆ ಆಗುತ್ತದೆ.

ಶ್ರೀ ಎಂ. ರಘುಪತಿ.—ಅಧಿಕಾರಿಗಳ ಜೊತೆ ಈ ಬಗ್ಗೆ ಮಾತನಾಡವಾಗ ನಿಮ್ಮನ್ನು ಕರೆಸಿ ಚರ್ಚೆ ಮಾಡುತ್ತೇನೆ. ಮತ್ತೆ ಮಾನ್ಯ ಮೊಯಿಲಿ ಅವರು ನನ್ನ ಬಗ್ಗೆ ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆರು ಲಕ್ಷ ರೂಪಾಯಿ ನಷ್ಟವಾಗಿದೆ, ಮುಂದಿನ ವರ್ಷ ಈ ಆರು ಲಕ್ಷ ರೂಪಾಯಿಗಳನ್ನು ವೈಪ್ ಆಫ್ ಮಾಡುವುದಕ್ಕೆ ನಾವು ಕಾರ್ಯಕ್ರಮ ಕೈಕೊಳ್ಳುತ್ತೇವೆ. ಈ ರೀತಿ ನಷ್ಟವಾಗಲು ಕಾರಣವೇನೆಂದರೆ, ಈ ಮೊದಲು ವರ್ಷದಲ್ಲಿ ೬೫ ರಿಂದ ೬೦ ದಿವಸಗಳ ಕಾಲಯಾ ಮೇಲೆ ರೀಬೆಟ್ ಕೊಡಲು ಕೇಂದ್ರಸರ್ಕಾರದವರು ಅನುಮತಿ ನೀಡುತ್ತಿದ್ದರು. ಆದರೆ ಈಗ ೩೦ ದಿವಸಗಳ ಮೇಲೆ ರಿಬೇಟ್ ನೀಡಬಾರದು ಎಂದು ಆದೇಶ ನೀಡಿದ್ದಾರೆ. ಇದರಿಂದ ಹೆಚ್ಚು ನಷ್ಟವಾಗುತ್ತಿದೆ. ಆದ್ದರಿಂದ ಮೊದಲಿನ ನೀತಿಯನ್ನೇ ಮುಂದುವರೆಸಬೇಕೆಂದು ನಾವು ಕೇಂದ್ರಸರ್ಕಾರದ ಜೊತೆ ಚರ್ಚೆ ಮಾಡುತ್ತೇವೆ. ಮೊದಲಿನ ನೀತಿಯನ್ನೇ ಮುಂದುವರೆಸಿದರೆ ನೇಕಾರರಿಗೆ ಅನುಕೂಲವಾಗುತ್ತದೆ ಮತ್ತು ನಮ್ಮ ಈ ಕಾರ್ಪೊರೇಷನ್‌ಗೆ ಏನು ನಷ್ಟವಾಗುತ್ತಿದೆ, ಇದು ಸಹ ಕಡಿಮೆ ಆಗತ್ತದೆ. ಅಷ್ಟೇ ಅಲ್ಲ, ಈಗ ಆಗಿರುವಂತಹ ನಷ್ಟವನ್ನು ವೈಪ್ ಆಫ್ ಮಾಡುವುದಕ್ಕೂ ಅನುಕೂಲವಾಗುತ್ತದೆ. ಮತ್ತೆ ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು. ಏನೆಂದರೆ, ಯಾವ ಅಧಿಕಾರಿಗಳು ಈ ನಷ್ಟಕ್ಕೆ ಕಾರಣರಾಗುತ್ತಾರೆ, ಅಂತಹವರನ್ನೇ ಹೊಣೆಗಾರರನ್ನಾಗಿ ಮಾಡಬೇಕು ಎಂದು. ಅಧಿಕಾರಿಗಳನ್ನೇ ಈ ವಿಷಯದಲ್ಲಿ ಹೊಣೆಗಾರರನ್ನಾಗಿ ಮಾಡುವುದು ಕಷ್ಟವಾಗಬಹುದು. ಆದರೂ ಈ ಬಗ್ಗೆ ಅಧಿಕಾರಿಗಳಿಗೆ ಸಲಹೆಗಳನ್ನು ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಬಗ್ಗೆ ಪಿ. ಎ. ಸಿ. ನವರು ಏನು ಸಲಹೆಗಳನ್ನು ಮಾಡಿದ್ದಾರೆ, ಅದರ ಪ್ರಕಾರ ನೀವು ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಎಂ. ರಘುಪತಿ.— ಪಿ.ಎ.ಸಿ ಮತ್ತು ಪಿ.ಯು.ಸಿ. ನವರು ಏನು ತಮ್ಮ ವರದಿಗಳಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ......

ಶ್ರೀ ಕೆ. ಎಚ್. ಪಾಟೀಲ್.— ಈಗ ನೀವು ಕೆ. ಎಚ್. ಡಿ ಸಿ.ಗೆ ದಕ್ಷ ಅಧಿಕಾರಿಗಳು ಎಂದು ಯಾರನ್ನು ಹಾಕಿದ್ದೀರಿ, ಅವರಿಗೆ ಕೆಲಸ ಮಾಡಲು ಅಗತ್ಯವಾದ ಹಣವನ್ನು ನೀವು ಕೊಡಬೇಕು. ಸರ್ಕಾರದಲ್ಲಿ ಹಣದ ತೊಂದರೆ ಇದ್ದರೆ ಬ್ಯಾಂಕ್‌ಗಳಿಗೆ ಗ್ಯಾರಂಟಿ ಕೊಟ್ಟಾದರೂ ಹಣವನ್ನು ಕೊಡಿಸಬೇಕು. ನೀವು ಹಾಗೆ ಒದಗಿಸಿದರೆ ಅವರು ಕೆಲಸ ಮಾಡಲು ಸಾಧ್ಯವಾಗುತ್ತದೆ, ಈಗ ನೀವು

ನೂಲನ್ನು ಸಹಕಾರಿ ಸಂಘಗಳಿಂದ ತೆಗೆದುಕೊಳ್ಳಿ ಎಂದು ಹೇಳುತ್ತೀರಿ. ಆದರೆ ಅವುಗಳ ಪರಿಸ್ಥಿತಿಯೇ ಕೆಟ್ಟಿದೆ. ಒಂದೋದು ಮಿಲ್‌ನವರು ಸಹ ಒಂದೊಂದು ಕೋಟಿ ರೂಪಾಯಿಗಳ ಸಾಲವನ್ನು ಪಡೆಯಬೇಕಾದ ಪರಿಸ್ಥಿತಿ ಬಂದಿದೆ ಆದ್ದರಿಂದ ದಯವಿಟ್ಟು ಅವಕ್ಕೆ ವ್ಯವಸ್ಥೆ ಮಾಡಿ.

ಶ್ರೀ ಎಂ. ರಘುಪತಿ.—ಮಾನ್ಯ ಪಾಟೀಲ್ ಅವರು ಉತ್ತಮವಾದ ಸಲಹೆ ಕೊಟ್ಟಿದ್ದಾರೆ. ಆ ಸಲಹೆಯನ್ನು ನಾವು ಪಾಲನೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಈಗ ಇರತಕ್ಕಂಥ ತೊಂದರೆ ಎಂದರೆ, ನಿಮ್ಮಲ್ಲಿ ಸಾಕಷ್ಟು ನೂಲು ಇಲ್ಲ. ನೂಲು ಇಲ್ಲದಿದ್ದರೆ ಪ್ರೊಡಕ್ಷನ್‌ಗೆ ತೊಂದರೆ ಆಗುತ್ತದೆ. ಇದನ್ನೇ ನಾನು ಮೊನ್ನೆ ಇಲ್ಲಿ ಹೇಳಿದ್ದು. ಗದಗ್‌ನಲ್ಲಿರುವ ಮಿಲ್‌ನವರು ಮಾತ್ರ ನಿಮಗೆ ನೂಲು ಕೊಡುತ್ತಾರೆ. ಆದರೆ ಬೇರೆಯವರು ಕೊಡುವುದಿಲ್ಲ. ಬೇರೆ ಮಿಲ್‌ನವರಿಗೆ ನೀವು ಹಣದ ಸಹಾಯ ಮಾಡದಿದ್ದರೆ ಅವರು ನಿಮಗೆ ನೂಲನ್ನು ಕೊಡುವುದಿಲ್ಲ.

ಶ್ರೀ ಎಂ, ರಘುಪತಿ.— ತಾವು ಹೇಳಿದ ರೀತಿಯಲ್ಲಿ ಹಣಕಾಸಿನ ಸಂಸ್ಥೆಗಳ ಮೂಲಕ ಅವರಿಗೆ ಹಣವನ್ನು ಕೊಡಿಸಿ ಈ ಕಾರ್ಪೊರೇಷನ್ನಿನ ನಷ್ಟವನ್ನು ಕಡಿಮೆ ಮಾಡಲು ನಾವು ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡುತ್ತೇವೆ.

ಇನ್ನು ಮಾನ್ಯ ನಂಜಯ್ಯಮಠ್ ಅವರು ಮತ್ತು ಶ್ರೀ ಮೊಯಿಲಿ ಅವರು ಮೂರು ತಿಂಗಳ ಹಿಂದೆ ಇದಕ್ಕೆ ಪ್ರತ್ಯೇಕವಾದ ಡೈರಕ್ಟರೇಟ್ ಮಾಡುವುದಾಗಿ ಹೇಳಿದ್ದಿರಿ, ಆದರೆ ಇನ್ನೂ ಏತಕ್ಕೆ ಮಾಡಿಲ್ಲ ಎಂದು ಕೇಳಿದ್ದಾರೆ. ಈ ಬಗ್ಗೆ ನಾನು ಹೆಚ್ಚಿನ ಮುಂತವರ್ಜಿ ವಹಿಸಿ ಕ್ರಮ ತೆಗೆದುಕೊಂಡಿದ್ದೇನೆ ಇದಕ್ಕೆ ಸಂಬಂಧಪಟ್ಟ ಸರ್ಕಾರದ ಆಜ್ಞೆಯು ಇವೊತ್ತು ಹೊರಡಿಸಲಾಗಿದೆ. ಇದರ ಕಾಪಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ಕೊಟ್ಟ ವಚನವನ್ನು ಜಾರಿಗೆ ತರಲಿಲ್ಲವೆಂದು ಹೇಳಿದ್ದರು. ಆದರೆ ಕೊಟ್ಟ ವಚನದ ಪ್ರಕಾರ ನಾವು ನಡೆದುಕೊಂಡಿದ್ದೇವೆ. ನೆನ್ನೆ ದಿವಸ ನೀವು ಬಹಳ ಕಳಕಳಿಯಿಂದ ನೀವು ಈ ಮಾತನ್ನು ಹೇಳಿದ್ದೀರಿ. ನಾವು ಈ ದಿನ ಸಪರೇಟ್ ಹ್ಯಾಂಡ್ ಲೂಮ್ ಡೈರಕ್ಟರೇಟ್ ಬಗ್ಗೆ ಆಜ್ಞೆ ಹೊರಡಿಸಿದ್ದೇವೆ. ಇದಕ್ಕೆ ಅಗತ್ಯವಾದ ಸಿಬ್ಬಂದಿಯನ್ನು ನಾವು ನಿಗದಿಪಡಿಸಿ ಅಲ್ಲಿಗೆ ಪೋಸ್ಟ್ ಮಾಡುತ್ತೇವೆ ಇಷ್ಟು ನಾನು ಹ್ಯಾಂಡ್‌ಲೂಂ ಸೆಕ್ಟಾರ್ ಬಗ್ಗೆ ಹೇಳಿದ್ದೇನೆ ಇನ್ನು ಹ್ಯಾಂಡಿಕ್ರಾಫ್ಟ್ಸ್‌ಗಳ ಬಗ್ಗೆ ಹೇಳುತ್ತೇನೆ. ಈ ಬಗ್ಗೆ ಶ್ರೀಮಾನ್ ಮೊಯಿಲಿಯವರು ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಪ್ರಶ್ನೆಗನ್ನೆ ಎತ್ತಿದ್ದಾರೆ. ಶ್ರೀಮಾನ್ ಮೊಯಿಲಿಯವರು ನೀವು ಸ್ಯಾಂಡಲ್‌ವುಡ್ ಅನ್ನು ಸಬ್ಸಿಡೈಸ್ ರೇಟ್‌ನಲ್ಲಿ ಕೊಡುತ್ತಾ ಇಲ್ಲ ಎಂದು ಹೇಳಿದರು. ನಾವು ಸಬ್ಸಿಡೈಸ್ ರೇಟ್‌ನಲ್ಲಿ ಕೊಡುತ್ತಾ ಇದ್ದೇವೆ. ೧೯೮೩–೮೪ ರಲ್ಲಿ ೯.೮ ಲಕ್ಷ, ೧೯೮೪–೮೫ ರಲ್ಲಿ ೯.೩೫ ಲಕ್ಷ, ೧೯೮೫-೮೬ ರಲ್ಲಿ ೯.೭೨ ಲಕ್ಷ, ೧೯೮೬–೮೭ ರಲ್ಲಿ ೧೬.೭೧ ಲಕ್ಷ, ೧೯೮೭–೮೮ ರಲ್ಲಿ ೧೮.೧೭ ಲಕ್ಷ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆರ್ಟಿಸಾನ್ಸ್ ಎಷ್ಟು ?

ಶ್ರೀ ಎಂ. ರಘುಪತಿ.— ೧೯೮೫-೮೬ ರಲ್ಲಿ ೮೩೧ ಜನರಿಗೆ, ೧೯೮೬–೮೭ ರಲ್ಲಿ ೮೫೦ ಜನರಿಗೆ, ೧೯೮೭–೮೮ ರಲ್ಲಿ ೧೧೦೫ ಜನರಿಗೆ ಕೊಟ್ಟಿದೆ. ಇಷ್ಟು ಕ್ರಾಫ್ಟ್ಸ್‌ಮನ್‌ಗೆ ಸ್ಯಾಂಡಲ್ ಉಡ್, ರೋಸ್ ಉಡ್, ಸಿಲ್ವರ್, ಜಿಂಕ್, ಕಾಪರ್ ಇವೆಲ್ಲಾ ಕೊಟ್ಟದ್ದೇವೆ: ಮತ್ತು ರಿವಾಲ್ವಿಂಗ್ ಕ್ರೆಡಿಟ್ ೧೫೦೦ ರೂಪಾಯಿಗಳನ್ನು ಕಮರ್ಷಿಯಲ್ ಬ್ಯಾಂಕ್ ನಿಂದ ಕೊಡುತ್ತಾ ಇದ್ದಾರೆ. ಇದನ್ನು ಜಾಸ್ತಿ ಮಾಡಬೇಕು ಎಂದು ತಾವು ಹೇಳಿದಿರಿ. ಕಮರ್ಶಿಯಲ್ ಬ್ಯಾಂಕ್ಸ್ ಜೊತೆಯಲ್ಲಿ ಈ ಬಗ್ಗೆ ಚರ್ಚೆ ಮಾಡಿ ೩ ಸಾವಿರಕ್ಕೆ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸುತ್ತೇನೆ. ಮೆಟಿರಿಯಲ್ ವೇಸ್ಟ್ ಎಷ್ಟು ಸಪ್ಲೈ ಮಾಡಿದಿರಿ ಎಂದು ಇದೆ, ಅದು ಬೇಕಾಗಿಲ್ಲ ಎಂದು ಕಾಣುತ್ತದೆ. ಪ್ರೊಕ್ಯೂರ್‌ಮೆಂಟ್ ವಿಷಯದಲ್ಲಿ ಹೇಳಬೇಕಾದರೆ ೧೯೮೬-೮೭ ರಲ್ಲಿ ೬೦ ಲಕ್ಷ ಚಿಲ್ಲರೆ ಪ್ರೊಕ್ಯೂರ್ ಮಾಡಿದರೆ ಈ ವರ್ಷ ೬೯ ಲಕ್ಷ ಪ್ರೊಕ್ಯೂರ್ ಮಾಡಿದೆವು. ಸ್ಯಾಂಡಲ್‌ವುಡ್ ಸಬ್ಸಿಡೈಸ್ ರೇಟ್‌ನಲ್ಲಿ ಕೊಡುತ್ತಾ ಇರುವುದರಿಂದ ಈ ಮೆಟೀರಿಯಲ್ ಎಲ್ಲಾ ಸಬ್ಸಿಡೈಸ್ ರೇಟ್‌ನಲ್ಲಿ ಕೊಡುತ್ತಾ ಇರುವುದರಿಂದ ಇಷ್ಟೊಂದು ಪ್ರಮಾಣದಲ್ಲಿ ಪ್ರೊಕ್ಯೂರ್ ಮಾಡುವುದಕ್ಕೆ ಅವಕಾಶವಾಯಿತು. ಮಾನ್ಯ ಲೈಕುದ್ದೀನ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ರಿವಾಲ್ವಿಂಗ್ ಕ್ರೆಡಿಟ್ ೩ ಸಾವಿರಕ್ಕೆ ಏರಿಸಬೇಕು ಎಂದು ಹೇಳಿದ್ದಾರೆ. ಕಮರ್ಷಿಯಲ್ ಬ್ಯಾಂಕ್‌ನವರ ಜೊತೆಯಲ್ಲಿ ಚರ್ಚೆಮಾಡಿ ೩ ಸಾವಿರಕ್ಕೆ ಜಾಸ್ತಿ ಮಾಡು

ವುದಕ್ಕೆ ವಿಚಾರ ಮಾಡುತ್ತೇನೆ, ಆಮೇಲೆ ೨೫ ಪರ್ಸೆಂಟ್ ಲಿಂಕಪ್ ಕ್ಯಾಪಿಟಲ್ ಕಾಸ್ಟ್‌ಗೆ ಮಾಡಿದ್ದೇವೆ. ಅದನ್ನು ಸಡಿಲ ಮಾಡುವುದಕ್ಕೆ ಆಗುವುದಿಲ್ಲ, ಅದು ಮುಂದುವರಿಯುತ್ತದೆ. ಮತ್ತೆ ಕ್ರೆಡಿಟ್ ಫೆಸಿಲಿಟೀಸ್ ಕೂಡ ಮುಂದುವರಿಯುತ್ತದೆ. ಅಧ್ಯಕ್ಷರೆ, ಪ್ರಥಮ ಬಾರಿಗೆ ಈ ಒಂದು ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಿದೆ. ಅಕ್ಯುಮುಲೇಟೆಡ್ ಲಾಸಸ್ ೭೪ ಲಕ್ಷ ರೂಪಾಯಿ ಇತ್ತು. ಆದರೆ ಹೋದ ವರ್ಷ ೫ ಲಕ್ಷ ಲಾಭಗಳಿಸಿದೆ. ೧೯೮೬-೮೭ ರಲ್ಲಿ ೨೫ ಲಕ್ಷ ಲಾಭಗಳಿಸಿದೆ. ಲಾಸಸ್ ಇದ್ದುದನ್ನು ರೈಟ್ ಆಫ್ ಮಾಡಿ ೨೫ ಲಕ್ಷ ಲಾಭ ಗಳಿಸಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಆರ್ಟಿಸಾನ್ಸ್‌ಗೆ ಎಷ್ಟರಮಟ್ಟಿಗೆ ಪ್ರಯೋಜನವಾಯಿತು ?

ಶ್ರೀ ಎಂ. ರಘುಪತಿ.— ಆರ್ಟಿಸಾನ್ಸ್‌ಗೆ ಕೊಡತಕ್ಕ ಸೌಲಭ್ಯಗಳನ್ನು ಜಾಸ್ತಿ ಮಾಡಿದ್ದೇವೆ. ಮತ್ತೆ ಈ ಒಂದು ಸಾಲಗಳನ್ನು ಸಂಪೂರ್ಣವಾಗಿ ರೈಟ್‌ಆಫ್ ಮಾಡುತ್ತೇವೆಂದು ಹೇಳುತ್ತಾ ನಾವು ೧-೨-೩ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ.

ನಮ್ಮ ಕಾರ್ಯಕ್ರಮಗಳು ಎಂದರೆ ೭ ಕಾಮನ್ ಫೆಸಿಲಿಟೀಸ್ centre ನ್ನು ಒದಗಿಸಿಕೊಡಬೇಕೆಂಬುದು ಕುಮಟಾ, ಸಿರ್ಸಿ, ಇನ್ನೂ ೫-೬ ಕಡೆ ಇದನ್ನು ಮಾಡುತ್ತೇವೆ. ಸಾಗರ, ಮೈಸೂರು, ನವಲಗುಂದ, ಚನ್ನಪಟ್ಟಣ ಮತ್ತು ಇನ್ನೊಂದು ಸ್ಥಳದಲ್ಲಿ ಒಟ್ಟು ೫ ಜಾಗಗಳಲ್ಲಿ ಮಹಿಳೆಯರಿಗೆ ಟ್ರೈನಿಂಗ್ ಸೆಂಟರ್‌ನ್ನು ತೆರೆಯುತ್ತೇವೆ. ಆರ್ಟಿಸಾನ್ಸ್‌ಗೆ ಹೆಚ್ಚಿನ ಅನುಕೂಲವನ್ನು ಒದಗಿಸಿ ಕೊಡಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮಗಳನ್ನು ಹೊಸದಾಗಿ ನಾವು ಜಾರಿಗೆ ತರುತ್ತಿದ್ದೇವೆ ಈ ಮಹಿಳೆಯರಿಗೆ ೨೫೦ ರೂಪಾಯಿಗಳ ಸ್ಟೈಫಂಡನ್ನು ಕೊಟ್ಟು ೬ ತಿಂಗಳ ಕಾಲ ತರಬೇತಿಯನ್ನು ಕೊಟ್ಟು ಮುಂದೆ ಅವರೇ ಸ್ವತಃ ಮ್ಯಾನುಫ್ಯಾಕ್ಚರಿಂಗ್ ಸೆಂಟರ್‌ಗಳನ್ನು ತೆರೆಯುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಇನ್ನು ಮುಂದೆ ಹ್ಯಾಂಡ್‌ಲೂಂ, ಹ್ಯಾಂಡಿಕ್ರಾಫ್ಟ್ಸ್, ಕಾಯಿರ್ ಮತ್ತು ಲಿಡ್ಕರ್ ಇವೆಲ್ಲವನ್ನೂ ಸೇರಿಸಿ ಒಂದು ಕಾಮನ್ ಸೆಂಟರ್‌ನ್ನು ಮಾಡುತ್ತೇವೆ. ಈ ರೀತಿ ಮಾಡುವುದರಿಂದ ಬಾಡಿಗೆ ಕೊಡತಕ್ಕದ್ದು ಉಳಿಯುತ್ತದೆ. ಓವರ್ ಹೆಡ್ ಛಾರ್ಜಸ್ ಕಡಿಮೆಯಾಗುತ್ತದೆ. ಇದರ ಮೂಲಕ ಲಾಸನ್ನು ನಾವು ಕಡಿಮೆ ಮಾಡಬಹುದು. ಆದ್ದರಿಂದ ನಾವು ಈ ಕಾರ್ಯಕ್ರಮವನ್ನು ಜಾರಿಗೆ ತರುತ್ತಿದ್ದೇವೆ. ನಾನು ಈ ಹ್ಯಾಂಡಿ ಕ್ರಾಫ್ಟ್‌ನ ಬಗ್ಗೆ ಹೆಚ್ಚಿನ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ.

ಶ್ರೀಮತಿ ಮುಕ್ತರುನ್ನಿಸಾ.— ತಾವು ವಿಮೆನ್ಸ್ ಟ್ರೈನಿಂಗ್ ಸೆಂಟರ್ಸ್‌ನ್ನು ಈ ವರ್ಷದಿಂದ ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ. ಸಂತೋಷ. ಆದರೆ ಯಾವ ತಿಂಗಳಿಂದ ಪ್ರಾರಂಭ ಮಾಡುತ್ತೀರಿ?

ಶ್ರೀ ಎಂ. ರಘುಪತಿ — ಇನ್ನು ೧ ತಿಂಗಳಲ್ಲಿ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರು ಮಾತನಾಡುವಾಗ ಇಂಡಸ್ಟ್ರಿಯಲ್ ಷೆಡ್ಸ್‌ನ್ನು ಕಟ್ಟುವುದು ಕಡಿಮೆಯಾಗುತ್ತಿದೆಯೆಂದು ಹೇಳಿದರು. ನಿಜ. ಕಟ್ಟುತ್ತಿರುವುದು ಕಡಿಮೆಯಾಗಿದೆ ಏಕೆಂದರೆ, ಇಂಡಸ್ಟ್ರಿಯಲ್‌ನ ವಿಚಾರದಲ್ಲಿ ನಾನು ಹೇಳುವುದಾದರೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಇಂಡಸ್ಟ್ರಿಯಲ್ ಷೆಡ್ಸ್ ಎಂದು ಮಾಡಬೇಕೆಂದು ನಾವು ಯೋಜನೆಯನ್ನು ಇಟ್ಟುಕೊಂಡಿದ್ದೆವು. ಆದರೆ ಇದು ಅಷ್ಟು ೧೪ ಷೆಡ್ಡುಗಳು ಆಶಾದಾಯಕವಾಗಿ ಕೆಲಸ ಮಾಡುತ್ತಿಲ್ಲ. ತಮಗೆ ಹೇಳುವುದಾದರೆ, ಮಾನ್ಯ ಶಾಣಪ್ಪನವರ ಕ್ಷೇತ್ರದಲ್ಲಿ ೨ ಮಾತ್ರ ಆಕ್ಯುಪೈ ಆಗಿದೆ ಕೋಲಾರದಲ್ಲಿ ಕಟ್ಟಿದ್ದರಲ್ಲಿ ೨೦ ಷೆಡ್ಡುಗಳ ಪೈಕಿ ೪ ಮಾತ್ರ ಆಕ್ಯುಪೈ ಆಗಿವೆ, ಕಾರ್ಕಳದಲ್ಲಿ ೭ ಷೆಡ್ಡುಗಳನ್ನು ಕಟ್ಟಿದ್ದರ ಪೈಕಿ ೨ ಮಾತ್ರ ಆಕ್ಯುಪೈ ಆಗಿವೆ. ಇದು ಅನುಭವದಿಂದ ಗೊತ್ತಾಗಿರತಕ್ಕದು...

ಶ್ರೀ ಎಂ. ವೀರಪ್ಪ ಮೊಯ್ಲಿ.— ನೀವು ಬಾಡಿಗೆಯನ್ನು ಜಾಸ್ತಿ ಫಿಕ್ಸ್ ಮಾಡಿರುವುದರಿಂದ ಖಾಲಿ ಇರಬಹುದು.

ಶ್ರೀ ಎಂ. ರಘುಪತಿ. — ನಾವು ಫೈನಾನ್ಷಿಯಲ್ ಇನ್‌ಸ್ಟಿಟ್ಯೂಷನ್ಸ್‌ನಿಂದ ಹಣವನ್ನು ತಂದು, ಮಾಡುವುದರಿಂದ ಬಾಡಿಗೆ ದುಬಾರಿ ಆಗಿಯೇ ಆಗುತ್ತದೆ. ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. 'ಎ' ಟೈಪ್‌ಗೆ ೧೬೦ ರೂ. 'ಬಿ' ಟೈಪ್‌ಗೆ ೮೨೫ ರೂ. 'ಸಿ' ಟೈಪ್‌ಗೆ ೪೦೫ ರೂ ಮತ್ತು 'ಡಿ' ಟೈಪ್‌ಗೆ ೨೫೦ ರೂಪಾಯಿಗಳೆಂದು ಮಾಡಿದ್ದೇವೆ ಇನ್‌ಸ್ಟಾಲ್‌ಮೆಂಟ್ಸ್ ಎಂದರೆ 'ಎ' ಟೈಪ್‌ಗೆ ೯ ಸಾವಿರ ರೂ. 'ಬಿ' ಟೈಪ್‌ಗೆ ೫ ಸಾವಿರ ರೂಪಾಯಿ, 'ಸಿ' ಟೈಪ್‌ಗೆ ೩ ಸಾವಿರ

ರೂಪಾಯಿ, ಮತ್ತು 'ಡಿ' ಟೈಪ್‌ಗೆ ೧೮೦೦ ರೂಪಾಯಿ ಕೊಡಬೇಕಾಗುತ್ತದೆ. ತಾವು ಹೇಳಿದಂತೆ ಈ ರೀತಿಯಿಂದಾಗಿ ಸ್ವಲ್ಪ ಮಟ್ಟಿಗೆ ಕಷ್ಟವಾಗುತ್ತದೆ. ಆದರೆ ಏನು ಮಾಡುವುದು. ನಾವು ಅಸಹಾಯಕ ಸ್ಥಿತಿಯಲ್ಲಿದ್ದೇವೆ. ಈ ಕಾರಣದಿಂದಾಗಿ ಈ ಸಂಸ್ಥೆ ಲಾಭದಾಯಕವಾಗಿ ನಡೆಯುತ್ತಿಲ್ಲ. ಈಗ ಈ ನಷ್ಟವನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಮಾನ್ಯ ಸದಸ್ಯರಾದ ಶರಣಪ್ಪನವರು ಕೇಳಿದರು. ಇಂಡಸ್ಟ್ರಿಯಲ್ ಷೆಡ್ಸ್‌ನ್ನು ಕಟ್ಟಿಸಿ ಬಾಡಿಗೆಗೆ ಕೊಡುವುದಕ್ಕೆ ಬದಲಾಗಿ ನಿವೇಶನಗಳನ್ನೇ ಕೊಟ್ಟರೆ ಅವರವರಿಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಳ್ಳಲಿ ಎಂದು ಯೋಚನೆ ಮಾಡಿ ೩೦ ಪರ್ಸೆಂಟ್ ಇದ್ದುದನ್ನು ಈಗ ೫೦ ಪರ್ಸೆಂಟ್ ಇಟ್ಟಿದ್ದೇವೆ. ಇಂಡಸ್ಟ್ರಿಯಲಿಸ್ಟ್ ಅವರಿಗೆ ಬೇಕಾದ ರೀತಿಯಲ್ಲಿ ಕಟ್ಟಿಸಿಕೊಳ್ಳಲು ಅನುಕೂಲ ಮಾಡಿಕೊಡುತ್ತೇವೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರು ಮಾತನಾಡುತ್ತಾ ಇಂಡಸ್ಟ್ರಿಯಲ್ ಶೆಡ್ಸ್ ಕಾಸ್ಟ್ ಜಾಸ್ತಿಯಾಗಿದೆ ಎಂದು ಹೇಳಿದರು. ಅದಷ್ಟು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಳ್ಳುತ್ತೇನೆ. ಕಾಸ್ಟ್ ಕಡಿಮೆ ಮಾಡುವುದಕ್ಕೆ ಹೊಸ ಷೆಡ್ಸ್ ಕಟ್ಟುತ್ತಿದ್ದೇವೆ. ಪಂಜಾಬ್ ಮತ್ತು ಹರಿಯಾಣದಲ್ಲಿ ಯಾವ ರೀತಿ ಕಟ್ಟಿರುತ್ತಾರೆ ಆ ಮಾದರಿಯಲ್ಲಿ ಇಲ್ಲೂ ಕಟ್ಟುವುದಕ್ಕೆ ಏರ್ಪಾಡು ಮಾಡಿ ಹೊಸ ಟೈಪ್ ಷೆಡ್‌ಗಳನ್ನು ಕಟ್ಟುವುದಕ್ಕೆ ಕ್ರಮ ತಾಕಿಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಇಂಡಸ್ಟ್ರಿಯಲ್ಸ್ ಸಿಕ್ ಆಗುವುದಕ್ಕೆ ಮತ್ತು ಲಾಸ್ ಆಗುವುದಕ್ಕೆ ಕಾರಣ ಕೇಳಿದ್ದಾರೆ. ಕಾರಣವೇನೆಂದರೆ SAILರವರು ನಮಗೆ ಐರನ್ ಮೆಟೀರಿಯಲ್ಸ್‌ನ್ನು ಸಮಯಕ್ಕೆ ಸರಿಯಾಗಿ ಕಳಿಸುವುದಿಲ್ಲ. ಮತ್ತೆ ಯಾವ ಮೆಟೀರಿಯಲ್ಸ್ ಕೊಡಬೇಕಾಗುತ್ತದೋ ಅದನ್ನು ಕಳುಹಿಸಿಕೊಡುವುದಿಲ್ಲ. ಈ ರೀತಿಯಾದ ತೊಂದರೆ ನಮ್ಮ ರಾಜ್ಯಕ್ಕೆ ಒಂದೇ ಅಲ್ಲ, ಎಲ್ಲಾ ರಾಜ್ಯಗಳಿಂದಲೂ ದೂರು ಇರುತ್ತದೆ. SAIL ನವರು ಸರಿಯಾಗಿ ಕೋ ಆಪರೇಟ್ ಮಾಡುತ್ತಿಲ್ಲ, ಅವರು ಸರಿಯಾಗಿ ಕೋ ಆಪರೇಟ್ ಮಾಡಿದರೆ ಇಂಡಸ್ಟ್ರಿಯಲ್ಸ್ ಸಿಕ್ ಆಗುವುದಕ್ಕೆ ಅವಕಾಶವಾಗುವುದಿಲ್ಲ. ಮತ್ತೆ ನಮ್ಮ ಹಣಕಾಸಿನ ಪರಿಸ್ಥಿತಿಯೂ ಉತ್ತಮವಾಗುತ್ತದೆ.

ಇನ್ನು ಕೋಲ್ ಬಗ್ಗೆ ಹೇಳುವುದಾದರೆ ನಮಗೆ ಕೋಲ್ ಸಪ್ಲೈ ಆಗಬೇಕೆಂದರೆ ನಮಗೆ ಎಷ್ಟು ಕೋಲ್ ಬೇಕಾಗುತ್ತದೆ ಅಷ್ಟು ಸಮಯಕ್ಕೆ ಸರಿಯಾಗಿ ಸಪ್ಲೈ ಆಗುವುದಿಲ್ಲ. ಸಂಬಂಧ ಪಟ್ಟ ಇಬ್ಬರು ಮಂತ್ರಿಗಳ ಜೊತೆಯಲ್ಲಿಯೂ ಮಾತುಕತೆ ನಡೆಸಿ ಲೆಟರ್‌ನ್ನು ಕೂಡ ಬರೆದಿದ್ದೇನೆ ಅವರ ಗಮನಕ್ಕೆ ಈ ವಿಚಾರವನ್ನು ತಂದಿದ್ದೇನೆ. ಸಪ್ಲೈಯಾದಂತೆಲ್ಲ ನಾವು ಹೆಚ್ಚಿನ ಅನುಕೂಲವನ್ನು ಇವರಿಗೆ ಮಾಡುತ್ತೇವೆಂದು ಹೇಳುತ್ತೇನೆ.

ಇನ್ನು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಹೆಚ್ಚಿನ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ೧೦ ಪರ್ಸೆಂಟ್ ಇಂಡಸ್ಟ್ರಿಯಲ್ ಶೆಡ್ಸ್‌ನ್ನು ಕೊಟ್ಟಿದ್ದೇವೆ. ಹಿಂದೆ ೧೨ ಪರ್ಸೆಂಟ್ ಇದ್ದುದನ್ನು ಇನ್ನು ಮುಂದೆ ೧೫ ಪರ್ಸೆಂಟ್ ಏರಿಸಬೇಕೆಂದಿದ್ದೇವೆ. ೧೫ ಪರ್ಸೆಂಟ್‌ನಷ್ಟು ಜಾಸ್ತಿ ಮಾಡುತ್ತೇವೆಂದು ಹೇಳುತ್ತಾ ಅವರಿಗೆ ಈಗ ೫೦ ಸಾವಿರ ರೂಪಾಯಿಗಳನ್ನು ಸೀಡ್ ಮನಿಯಾಗಿ ಕೊಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎಷ್ಟು ಹಣವನ್ನು ಕೊಡುತ್ತೀರಿ?

ಶ್ರೀ ಎಂ. ರಘುಪತಿ.—೫೦ ಸಾವಿರರೂಪಾಯಿಗಳನ್ನು ಕೊಡುತ್ತೇವೆ. ಯಾರ್ಯಾರು ಇಂಡಸ್ಟ್ರೀಸ್ ಮಾಡುತ್ತೇವೆಂದು ಮುಂದೆ ಬರುತ್ತಾರೆ ಅವರಿಗೆ ಕೊಡುತ್ತೇವೆ ಮತ್ತು ಅದರ ಜೊತೆಗೆ ಟ್ರೈನಿಂಗ್‌ನ್ನು ಕೂಡ ಕೊಟ್ಟು ಅವರಿಗೆ ಯಾವ ತೊಂದರೆ ಇಲ್ಲದಂತೆ ಅನುಕೂಲ ಮಾಡಿಕೊಡುತ್ತೇವೆ.

ಒಬ್ಬ ಮಾನ್ಯ ಸದಸ್ಯರು.— ಎಷ್ಟು ಜನರಿಗೆ ಎಷ್ಟು ತಾಲ್ಲೂಕುಗಳಲ್ಲಿ ಕೊಡುತ್ತೀರೆಂಬುದನ್ನು ಬಿಡಿಸಿ ಹೇಳಿದರೆ ನಮಗೆ ಅರ್ಥವಾಗುತ್ತದೆ.

ಶ್ರೀ ಎಂ. ರಘುಪತಿ.— ವಿವರಗಳನ್ನೆಲ್ಲ ಹೇಳಬೇಕೆಂದರೆ ಬಹಳ ಹೊತ್ತಾಗುತ್ತದೆ ಇಷ್ಟು ಮಾತ್ರ ಹೇಳುತ್ತೇನೆ ಪತ್ರಿಕೆಗಳ ಮುಖೇನ ಆಜ್ಞೆಯನ್ನು ಪ್ರಕಟಣೆ ಮಾಡಿಸುತ್ತೇವೆ. ಆ ಸ್ಕೀಮನ್ನು ತಮಗೆ ಕಳಿಸಿ ಕೊಡುತ್ತೇವೆ.

ಸರ್ಕಾರ ಆಜ್ಞೆ ಹೊರಡಿಸಿದಾಗ ಎಷ್ಟು ಜನಗಿಗೆ ಎಷ್ಟು ಫೆಸಿಲಿಟೀಸ್ ಕೊಡುತ್ತೇವೆನ್ನುವುದು ಗೊತ್ತಾಗುತ್ತದೆ. ೧೫ ಪರ್ಸೆಂಟ್ ಶೆಡ್ಸ್ ತೆಗೆದುಕೊಳ್ಳುವುದಕ್ಕೆ ಮುಂದೆ ಬರುತ್ತಾರಲ್ಲ ಆ ೧೫%ಗೂ. ಹಣವನ್ನು ಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಿಮ್ಮ ಸರ್ಕಾರ ೧೮ ಪರ್ಸೆಂಟ್ ಏತಕ್ಕೆ ಕೊಡಬಾರದು. ಹರಿಜನರಿಗೆ ಎಷ್ಟು, ಗಿರಿಜನರಿಗೆ ಎಷ್ಟು ಕೊಡುತ್ತೀರೆಂಬುದನ್ನು ಹೇಳಿ ಮತ್ತೆ ಡೂಪ್ಲಿಕೇಟ್ ಸರ್ಟಿಫಿಕೇಟ್ ಹೈಬ್ರೀಡ್ ಸರ್ಟಿಫಿಕೇಟ್ ಹೊಂದಿರತಕ್ಕಂಥವರಿಗೂ ಏನಾದರೂ ಕೊಡುವ ಯೋಚನೆ ಇದೆಯೇ ?

ಶ್ರೀ ಎಂ. ರಘುಪತಿ,—ಈ ಪ್ರಶ್ನೆ ಹಾಕಿರುವುದು ಇದು ನನ್ನ ಖಾತೆಗೆ ಸಂಬಂಧಪಟ್ಟಿಲ್ಲ. ಶೆಡ್ಯೂಲ್‌ಕ್ಯಾಸ್ಟ್‌ಗೆ ತಾವು ಹೇಳಿದ್ದೀರಿ ೧೦ ಪರ್ಸೆಂಟ್ ಇರುವುದನ್ನು ೧೮ ಪರ್ಸೆಂಟ್ ಮಾಡಿ ಎಂದು ಹೇಳಿದರು. ಅದನ್ನು ೨೦ ಪರ್ಸೆಂಟ್‌ಗೆ ಏರಿಸುತ್ತೇವೆ ಮತ್ತು ೫೦ ಸಾವಿರ ಸೀಡ್‌ಮನಿ ಕೊಡಿ ಎಂದು ಹೇಳಿದ್ದೀರಿ. ಎಷ್ಟು ಜನ ಮುಂದೆ ಬರುತ್ತಾರೆ ಅಷ್ಟು ಜನಕ್ಕೂ ಕೊಡುವುದಲ್ಲದೆ ಟ್ರೈನಿಂಗ್ ಕೂಡ ಕೊಟ್ಟು ಮಾರ್ಕೆಟಿಂಗ್ ಫೆಸಿಲಿಟೀಸನ್ನು ಕೂಡ ಕೊಡುತ್ತೇವೆ, ಇಂಥ ಇಂಡಸ್ಟ್ರೀಸ್ ಎಂದು ಗುರುತಿಸಿ ಸರ್ಕಾರಿ ವಲಯದಲ್ಲಿ ಯಾವುದನ್ನು ಖರೀದಿ ಮಾಡುತ್ತಾರೆ ಅಂಥ ಇಂಡಸ್ಟ್ರೀಸ್‌ಗಳನ್ನು ಸ್ಥಾಪಿಸಲು ಅನುಕೂಲ ಮಾಡುತ್ತೇವೆ.

ಶ್ರೀ ಬಿ, ಬಸವಲಿಂಗಪ್ಪ.—ವರ್ಕಿಂಗ್ ಕ್ಯಾಪಿಟಲ್ ಎಷ್ಟು ಮಾಡುತ್ತೀರಿ.

ಶ್ರೀ ಎಂ. ರಘುಪತಿ.—೫೦ ಸಾವಿರ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಎಲ್ಲಿಬರುತ್ತದೆ ನಿಮ್ಮ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ಏನಿಲ್ಲ ತಮ್ಮದು ಇಂಡಸ್ಟ್ರಿಯಲ್ ಪಾಲಿಸಿ ಎಂದು ತೆಗೆದುಕೊಳ್ಳಬೇಕೋ. ಅಥವಾ ಜೆ. ಎಚ್. ಪಟೇಲ್ ಅವರದನ್ನು ತೆಗೆದುಕೊಳ್ಳಬೇಕೋ ?

ಶ್ರೀ ಎಂ. ರಘುಪತಿ —ಅವರ ಇಂಡಸ್ಟ್ರಿಯಲ್ ಪಾಲಿಸಿ, ನಮ್ಮ ಇಂಡಸ್ಟ್ರಿಯಲ್ ಪಾಲಿಸಿ ಎಲ್ಲ ಒಂದೇ ಅವರದು ಮೇಜರ್ ನನ್ನದು ಸ್ಮಾಲ್‌ಸ್ಕೇಲ್, ಇನ್‌ಸೆಂಟೀವ್ಸ್ ಅಲ್ಲ. ಅವರು ಮೀಡಿಯಂ ಅಂಡ್ ಮೇಜರ್ ಬಗ್ಗೆ ಹೇಳಿದ್ದಾರೆ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಏನಿವೆ...

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಡಸ್ಟ್ರಿಯಲ್ ಪಾಲಿಸಿ ಅಂದರೆ ಎಲ್ಲಾ ಇಂಡಸ್ಟ್ರಿಗಳಿಗೂ ಅನ್ವಯವಾಗಬೇಕು ಅದು ಮೇಜರ್ ಇರಬಹುದು, ಮೀಡಿಯಂ ಇರಬಹುದು ಅಥವಾ ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಇರಬಹುದು ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗೆ ಅವರು ಮಾಡಿಲ್ಲವೆಂದು ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸಣ್ಣ ಕೈಗಾರಿಕೆಗಳ ಬಗ್ಗೆ ತಾವು ಆಸಕ್ತಿ ವಹಿಸಿದ್ದೀರಿ. ಈಗತಾನೇ ಖಾತೆ ವಹಿಸಿಕೊಂಡಿದ್ದೀರಿ, ಸಂತೋಷ. ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಲಿಕ್ಕೆ ಅವಕಾಶ ಇದೆ. ಈಗಾಗಲೇ ಒಂದು ಸಾವಿರ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ನೀವು ವಿಶೇಷವಾಗಿ ಉತ್ತೇಜನ ಕೊಡತಕ್ಕ ಕಾರ್ಯಕ್ರಮವನ್ನು ಏನು ಇಟ್ಟುಕೊಂಡಿದ್ದೀರಿ ? ಈ ಬಗ್ಗೆ ಕಾನಡೆಯವರು ಕೂಡ ಕೇಳಿದ್ದಾರೆ, ಕೆಲವರು ವಿದ್ಯಾವಂತ ನಿರುದ್ಯೋಗಿಗಳೇನಿದ್ದಾರೆ ಅಂಥವರಿಗೆ ವಿಶೇಷವಾಗಿ ತಿಳಿವಳಿಕೆ ಕೊಟ್ಟು ತರಬೇತಿ ನೀಡಿ, ವರ್ಕಿಂಗ್ ಕ್ಯಾಪಿಟಲ್ ಕೊಡಬೇಕು ಇದರ ಬಗ್ಗೆ ಕಾರ್ಯಕ್ರಮ ಏನು ಇಟ್ಟುಕೊಂಡಿದ್ದೀರಿ ? ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಎಂದರೆ ೩೦ ಲಕ್ಷ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಇರಬೇಕು. ಆದ್ದರಿಂದ ವರ್ಕಿಂಗ್ ಕ್ಯಾಪಿಟಲ್ ಕೊಡುವ ಬಗ್ಗೆ ಏನು ಹೇಳುತ್ತೀರಿ ? ಬ್ಯಾಂಕಿನವರು ಕೊಡುತ್ತಿಲ್ಲ ತಾವು ಸಬ್ಸಿಡಿ ಕೊಡುತ್ತೀರಾ ? ಅಥವಾ ವರ್ಕಿಂಗ್ ಕ್ಯಾಪಿಟಲ್ ಗೋಸ್ಕರ ನೀವೇ ಹಣ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಅದನ್ನು ನಾನು ಹೇಳಲಾರೆ ಮುಂದೆ ಚರ್ಚೆ ಮಾಡಿದ ಮೇಲೆ ತೀರ್ಮಾನ ಕೈಗೊಳ್ಳಬಹುದು. ಈಗ ನಿಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಂಡು...

ಶ್ರೀ ಬಿ. ಬಸವಲಿಂಗಪ್ಪ.—ಚೀಟಿ ಬಂದ ತಕ್ಷಣ ಅದು ಹೋಯಿತು.

ಶ್ರೀ ಎಂ. ರಘುಪತಿ.—ಚೀಟಿ ಬಂದದ್ದು ಬೇರೆಯದರ ಬಗ್ಗೆ.

ಶ್ರೀ ಪಟವುಕ್ಕಿ ರತ್ನಾಕರ,—ಅನುಸೂಚಿತ ಜಾತಿ ಮತ್ತು ಪಂಗಡದವರ ಬಗ್ಗೆ ಮಂತ್ರಿಗಳು ವಿಶೇಷವಾದ ಕಾಳಜಿಯನ್ನು ತೋರಿಸಿದ್ದಾರೆ. ಯೋಜನೆಗಳ ಬಗ್ಗೆ ಹೇಳಿದ್ದಾರೆ. ಈ ಪಂಗಡಗಳಿಗೆ ಸಂಬಂಧಪಟ್ಟ ಹಾಗೆ ಪ್ರಾಜೆಕ್ಟ್ ರಿಪೋರ್ಟ್ ಮಾಡಿ ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ್ದು ಪ್ರೊಸೆಸ್ ಆಗಿ ಸರ್ಕಾರದಿಂದ ಮಂಜೂರಾಗಿ ಬರಬೇಕಾದರೆ ಒಂದು ವರ್ಷ ತೆಗೆದುಕೊಳ್ಳುತ್ತದೆ. ಆಗ ಯಂತ್ರಗಳ ಬೆಲೆ,

ಮೆಟೀರಿಯಲ್ ಕಾಸ್ಟ್. ರಾ ಮೆಟೀರಿಯಲ್ಸ್ ಕಾಸ್ಟ್ ಎಲ್ಲ ಜಾಸ್ತಿ ಆಗುತ್ತದೆ. ಈ ಡಿಫರೆನ್ಸ್ ಅಮೌಂಟನ್ನು ಸರ್ಕಾರ ಯಾವ ರೀತಿ ತುಂಬಿಕೊಡುತ್ತದೆ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಉತ್ತಮ ಸಲಹೆ ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ. ಸೆಲ್ಫ್ ಎಂಪ್ಲಾಯ ಮೆಂಟ್ ಪ್ರೊಗ್ರಾಂ ಬಗ್ಗೆ ಶ್ರೀಮತಿ ಬೇಗಂರವರು ವಿಶೇಷವಾಗಿ ಮಾತನಾಡಿದರು. ಈ ಯೋಜನೆಗಾಗಿ ಎಷ್ಟು ಹಣ ಖರ್ಚು ಮಾಡಿದ್ದೀರಿ ಮತ್ತು ಈ ಯೋಜನೆ ಅಡಿಯಲ್ಲಿ ಎಷ್ಟು ಮಂದಿ ನಿರುದ್ಯೋಗಿ ವಿದ್ಯಾವಂತರಿಗೆ ತರಬೇತಿ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ, ೧೯೮೩–೮೪ರಲ್ಲಿ ೧೨,೦೭೦ ಜನರಿಗೆ ತರಬೇತಿ ಕೊಡಲು ೧೯೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೪–೮೫ರಲ್ಲಿ ೧೨,೯೧೦ ಜನರಿಗೆ ೨,೩೭೫ ಲಕ್ಷ ರೂಪಾಯಿಗಳನ್ನು, ೮೫–೮೬ರಲ್ಲಿ ೧೨,೮೩೭ ಜನರಿಗೆ ೨,೫೦೬ ಲಕ್ಷ ರೂಪಾಯಿಗಳನ್ನು ೮೬–೮೭ರಲ್ಲಿ ೧೨,೧೦೦ ಜನರಿಗೆ ೨,೩೯೫ ಲಕ್ಷ ರೂಪಾಯಿಗಳನ್ನು ೮೭–೮೮ರಲ್ಲಿ ೬,೧೭೫ ಜನರಿಗೆ ೧,೨೪೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಲ್ಲಿ ಮಹಿಳೆಯರಿಗೆ ಎಷ್ಟು ಮಂದಿಗೆ ತರಬೇತಿ ಕೊಟ್ಟಿದ್ದೀರೆಂದು ಕೇಳಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ೪೦೪ ಮಂದಿ ಮಹಿಳೆಯರಿಗೆ ಮಾತ್ರ ತರಬೇತಿ ಕೊಟ್ಟಿದ್ದೇವೆ. ಒಟ್ಟು ರಾಜ್ಯದಲ್ಲಿ ಎಷ್ಟು ಮಂದಿ ಮಹಿಳೆಯರಿಗೆ ಈ ಯೋಜನೆಯಲ್ಲಿ ತರಬೇತಿ ಕೊಟ್ಟಿದ್ದೀರೆಂದರೆ, ಆ ಅಂಕಿ ಅಂಶ ಈಗ ಇಲ್ಲ ನಂತರ ಕಳುಹಿಸಿಕೊಡುತ್ತೇನೆ ಎಕ್ಸ್‌ಪರ್ಟ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಎಂಟೈರ್ ಸ್ಟೇಟಿಗೆ ಎಕ್ಸ್‌ಪರ್ಟ್ ಕಮಿಟಿ ಮಾಡುವುದರ ಬದಲು ಆಯಾಯ ವಿಭಾಗದಲ್ಲಿರುವ ಅಧಿಕಾರಿಗಳಿಗೆ ಯಾವ ರೀತಿ ಸ್ವಯಂ ಉದ್ಯೋಗ ಯೋಜನೆ ನಡೆಯಬೇಕು ಮತ್ತು ಅದರಿಂದ ಬಡವರಿಗೆ ಯಾವ ರೀತಿ ಸಹಾಯವಾಗಬೇಕೆಂಬ ಬಗ್ಗೆ ವರದಿ ಕೊಡಲು I.I.M.ರವರಿಗೆ ಒಂದು ರಿಪೋರ್ಟ್ ಕೊಡಿ ಎಂದು ಜವಾಬ್ದಾರಿ ವಹಿಸಿಕೊಟ್ಟಿದ್ದೇವೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ

ಶ್ರೀ ಕೆ. ಎಚ್. ಪಾಟೀಲ್.—ಎಕ್ಸ್‌ಪರ್ಟ್ ಕಮಿಟಿಗಿಂತ ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಕೋ-ಆಪರೇಟೀವ್ ಎಕ್ಸ್‌ಪರ್ಟ್ ಕಮಿಟಿ ಮಾಡಿ.

ಶ್ರೀ ಎಂ. ರಘುಪತಿ.—ಮಂಗಳೂರು ವಿಶ್ವವಿದ್ಯಾನಿಲಯ ಭಾಗದಲ್ಲಿ ಸೆಲ್ಫ್ ಎಂಪ್ಲಾಯ್ಮೆಂಟ್ ಸ್ಕೀಂ ಮಾಡಬೇಕೆಂದು ಹೇಳಿದ್ದಾರೆ. ನಿರುದ್ಯೋಗಿ ಪದವೀಧರರಿಗೆ ಇದನ್ನು ಮಾಡಬೇಕೆಂದು ಹೇಳಿದ್ದಾರೆ. ಬಿಜಾಪುರದಲ್ಲಿ ಡಿ.ಸಿ.ಎಸ್.ಎಸ್.ಐ. ಎಂದು ಸೆಂಟ್ರಲ್ ಗೌರ್ನಮೆಂಟ್ ಆರ್ಗನೈಸೇಷನ್ ಇನಿದ್ದು ಅದರ ಮೂಲಕ ಮಾಡುತ್ತಿದ್ದೇವೆ. ಕೋಲಾರದಲ್ಲಿ ಸಹ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನವರು ಈ ಕಾರ್ಯಕ್ರಮವನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ.

SMT. MUKTHARUNNISA.—He said 400 laides were trained in Mysore. I never asked about training, I asked how many ladies got money from the self-employment shcheme in 3 years. I want to now how many men (youths) and how many women got the money ?

ಶ್ರೀ ಎಂ, ರಘುಪತಿ.—ಅಧ್ಯಕ್ಷರೇ, ಮೈಸೂರು ಜಿಲ್ಲೆಯದು ಮಾತ್ರ ಹೇಳಬೇಕೆಂದರೆ ಮಹಿಳೆಯರಿಗೆ ೬೪ ಲಕ್ಷ ರೂಪಾಯಿ ಸಿಕ್ಕಿದೆ.

ಶ್ರೀಮತಿ ಮುಕ್ತರುನ್ನೀಸಾ.—ನಾನು ಎಷ್ಟು ಲಕ್ಷ ರೂಪಾಯಿ ಸಿಕ್ಕಿದೆ ಎಂದು ಕೇಳುತ್ತಿಲ್ಲ. ಎಷ್ಟು ಜನರಿಗೆ ಸಿಕ್ಕಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಎಂ. ರಘುಪತಿ.—೪೦೪ ಜನ ಎಂದು ಹೇಳಿದ್ದೇನೆ. Total ಈಗಾಗಲೇ ಹೇಳಿದ್ದೆ ಒಟ್ಟು ೫೦,೨೨೯ ಜನ.

ಶ್ರೀ ಮುಕ್ತರುನ್ನೀಸಾ.—ಬಹಳ ಅಪ್ಲಿಕೇಷನ್ಸ್ ರಿಜೆಕ್ಟ್ ಆಗಿದೆ ಸ್ವಾಮಿ. ಅದಕ್ಕೆ ಹೇಳುತ್ತಾ ಇದ್ದೇನೆ.

ಶ್ರೀ ಎಂ. ರಘುಪತಿ.—ರಿಜೆಕ್ಟ್ ಮಾಡಿದ್ದರೆ ಆ ರೀತಿ ಮಾಡಬೇಡಿ ಎಂದು ಆದೇಶ ಕೊಡುತ್ತೇನೆ. ಮಹಿಳೆಯರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಶ್ರೀಮತಿ ಮುಕ್ತರುನ್ನೀಸಾ.—ಮಹಿಳಾ ಎಂಟರ್‌ಪ್ರಿನರ್ಸ್‌ಗೆ ಏನು ಕನ್‌ಸೆಷನ್ ಕೊಡುತ್ತೀರಿ ? ಎಷ್ಟು ಮಹಿಳಾ ಎಂಟರ್‌ಪ್ರಿನರ್ಸ್‌ಗೆ ಕೊಡುತ್ತೀರಿ ?

ಉಪಾಧ್ಯಕ್ಷರು.—ಮುಕ್ತರುನ್ನೀಸಾ ಅವರೆ ನೀವು ಆಮೇಲೆ ಹೇಳಿ.

ಶ್ರೀ ಎಂ. ರಘುಪತಿ.—ಮಹಿಳೆಯರಿಗೆ ಕೊಡುವ ಬಗ್ಗೆ ಒಂದು ಪ್ಯಾಕೇಜ್ ಅನೌನ್ಸ್ ಮಾಡಿ ಎಂದು ಹೇಳಿದ್ದಾರೆ. ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಮಾನ್ಯ ಜೆ. ಎಚ್. ಪಟೇಲರು ಪ್ರಕಟಣೆ ಮಾಡಿದ್ದಾರೆ. ಅದರಡಿಯಲ್ಲಿ ಏನಾದರೂ ಸಹಾಯ ಮಾಡುವುದಕ್ಕೆ ಆಗುತ್ತದೇನೋ, ನೋಡೋಣ. ಇದಕ್ಕೆ ಲೆಜಿಸ್ಲೇಷನ್ ತರುತ್ತೇವೆ ಎಂದು ಬಜೆಟ್‌ನಲ್ಲಿ ಹೇಳಿದ್ದೀರಿ, ಆದರೆ ಏತಕ್ಕೆ ತರಲಿಲ್ಲ ಎಂದು ಮಾನ್ಯ ವೀರಪ್ಪ ಮೊಯಿಲಿಯವರು ಕೇಳಿದರು. ಇದೇ ಸೆಷನ್‌ನಲ್ಲಿ ಸದನದ ಎದುರುಗಡೆ ಮೂರು ತಿಂಗಳ ಒಳಗಡೆ ಅಂತಹ ಲೆಜಿಸ್ಲೇಷನ್ ತರುತ್ತೇವೆ. ಇಡೀ ಭಾರತ ದೇಶದಲ್ಲಿ ಎಲ್ಲೂ ಇಲ್ಲ, ಆ ರೀತಿಯ ಒಂದು ಲೆಜಿಸ್ಲೇಷನ್ ನಾವು ಕರ್ನಾಟಕ ರಾಜ್ಯದಲ್ಲಿ ತರುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲೂ ಇಲ್ಲದ್ದನ್ನು ತರುತ್ತಿದ್ದೀರಾ ?

ಶ್ರೀ ಎಂ. ರಘುಪತಿ.—ಲೆಜಿಸ್ಲೇಷನ್ ಎಲ್ಲೂ ಇಲ್ಲ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗೆ.

ಶ್ರೀ ಬಿ. ಬಸವಲಿಂಗಪ್ಪ.—ಇಂಡಸ್ಟ್ರಿಯಲ್ ಪಾಲಿಸಿ ಇದೆಯಲ್ಲ. Industrial policy of 1983 is there. It should be considtent with that.

SRI M. RAGHUPATHY.—Keeping in view the Industrial Policy announced by the Hon'ble Minister for Industries. we are going to frame the law.

SRI J. H. PATEL.—The Government of India has enancted a Statute to protect the interests of small scale industies exclusively on the small lines, we are doing it.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಂಡಿಯಾದಲ್ಲಿ ಎಲ್ಲೂ ಇಲ್ಲ ಎಂದು ಹೇಳುತ್ತೀರಲ್ಲ.

ಶ್ರೀ ಎಂ. ರಘುಪತಿ.—ಗೌರ್ನಮೆಂಟ್ ಆಫ್ ಇಂಡಿಯಾ ಗೈಡ್‌ಲೈನ್ಸ್ ಹಾಕಿದ್ದಾರೆ. ನಾನು ಹೇಳಿದ್ದು ರಾಜ್ಯಗಳ ಬಗ್ಗೆ ರಾಜ್ಯಗಳಲ್ಲಿ ಎಲ್ಲೂ ಇಲ್ಲ ಎಂದು ಹೇಳಿದೆ. ೧೦೦೦ ಕಾರ್ಖಾನೆಗಳನ್ನು ಮಾಡುತ್ತೇವೆ ಎಂದು ಹೇಳಿದ್ದಿರಿ, ಎಲ್ಲಿ ಮಾಡಿದ್ದೀರಿ ಎಂದು ಮೊಯಿಲಿಯವರು, ಬಸವಲಿಂಗಪ್ಪನವರು ಕೇಳಿದರು. ನಾವು ಇಂಡಸ್ಟ್ರಿಯಲ್ ಡೆವಲಪ್ಮೆಂಟ್ ಮತ್ತು ರೆಗ್ಯುಲೇಷನ್ ಆಕ್ಟ್ ಕೆಳಗೆ ೧೬ ಐಟಂಗಳನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಮ್ಯಾನುಫ್ಯಾಕ್ಚರ್ ಮಾಡುವುದಕ್ಕೆ ನಾವು ತೆಗೆದುಕೊಂಡಿದ್ದೇವೆ. ಆ ೧೬ ಐಟಂಗಳನ್ನು ಓದಬೇಕೆಂದರೆ ಓದುತ್ತೇನೆ. ೧೬ ಇಂಡಸ್ಟ್ರೀಸ್ ಏನಿದೆ ಅದನ್ನು ನಾವು ಅನೌನ್ಸ್ ಮಾಡಿದ್ದೇವೆ. ಖಾಸಗಿ ಮತ್ತು ಸರ್ಕಾರಿ ಎರಡೂ ಸೇರಿ ಇದಾಗಿದೆ. ೧೯೮೩-೮೪ ರಲ್ಲಿ ಟಾರ್ಗೆಟ್ ೧೨,೦೦೦ ಇದ್ದರೆ ೭,೫೨೯ ಯೂನಿಟ್‌ಗಳನ್ನು ಮಾಡಿದ್ದೇವೆ. ಮತ್ತೆ ೧೯೮೪-೮೫ ರಲ್ಲಿ ೧೨,೦೦೦ ಯೂನಿಟ್ ಟಾರ್ಗೆಟ್ ಇದ್ದರೆ. ೧೧,೭೦೬ ಯೂನಿಟ್‌ಗಳನ್ನು ಮಾಡಿದ್ದೇವೆ. ೧೯೮೫-೮೬ ರಲ್ಲಿ ೧೧,೬೨೪ ಯೂನಿಟ್‌ಗಳನ್ನು ಮಾಡಿದ್ದೇವೆ. ೧೯೮೬-೮೭ರಲ್ಲಿ ೧೧,೯೧೦ ಯೂನಿಟ್‌ಗಳನ್ನು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಹಿಂದಿನದೂ ಸೇರಿದೆಯಾ ಇದರಲ್ಲಿ ?

ಶ್ರೀ ಎಂ. ರಘುಪತಿ.—ಇಲ್ಲ. ಹೊಸದಾಗಿ ಪ್ರಾರಂಭಿಸಿರುವುದು ಹೇಳುತ್ತಿದ್ದೇನೆ.

೨.೦೦ ಪಿ.ಎಂ

ಇದರಲ್ಲಿ ಹಿಂದಿನದೂ ಯಾವುದು ಸೇರಿಲ್ಲ. ಎಲ್ಲ ಹೊಸದಾಗಿ ಪ್ರಾರಂಭ ಮಾಡಿರುವುದು. ೮೭-೮೮ರಲ್ಲಿ ೧೦೫೩೦ ಯೂನಿಟ್ಟುಗಳನ್ನು ಪ್ರಾರಂಭ ಮಾಡಿದ್ದೇವೆ. ಒಟ್ಟು ೫೨೪೯೦ ಯೂನಿಟ್ಟುಗಳು ಅಂದರೆ ಶೇಕಡ ೮೭ರಷ್ಟು ಸಾಧನೆ ಮಾಡಿದ್ದೇವೆ. ನನ್ನ ಹತ್ತಿರ ಜಿಲ್ಲಾವಾರು ಅಂಕಿ ಅಂಶಗಳು ಇವೆ. ಅದು ದೊಡ್ಡ ಪಟ್ಟಿ ಅದನ್ನು ಈ ಸಭೆಯ ಮುಂದೆ ಇಡುತ್ತೇನೆ. ಯಾರೂ ಅನ್ಯಮಾನ ಪಡಬೇಕಾಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಬ್ಬಿನ ರಸದ ಕಾರ್ಖಾನೆ ಇದರಲ್ಲಿ ಸೇರಿದೆ.

ಶ್ರೀ ಎಂ. ರಘುಪತಿ.—ಬೇಕಾದರೆ ಈ ೧೬ ಕಾರ್ಖಾನೆಗಳ ಪಟ್ಟಿಯನ್ನು ಬೇಕಾದರೆ ಓದು ಬಿಡುತ್ತೇನೆ. ಇವರು ಏತಕ್ಕೆ ಅನುಮಾನ ಪಡಬೇಕು. ಅದು ಈ ರೀತಿ ಇದೆ.

1 Food and Beverages ;

2 Textiles and Garments,

3 wood and wood products,

4 Printing and stationery,

5 Leather and leather products,

6 Rubber and Rubbber plastics,

7 Chemical and chemical productas

8 Glass and Ceremics

9 Metal and metal Products,

10 General Engineering & agro equipments,

11 Electrical & Electronics

15 Automobile, transport equipments

13 Non-ferrous alloyds,

14 Job works like repairs and service stations, other services and Miscellaneous.

ಇದನ್ನು ಕೇಂದ್ರ ಸರ್ಕಾರದ ಜೊತೆಯಲ್ಲಿ ಚರ್ಚೆ ಮಾಡಿ ಈ ಕಾರ್ಖಾನೆಗಳನ್ನು ಮಾಡಬೇಕು ಎಂಬ ಉದ್ದೇಶದಿಂದ ಮಾಡಿದ್ದೇವೆ. ಇದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಈ ಟೇಬಲ್ ಮುಂದೆ ಇಡುತ್ತೇನೆ. ಯಾರು ಅನುಮಾನ ಪಡಬೇಕಿಲ್ಲ. ನಾವು ಈ ಸರ್ಕಾರ ಏನು ನೀತಿಯನ್ನು ಪ್ರಕಟ ಮಾಡಿದ್ದೇವೊ ಅದರಂತೆ ನಡೆದುಕೊಂಡಿದ್ದೇವೆ. ೬೦ ಸಾವಿರ ಯೂನಿಟ್ಟುಗಳನ್ನು ಎನರ್ಜೈಸ್ ಮಾಡಿದ್ದೇವೆ. ೫೨,೪೮೮ ಯೂನಿಟ್ಟುಗಳಿಗೆ ವಿದ್ಯುತ್ ಒದಗಿಸಿದ್ದೇವೆ. ಪವರ್ ಎಷ್ಟು ಕೊಟ್ಟಿದ್ದೇವೆಂಬುದರ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಬರೇ ಕನೆಕ್ಷನ್ ಕೊಡುವವರು.

ಶ್ರೀ ಎಂ. ರಘುಪತಿ.—ನಾವು ಕನೆಕ್ಷನ್ ತೆಗೆದುಕೊಳ್ಳುವವರು ಕೊಡುವವರು ಇಲ್ಲ. ನಮ್ಮ ಸರ್ಕಾರ ಏನು ನೀತಿಯನ್ನು ಘೋಷಣೆ ಮಾಡಿದ್ದೇವೆ ಆ ನೀತಿಗೆ ಅನುಗುಣವಾಗಿ ನಾವು ಕೆಲಸ ಮಾಡಿಕೊಂಡು ಬಂದಿದ್ದೇವೆಯೇ ಹೊರತು ನಾವು ಏನು ಹಳಿ ಬಿಟ್ಟು ಹೋಗಿಲ್ಲ. ಇದರ ಬಗ್ಗೆ ಯಾವುದಾದರೂ ಅನುಮಾನ ಇದ್ದರೆ ಆ ಅನುಮಾನಗಳನ್ನು ಕಿತ್ತು ಹಾಕಿಕೊಳ್ಳಬೇಕೆಂದು ಅವರಲ್ಲಿ ವಿಶೇಷವಾಗಿ ಶ್ರೀ ಬಸವಲಿಂಗಪ್ಪನವರಿಗೆ ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಬೊಮ್ಮಾಯಿಯವರು ೬೦ ಸಾವಿರ ಯೂನಿಟ್ಟುಗಳನ್ನು ನಾವು ೫ ವರ್ಷದಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಅಂದರೆ ತಿಂಗಳಿಗೆ ಒಂದು ಸಾವಿರ ಈಗ ೬೦ ಸಾವಿರಕ್ಕೆ ಬದಲಾಗಿ ೭೦ ಸಾವಿರ ಆಗುತ್ತದೆ. ಇದನ್ನು ನಾನು ನಂಬುವುದಿಲ್ಲ. ಅವರು ಅಂಕಿ ಅಂಶಗಳನ್ನು ಕೊಟ್ಟಿದ್ದಾಗ ಇದರ ಬಗ್ಗೆ ನನಗೆ ಅನುಮಾನ ಇದೆ. ನೀವು ಯಾವ ಯೂನಿಟ್ಟಿಗೆ ಹೋಗಿದ್ದೀರಿ? ಈಗ ಈ ಸದನದ ಸಮಿತಿಯನ್ನು ನೇಮಿಸಿ ನಾವು ಇನ್‌ಸ್ಪೆಕ್ಷನ್ ಮಾಡುತ್ತೇವೆ. ಹಾಗೂ ೬೦ ಸಾವಿರ ಯೂನಿಟ್ಟುಗಳು ಇದೆಯೋ ಇಲ್ಲವೋ ಎಂಬುದನ್ನು ನೋಡುತ್ತೇವೆ.

ಶ್ರೀ ಜೆ.ಹೆಚ್. ಪಟೇಲ.—L.T.consumres ಸಣ್ಣಪುಟ್ಟ ಯಂತ್ರೋಪಕರಣಗಳನ್ನು ಇಟ್ಟುಕೊಂಡಿರುವವರು ಕಾಫಿ ಪುಡಿ ಮಾರುವವರು ಅಂತಹವರಿಗೆ ಕೊಟ್ಟಿರುವುದು ೧೨೦೦೭ ಕನೆಕ್ಷನ್ ಇದು ಈ ಕಬ್ಬಿನ ಹಾಲು ತಿರುವಲು ಲೋನ್ ಕೊಟ್ಟಿರುವುದು ರುತ್ತದೆ. ಅದು ಇಂಡಸ್ಟ್ರೀ ಅಲ್ಲವೇ ನಾವು

ಹೇಳಿದ್ದು, ಸಿಮೆಂಟ್ ಫ್ಯಾಕ್ಟರಿ ಅಲ್ಲ. ಒಬ್ಬ ಮನುಷ್ಯನಿಗೆ ಬದುಕಲು ಹಾಗೂ ಜೀವನ ಮಾಡಲು ಒಂದು ಉದ್ಯೋಗಬೇಕು ಆ ಉದ್ಯೋಗದ ಬಗ್ಗೆ ನಾವುಹೇಳಿರುವುದು,

ಶ್ರೀ ಎಂ. ರಘುಪತಿ.—ಇದಕ್ಕಿಂತ ಹೆಚ್ಚಿನ ವ್ಯಾಖ್ಯಾನಬೇಕಿಲ್ಲವೆಂದು ತಿಳಿಯುತ್ತೇನೆ. ಶ್ರೀ ಪಟೇಲರು ಏನು ಹೇಳಿದ್ದಾರೆ ಅದು ಸಮಂಜಸವಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ೬೦ ಸಾವಿರ ಯೂನಿಟ್ಟುಗಳ ಹೆಸರುಗಳು ಬೇಕು, ಯಾರು ಯಾರಿಗೆ ಕೊಟ್ಟಿದ್ದೀರಿ ಎಂಬುದರ ಬಗ್ಗೆ ದಯ ಮಾಡಿ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡಿ, ಅದನ್ನು ನೋಡಿ ನಿಮಗೆ ಶಹಭಾಷಗಿರಿ ಕೊಡುತ್ತೇವೆ.

ಶ್ರೀ ಎಂ. ರಘುಪತಿ.—ಜಿಲ್ಲಾವಾರು ಮತ್ತು ಇಯರ್‌ವೈಸ್ ಅಂಕಿ ಅಂಶಗಳನ್ನು ಮಾನ್ಯ ಬಸವಲಿಂಗಪ್ಪನವರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ಜನ ಪರಿಶಿಷ್ಟ ಜಾತಿ ಪಂಗಡದವರಿಗೆಕೊಟ್ಟಿದ್ದೀರಿ, ಅದನ್ನು ಕೊಡಿ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಖಾದಿ ಬಗ್ಗೆ ನಂಜಯ್ಯನಮಠ್ ಅವರು ವಿಶೇಷವಾದ ಆಸಕ್ತಿಯನ್ನು ವಹಿಸಿ ಮಾತನಾಡಿದ್ದಾರೆ ಮಾನ್ಯ ಸದಸ್ಯರು ಹೇಳಿದ ವಾದವನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾ, ಮುಂದೆ ಆಸ್ಪತ್ರೆಗಳಿಗೆ ಬೇಕಾಗಿರತಕ್ಕ ಬೆಡ್‌ಶೀಟ್ಸ್, ಬಟ್ಟೆ ಇತ್ಯಾದಿಗಳನ್ನು ಖರೀದಿ ಮಾಡುವಾಗ ಖಾದಿ ಬಟ್ಟೆಯನ್ನೆ ಖರೀದಿ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಖಾದಿಯನ್ನು ಹಾಕುವುದನ್ನು ನಾನು ಏಕೆ ಬಿಟ್ಟೆ ಎಂಬುದು ಬೇರೆ ಪ್ರಶ್ನೆ.

ಶ್ರೀ ಎಂ.ಎಂ. ಖರ್ಗೆ.—ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ಖಾದಿ ಹಾಕುವಾಗ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಏಕೆ ಹಾಕಬಾರದು?

ಶ್ರೀ ಕೆ. ಎಚ್. ಪಾಟೀಲ್.—ಇವರು ಖಾದಿ ಬೋರ್ಡ್‌ಗೆ ಕೂಡಾ ಮಿನಿಸ್ಟರ್ ಇದ್ದಾರೆ. ಖಾದಿಯಲ್ಲಿ ವಿಶ್ವಾಸ ಇರುವವರು, ಖಾದಿ ಧರಿಸುವವರು ಖಾದಿ ಬೋರ್ಡ್‌ಗೆ ಛೇರ್ಮನ್ ಮಾಡುವ ಸಂದರ್ಭದಲ್ಲಿ ಇದೇ ಖಾತೆ ಹೊಂದಿರುವ ಮಿನಿಸ್ಟರ್ ಏಕೆ ಖಾದಿ ಧರಿಸುವುದಿಲ್ಲ ?

ಶ್ರೀ ಎಂ. ರಘುಪತಿ.—ಮುಂದೆ ವಿಶೇಷ ಸಂದರ್ಭ ಬಂದಾಗ ನಾನು ಖಾದಿಯನ್ನು ಧರಿಸುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಖಾದಿ ಬೋರ್ಡ್‌ಗೆ ಹೋಗುವಾಗ ಹಾಕಿಕೊಂಡು ಹೋಗಿ.

ಶ್ರೀ ಎಂ. ರಘುಪತಿ.—ಇನ್ನು ಖಾದಿ ರಿಬೇಟ್ ಬಗ್ಗೆ ಹೇಳಿದ್ದಾರೆ. ಖಾದಿ ರಿಬೇಟ್ ಹಣವನ್ನು ರಿಲೀಸ್ ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ ಇವತ್ತು ಖಾದಿ ಬಟ್ಟೆ ಮೇಲೆ ಸೇಲ್ಸ್ ಟ್ಯಾಕ್ಸ್ ವನ್ನು ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ. ಇದು ಖಾದಿ ಬಟ್ಟೆ ಮೇಲೆ ಮಾತ್ರ ಅನ್ವಯಿಸುತ್ತದೆ. ಖಾದಿ ಅಲ್ಲದಿರುವ ಪ್ರಾಡಕ್ಟ್ಸ್‌ಗೆ ಇದು ಅನ್ವಯಿಸ ವುದಿಲ್ಲ. ಇದನ್ನು ಕಾನೂನು ಬದ್ಧವಾಗಿ ಮಾಡಬೇಕಾಗಿದೆ. ಇನ್ನು ಮುಂದೆ ಜೈಲ್ ಸ್ಟಾಫ್‌ಗೆ ಪಾಲಿಯಸ್ಟರ್ ಖಾದಿ ಬಟ್ಟೆಯನ್ನೇ ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಹಂತಹಂತವಾಗಿ ಈ ಪಾಲಿಯಸ್ಟರ್ ಖಾದಿಯನ್ನು ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳುತ್ತಾ...

ಶ್ರೀ ಬಿ. ಬಸವಲಿಂಗಪ್ಪ.—ಇದು ಸಚಿವ ಸಂಪುಟದ ತೀರ್ಮಾನವೇ ?

ಶ್ರೀ ಎಂ. ರಘುಪತಿ.—ಹೌದು. ಇನ್ನು ಲಿಡ್ಕರ್ ಬಗ್ಗೆ ಯಾರೂ ಹೆಚ್ಚಿಗೆ ಮಾತನಾಡಿಲ್ಲ. ಈ ವರ್ಷ ವೇ ಸೈಡ್ ಕ್ಯಾಬಿನ್‌ನನ್ನು ಶುರು ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಮತ್ತೆ ಟ್ರೈನಿಂಗ್ ಕೊಡುವವರ ಸಂಖ್ಯೆಯನ್ನು ೧೫೦ಕ್ಕೆ ಏರಿಸುತ್ತಿದ್ದೇವೆ, ಇಷ್ಟು ಜನರಿಗೆ ಹೆಚ್ಚಿನ ಟ್ರೈನಿಂಗ್ ಕೊಡಬೇಕೆಂದು ಹೇಳಿ...

ಶ್ರೀ ಬಿ. ಬಸವಲಿಂಗಪ್ಪ.— ಹೊಸದಾಗಿ ಏನು ಏನು ಮಾಡುತ್ತೀರೋ ಹೇಳಿ.

ಶ್ರೀ ಎಂ. ರಘುಪತಿ.—ಇನ್ನು ಮುಂದೆ ಹೆಚ್ಚು ಹೆಚ್ಚಾಗಿ ಸಾರಿಗೆ ಸಂಸ್ಥೆಯವರು, ಅಬ್ಕಾರಿ ಇಲಾಖೆಯವರು ತಮ್ಮ ಡ್ರೈವರ್‌ಗಳಿಗೆ ಹಾಗೂ ಇತರ ಸಿಬ್ಬಂದಿಗಳಿಗೆ ಲಿಡ್ಕರ್ ನಿಂದಲೇ ಅವರ ಪ್ರಾಡಕ್ಟ್ಸ್ ತೆಗೆದುಕೊಳ್ಳಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಇನ್ನು ಕಾಯಿರ್ ಡೆವಲಪ್

ಮೆಂಟ್ ಕಾರ್ಪೊರೇಷನ್ ಲುಕ್ಸಾನು ಇಲ್ಲದಹಾಗೆ ನಡೆಯಬೇಕೆಂಬುದು ಎಲ್ಲರ ಆಸೆ. ಕಾಯಿರ್ ಬೋರ್ಡ್ ಅಭಿವೃದ್ಧಿ ಬಗ್ಗೆ ಹೆಚ್ಚಿನ ಪ್ರಯತ್ನಗಳು ಆಗಿವೆ. ೩೦ ರೋಪ್ ಮೇಕಿಂಗ್ ಯೂನಿಟ್ಸ್, ೧೫೦ ಕಾಯಿರ್ ಮ್ಯಾಟ್ ಮ್ಯಾನುಫ್ಯಾಕ್ಚರಿಂಗ್ ಯೂನಿಟ್ಸ್, ಹಾಗೂ ೭೫ ಕಾಯಿರ್ ಮ್ಯಾಟಿಂಗ್ ಯೂನಿಟ್‌ಗಳನ್ನು ಫೇಸ್ಡ್ ಮ್ಯಾನರ್‌ನಲ್ಲಿ ಪ್ರಾರಂಭ ಮಾಡುತ್ತೇವೆ. ಈ ವರ್ಷ ಪ್ರಾರಂಭ ಮಾಡಿ ಸುಮಾರು ೨೦ ಕೋಟಿ ರೂಪಾಯಿಯಷ್ಟು ಕಾರ್ಯಕ್ರಮ ಹಾಕಿದ್ದೇವೆ. ಶೆಡ್ಯೂಲ್ಡ್ ಬ್ಯಾಂಕ್‌ಗಳ ಮುಖಾಂತರ ಸಾಲವನ್ನು ಪಡೆದುಕೊಂಡು ಅದರ ಮುಖಾಂತರ ಮಾಡಬೇಕಾಗಿದೆ. ಇನ್ನು ಮುಂದೆ ಸರ್ಕಾರಕ್ಕೆ ಬೇಕಾಗುವ ಕಾರ್ಪೆಟ್ಸ್ ಕಾಯಿರ್ ಬೋರ್ಡ್ ಮೂಲಕವೇ ಖರೀದಿ ಮಾಡಬೇಕೆಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಮತ್ತೆ ಟ್ರೆಡಿಷನಲ್ ಆರ್ಟಿಸಾನ್ಸ್ ಇದ್ದಾರೆ ಅವರಿಗೆ ಕಾಮನ್ ಇಂಡಸ್ಟ್ರಿಯಲ್ ಶೆಡ್‌ಗಳನ್ನು ಕಟ್ಟಿಸುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಈಗಾಗಲೇ ೧೭೫ ಕಾಮನ್ –ಶೆಡ್‌ಗಳು ಪೂರ್ಣಗೊಂಡಿದ್ದು ಇನ್ನೂ ೫೦ ಶೆಡ್‌ಗಳನ್ನು ಕಟ್ಟಿ ತಾಲ್ಲೂಕುಮಟ್ಟದಲ್ಲಿ ಯಾರು ಹಿಂದುಳಿದ ವರ್ಗದ ಕಮ್ಮಾರರು, ಕುಂಬಾರರು ಮುಂತಾದ ಟ್ರೆಡಿಷನಲ್ ಆರ್ಟಿಸಾನ್ಸ್ ಇದ್ದಾರೆ ಅಂತಹವರಿಗೆ ಕಾಮನ್ ಶೆಡ್ಸ್ ಮಾಡುವ ಕಾರ್ಯಕ್ರಮವನ್ನು ಎಲ್ಲಾ ತಾಲ್ಲೂಕುಗಳಲ್ಲಿ ಹಾಕಿಕೊಂಡಿದ್ದೇವೆ ಎಂದು ನಾನು ಮೊದಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ಹೇಳುತ್ತಾ ಈ ಖಾತೆಯನ್ನು ಈಗತಾನೇ ವಹಿಸಿಕೊಂಡಿದ್ದೇನೆ. ಏನು ನಷ್ಟ ಜಾಸ್ತಿಯಾಗಿದೆ, ಒಂದೆರಡು ಸಂಸ್ಥೆಗಳಲ್ಲಿ ಆಗಿರುವ ನಷ್ಟವನ್ನು ತಪ್ಪಿಸಲು ಏನಾದರೂ ಕಷ್ಟಬಿದ್ದು ನಾನು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಯಾವ ತರಹ ಅವುಗಳನ್ನು ಒಳ್ಳೆಯ ಸಂಸ್ಥೆಗಳನ್ನಾಗಿ ಪರಿವರ್ತನೆ ಮಾಡಬಹುದು, ಲಾಭದಾಯಕ ಸಂಸ್ಥೆಗಳನ್ನಾಗಿ ಮಾಡಬಹುದು ಎಂದು ಯೋಚಿಸುತ್ತೇನೆ. ಏಕೆಂದರೆ ಎಂಪ್ಲಾಯ್‌ಮೆಂಟ್ ಜನರೇಷನ್ ಹೆಚ್ಚು ಆಗಬೇಕು, ನಿರುದ್ಯೋಗಿ ಯುವಕರು ಏನಿದ್ದಾರೆ ಅವರಿಗೆ ಉದ್ಯೋಗ ಸಿಗಬೇಕು. ಏಕೆಂದರೆ ಸಣ್ಣ ಪ್ರಮಾಣದ ಕೈಗಾರಿಕೆಗಳು ಹೆಚ್ಚಾಗಬೇಕಾಗಿದೆ ಈ ದೇಶದಲ್ಲಿ ಮೂರುವರೆ ಕೋಟಿ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಘೋಷಣೆ ಮಾಡಿರ ತಕ್ಕಂಥದ್ದು ಬಹಳ ಒಳ್ಳೆಯದು. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಈ ದೇಶದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುತ್ತೇವೆ ಎಂದು ನೀವು ಬಂದಾಗ ಅದನ್ನೇ ಹೇಳಿದಿರಿ. ಮನೆಗೊಂದು ಉದ್ಯೋಗ ಕೊಡುತ್ತೇವೆ ಎಂದು ಹೇಳಿದಿರಿ. ಯಾವ ಮನೆಯಲ್ಲಿ ಕೊಟ್ಟಿರಿ ಎಂದು ಹೇಳಲಿಲ್ಲ. ಈಗ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹತ್ತು ಲಕ್ಷ ಜನ ತಮ್ಮ ಹೆಸರುಗಳನ್ನು ನೊಂದಾಯಿಸಿಕೊಂಡಿದ್ದಾರೆ. ನಾನು ಮಾತನಾಡುವಾಗ ಹೇಳಿದ್ದೆ. ಇವರಿಗೆ ಉದ್ಯೋಗ ಕೊಡುವ ಬಗ್ಗೆ ಏನು ಯೋಚನೆ ಮಾಡಿದ್ದೀರಿ? ನೀವು ಘೋಷಣೆ ಮಾಡುವಾಗ ನಿರ್ದಿಷ್ಟವಾದಂಥ ಘೋಷಣೆ, ಮಾಡಬೇಕು. ಈ ವರ್ಷದಲ್ಲಿ ಒಂದು ಲಕ್ಷ ಜನಕ್ಕಾದರೂ ಉದ್ಯೋಗ ಕೊಡುತ್ತೇವೆ ಎಂದು ಹೇಳಿ.

ಶ್ರೀ ಎಂ. ರಘುಪತಿ.—ನಾನು ಯಾವುದೂ ಘೋಷಣೆ ಮಾಡಿಲ್ಲ. ನಾನು ಹೇಳಿದ್ದು ಇಷ್ಟೆ. ಉದ್ಯೋಗ ಎಂದರೆ ಸರ್ಕಾರಿ ವಲಯದಲ್ಲಿ ಮಾತ್ರ ಕೊಡುವುದಲ್ಲ ಎಲ್ಲಾ ವಲಯಗಳಲ್ಲಿ. ಕೈಗಾರಿಕೆಗಳ ಮೂಲಕ, ಪ್ರೈವೇಟ್ ಎಂಟರ್‌ಪ್ರಿನ್ಯೂಯರ್ ಮೂಲಕ ಮತ್ತು ಕೈಮಗ್ಗದ ಅಭಿವೃದ್ಧಿ ಮೂಲಕ ಈ ಒಂದು ಕಾರ್ಯಕ್ರಮದಲ್ಲಿ ನಾವು ಹೆಚ್ಚಿನ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಒಂದು ಕಾರ್ಯಕ್ರಮ ಹಾಕಿಕೊಂಡು ವಿದ್ಯಾವಂತ ನಿರುದ್ಯೋಗಿಗಳಿಗೆ ಸಹಾಯಕವಾಗುವ ರೀತಿಯಲ್ಲಿ ಈ ಇಲಾಖೆ ಕೆಲಸ ಮಾಡುತ್ತಿದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ಮತ್ತು ಮಾನ್ಯ ಸದಸ್ಯರುಗಳಿಗೆ ವಂದಿಸುತ್ತಾ ನನ್ನ ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳಿಗೆ ಮಂಜೂರಾತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಈಗ ಈ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದರ ಚಟುವಟಿಕೆಗಳ ಬಗ್ಗೆ ಹೇಳುತ್ತಾ ಕೇಂದ್ರದ ಜವಳಿ ನೀತಿಯಿಂದ ನಷ್ಟವಾಯಿತು ಎಂದು ಮಾನ್ಯ ಮಂತ್ರಿಗಳು ಹೇಳಿಬಿಟ್ಟರು. ಈಗ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಬಗ್ಗೆ ಕೇಂದ್ರಸರ್ಕಾರ ವಿಶೇಷವಾದಂಥ ಅನುದಾನದ ವಿಷಯವಾಗಿ ಕಾರ್ಯಕ್ರಮದ ಘೋಷಣೆಯನ್ನು ಮಾಡಿದೆ ಇದಕ್ಕೆ ಅನುಸಾರವಾಗಿ ತಾವು ರಾಜ್ಯಸರ್ಕಾರ ಏನು ಕಾರ್ಯಕ್ರಮ ರೂಪಿಸಿದ್ದೀರಿ? ಅದರ ವಿಚಾರ, ಕಾರ್ಯಕ್ರಮದ ರೂಪರೇಷೆಗಳು ಇವುಗಳ ಬಗ್ಗೆ ಹೇಳಿಕೆಯನ್ನು ತಾವು ಕೊಡುತ್ತೀರಿ ಎಂದು ನಾವು ನಿರೀಕ್ಷೆ ಮಾಡಿದ್ದೆ. ಆದರೆ ನೀವು ಸ್ಟೇಟ್‌ಮೆಂಟ್ ಕೊಟ್ಟಿರಿ

ಕೇಂದ್ರದ ಜವಳಿ ನೀತಿಯಿಂದಾಗಿ ನಷ್ಟವಾಗಿದೆ ಎಂದು. ಕರ್ನಾಟಕ ರಾಜ್ಯದಲ್ಲಿ ನೀವು ಏನು ಮಾಡಿದ್ದೀರಿ? ನಮ್ಮ ಸರ್ಕಾರ ಇರುವಾಗ ಡಚ್ ಅಸಿಸ್ಟೆಂಟ್ ಸ್ಕೀಮ್‌ನಲ್ಲಿ ಮನೆಗಳನ್ನು ತೆಗೆದು ಕೊಡು ಬಂದೆವು, ಬೇರೆ ಬೇರೆ ಶೆಡ್‌ಗಳ ಪ್ರೋಗ್ರಾಮ್ ಆಯಿತು. ಕೆ. ಎಚ್. ಡಿ. ಸಿ. ಯಿಂದ ಹ್ಯಾಂಡ್‌ಲೂಮ್ ವೀವರ್ಸ್‌ಗೆ ಮನೆ ಮತ್ತು ವರ್ಕ್‌ಶಾಪ್ ಆಯಿತು. ಹ್ಯಾಂಡಿಕ್ರಾಫ್ಟ್ಸ್‌ನಲ್ಲಿ ಆರ್ಟಿಸಾನ್ಸ್‌ಗೆ ಕೆಲವು ಕಡೆಗಳಲ್ಲಿ ಮನೆಗಳನ್ನು ತೆಗೆದುಕೊಂಡೆವು That was the first phase of the programme. ಇನ್ನೂ ಅನೇಕ ಹ್ಯಾಂಡ್‌ಲೂಮ್ ವೀವರ್ಸ್‌ಗೆ ೪ ಪರ್ಸೆಂಟ್ ಲೋನ್ ಕೊಟ್ಟು ಡಚ್ ಸ್ಕೀಮ್‌ನಲ್ಲಿ ಮಾಡುವುದಕ್ಕೆ ಸಾಧ್ಯವಿದೆ. They are prepared to assist. ಈ ಬಗ್ಗೆ ನಿಮ್ಮ ಕಾರ್ಯಕ್ರಮ ಏನು? ಏಳು ವರ್ಷಕ್ಕಿಂತಲೂ ಜಾಸ್ತಿಯಾಯಿತು. ಫಸ್ಟ್ ಫೇಸ್ ಆಗಿದೆ. ಇದುವರೆಗೂ ಎರಡನೇ ಫೇಸನ್ನು ಡಚ್‌ನವರ ಹತ್ತಿರ ಮಾತನಾಡಿ ಏಕೆ ರೂಪಿಸಲಿಲ್ಲ? ಇದು ಬಹಳ ಮುಖ್ಯವಾದುದು. ನಿಮ್ಮ ಇಲಾಖೆಯಲ್ಲಿ ಇದು ಮುಖ್ಯ ಘೋಷಣೆ ಆಗಬೇಕು. ಇದರ ಬಗ್ಗೆ ಪೂರ್ತಿ ಮೌನ ಆಗಿದ್ದೀರಿ. ಶಿವರಾಮನ್ ಕಮಿಟಿ ಬಗ್ಗೆ ಮಾತನಾಡುತ್ತಾ ನಾನು ಹೇಳಿದ್ದೆ. ಐ. ಹೆಚ್. ಡಿ ಬಿ ಕಾರ್ಯಕ್ರಮ ಪ್ರಾರಂಭವಾಗಿದೆ. ಇದನ್ನು ಮಾಡಿದ್ದು ಈ ಹ್ಯಾಂಡ್‌ಲೂಮ್ ವರ್ಕರ್ಸನ್ನು ವೇಜ್ ಅರ್ನರ್ಸ್‌ರನ್ನಾಗಿ ಮಾಡುವುದಕ್ಕೆ ಅಲ್ಲ. ಅವರನ್ನು ಸೆಲ್ಫ್ ಕಾನ್ಫಿಡೆಂಟ್ ಎಂಟರ್ ಪ್ರಿನಿಯರಾಗಿ ಮಾಡಬೇಕೆಂಬ ಉದ್ದೇಶದಿಂದಲೇ ಈ ಕಾರ್ಯಕ್ರಮ ಮಾಡಿದ್ದು. This Integrated Handloom Development Programme for weavers has become a wage earning programme. You have reduced them to wage-earners. You should make them self confident entrepreneurs.

ಶಿವರಾಮನ್ ಕಮಿಟಿಯವರು ಏನು ಹೇಳಿದ್ದಾರೆ, ಇದನ್ನು ಆಪರೇಟಿವ್ ಸೆಕ್ಟರ್‌ನಲ್ಲಿ ತೆಗೆದು ಕೊಂಡು, IHDP concept ನಲ್ಲಿ ನೀವು ಏಕೆ ಮಾಡಬಾರದು ? ಅನೇಕ ಮಿಲ್ಕ್ ಪ್ರೊಡ್ಯೂಸಿಂಗ್ ಕೋ-ಆಪರೇಟಿವ್ ಸೊಸೈಟಿಗಳು ಯಶಸ್ವಿಯಾಗಿ ನಡೆಯುತ್ತಿವೆ. ಅದೇ ಪ್ರಕಾರ ತಮಗೂ ಆಸಕ್ತಿ ಬೇಕು, ಸರ್ಕಾರ ಈ ಬಗ್ಗೆ ಸೇಮ್ ಫಿಲಾಸಫಿ ಕಟ್ಟಿಕೊಂಡು ಏಕೆ ಮಾಡಬಾರದು ? ಈ ಬಗ್ಗೆ ಏನು ಕಾರ್ಯಕ್ರಮ ಮಾಡಿದ್ದೀರಿ. ಒಂದು ಹೆಜ್ಜೆ ಕೂಡ ಮುಂದೆ ಇಟ್ಟಿಲ್ಲವೆಂದು ಹೇಳಬೇಕಾಗುತ್ತದೆ. Higher purchase scheme or Own your Own Shed scheme ಇದಕ್ಕೆಲ್ಲಾ ಒಂದು ಸರ್ಕಾರಿ ಆಜ್ಞೆ ಇಷ್ಯೂ ಮಾಡಿದ್ದೀರಿ. ಆ ಮೇಲೆ ಬಿಟ್ಟು ಬಿಟ್ಟಿರಿ. ಈಗ ಇನ್ನೊಂದು ಸ್ಕೀಮ್ ಇಂಟ್ರಡ್ಯೂಸ್ ಮಾಡಿದ್ದೀರಿ. ದುಬಾರಿಯಾಗಿದೆ, Nobody is prepared for it. ಇದರ ಬಗ್ಗೆ ಈಗಾಗಲೇ ಪೀಣ್ಯ ಇಂಡಸ್ಟ್ರೀಸ್ ಎಸ್ಟೇಟ್ ಅಸೋಸಿಯೇಷನ್‌ನವರು ಒಂದು ಸಲಹೆ ಕೊಟ್ಟಿದ್ದಾರೆ, ಇದರ ಬಗ್ಗೆ ೨-೩ ವರ್ಷದಿಂದ ತಾವು ನಿರ್ಣಯ ತೆಗೆದುಕೊಂಡಿಲ್ಲ. ಬಹು ಮುಖ್ಯವಾದ ವಿಚಾರದ ಬಗ್ಗೆ ನಿರ್ಣಯ ತೆಗೆದುಕೊಂಡಿಲ್ಲ. ಈ ರೀತಿ ನೀವು ಮುಖ್ಯವಾದ ನಿರ್ಣಯವನ್ನೇ ತೆಗೆದು ಕೊಳ್ಳದೇ ಹೋದರೆ ಸಣ್ಣ ಕೈಗಾರಿಕೆಗಳು ಹೇಗೆ ಮುಂದುವರಿಯಬೇಕು. ಈಗಾಗಲೇ ತಾವು ಹೇಳಿದ ಪ್ರಕಾರ, ತಾಲ್ಲೂಕು ಮಟ್ಟದಲ್ಲಿ ಇಂಡಸ್ಟ್ರಿಯಲ್ ಛಡ್‌ಗಳನ್ನು ಹಾಕಿದ್ದೀರಿ. ತಿಂಗಳಿಗೆ ೩-೪ ಸಾವಿರ ಬಾಡಿಗೆ ಕೊಟ್ಟು ಯಾರು ಕೈಗಾರಿಕೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು rationalise ಮಾಡಿಕೊಂಡು, ನಿಜವಾಗಿಯೂ, ಹಳ್ಳಿ ಪ್ರದೇಶದಲ್ಲಿ ತಾಲ್ಲೂಕು ಮಟ್ಟದಲ್ಲಿ ಕೈಗಾರಿಕೆ ಮಾಡುವ ಹಾಗೆ ಪುನರ್ ಚಿಂತನೆ ಮಾಡಬೇಕು. ರೆಂಟ್ ಸಬ್ಸಿಡೈಸ್ಡ್ ಮಾಡಿಕೊಂಡು, ಬೆಂಗಳೂರಿನಲ್ಲಿ ಇದ್ದ ಹಾಗೆ, ತಾಲ್ಲೂಕು ಮಟ್ಟದಲ್ಲಿ ಮಾಡಿಕೊಂಡು ಹೋದರೆ ಯಾರೂ ಕೈಗಾರಿಕೆ ಮಾಡುವುದಕ್ಕಾಗುವುದಿಲ್ಲ. ಇದನ್ನು ಆಲೋಚನೆ ಮಾಡಿ ನಿರುದ್ಯೋಗ ನಿವಾರಣೆ ಬಗ್ಗೆ ಕೇಂದ್ರ ಸರ್ಕಾರದ ಸೆಲ್ಫ್ ಎಂಪ್ಲಾಯ್ ಮೆಂಟ್ ಪ್ರೋಗ್ರಾಂ ಇಂಟ್ರಡ್ಯೂಸ್ ಮಾಡಿದೆ. ಕೈಗಾರಿಕೆ ಬೆಳೆಯಬೇಕು, ಮತ್ತೆ ಲಾಭದಾಯಕವಾದ ಉದ್ಯಮವನ್ನು ಯುವಕ ಯುವತಿಯವರು ಮಾಡಬೇಕು ಎಂದು. ಬ್ರಾಂದಿ ಷಾಪ್ ಓಪನ್ ಮಾಡು ಮಾಡುವುದಕ್ಕೂ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಹಣ ಹೋಗುತ್ತಿದೆ. It is being misused. ಇದನ್ನು ತಾವು ತಡೆಗಟ್ಟಬೇಕು. ಇನ್ನು ಮುಂದೆ ಕೇಂದ್ರ ಸರ್ಕಾರದ ಸಬ್ಸಿಡಿ, ಸೆಲ್ಫ್ ಎಂಪ್ಲಾಯ್‌ಮೆಂಟ್‌ಗೆ ಬರುತ್ತದೆ. ಮತ್ತು ಬ್ಯಾಂಕ್‌ಗಳೂ ಕೊಡುತ್ತಾರೆ ಇದು ಸರಿಯಾದ Project Profile ಮಾಡಿ. ಎಸ್. ಐ. ಎಸ್. ಮುಖಾಂತರ or TECSOK ಮುಖಾಂತರ ಒಂದೊಂದು ತಾಲ್ಲೂಕಿನಲ್ಲಿ ಇಂತಿಷ್ಟು ಲಾಭದಾಯಕವಾದ ಉತ್ಪಾದನೆ ಮಾಡುವಂಥ ಕೈಗಾರಿಕಾ ಘಟಕ

ಗಳನ್ನು ನಿರುದ್ಯೋಗಿ ಯುವಕರಿಗೆ ಮಾಡಿ ಕೊಡುವ ಹಾಗೆ ತಮ್ಮಲ್ಲಿ ಏನಾದರೂ ಪಾಸಿಟೀವ್ ಕಾರ್ಯಕ್ರಮ ಇದೆಯೆ ? You are abusing the whole programme of the Government of India. ಇದರ ಬಗ್ಗೆ ತಾವು ಪೂರ್ತಿಯಾಗಿ ಏನು ಆಲೋಚನೆ ಮಾಡಿದ್ದೀರಿ. ಇದರ ಬಗ್ಗೆ ಯಾವ ತರಹ ಕಾರ್ಯಕ್ರಮ ಯಶಸ್ವಿಯಾಗಿ ಆಗುವ ರೀತಿಯಲ್ಲಿ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಎಂ. ರಘುಪತಿ.—ಸನ್ಮಾನ್ಯ ಅಧ್ಯಕ್ಷರೇ, ಸೆಲ್ಫ್ ಎಂಪ್ಲಾಯ್‌ಮೆಂಟ್ ಕಾರ್ಯಕ್ರಮದ ಬಗ್ಗೆ ಶ್ರೀಮಾನ್ ಮೊಯಿಲಿಯವರು ಏನು ಹೇಳಿದ್ದಾರೆ ಇದುಯಾವುದೂ ಕಾರ್ಯಕ್ರಮ ನನ್ನ ಎದುರಿಗೆ ಇಲ್ಲ. ಕೇಂದ್ರ ಸರ್ಕಾರದದಿಂದ ತರಿಸಿಕೊಳ್ಳುತ್ತೇವೆ. ಕೇಂದ್ರ ಸರ್ಕಾರದ ಜೊತೆ ಚರ್ಚೆ ಮಾಡುತ್ತೇವೆ. ಅವರ ಅನುದಾನ ತೆಗೆದುಕೊಂಡು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನ್ನು ಮಾನ್ಯ ಸದಸ್ಯರ ಸಲಹೆ ಪ್ರಕಾರ ಮಾಡುತ್ತೇವೆ. ಮತ್ತೆ ಈಗಾಗಲೇ ಅನ್ ಗೋಯಿಂಗ್ ಸ್ಕೀಮ್ಸ್ ಜಾರಿಯಲ್ಲಿದೆ.

SRI M. VEERAPPA MOILY.—I am sorry the hon. Minister has not understood. ಈಗ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಎಂದು ಸೀಡ್ ಮನಿ ಎಂದು ಕೊಡುತ್ತಾರೆ. ಹಿಂದೆ ೮ ಸಾವಿರ ಕೊಡುತ್ತಿದ್ದರು, ಈಗ ೧೨ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇಂತಿಷ್ಟೇ ಯುವಕ ಯುವತಿಯರಿಗೆ ಎಂದು ಬ್ಯಾಂಕ್ ಮೂಲಕ ಕೊಡುತ್ತಿದ್ದರು. 100% seed money is given by Central Government. ೨-೩ ವರ್ಷದ ಹಿಂದಿನಿಂದಲೂ ಈ ಪ್ರೋಗ್ರಾಂ ನಡೆಯುತ್ತಾ ಬರುತ್ತಿದೆ. ಸುಮಾರು ೨೫-೩೦ ಸಾವಿರ ರೂಪಾಯಿಗಳ ಬ್ಯಾಂಕ್ ಲೋನ್ ಕೊಡುತ್ತಿದ್ದಾರೆ. ಈ ಕಾರ್ಯಕ್ರಮ ಸದುಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಿದೆ ಒಂದು ಸಾವಿರ ಯೂನಿಟ್ ತಿಂಗಳಿಗೆ ಏನು ಮಾಡುತ್ತೀರಿ, ಅದರಲ್ಲಿ ಕಬ್ಬಿನ ರಸ ತೆಗೆಯುವುದು, etc. where the registration is not necessary ಕಾಫಿ ಪುಡಿ ಅರೆಯುವುದು, It is practically trading business. ಒಬ್ಬ ಟೈಲರ್ ಎಸ್.ಐ.ಎಸ್. ನಲ್ಲಿ ರಿಜಿಸ್ಟ್ರೇಷನ್ ಮಾಡಿದ್ದಾನೆಂದು ತಾವು ಲೆಕ್ಕ ಕೊಡಬಾರದು ಅಲ್ಲಿ industrial base should have expanded. That is what we are telling.

SRI J. H. PATIL.—Self-employment Scheme is a continuous scheme. ಪ್ರತಿ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್‌ನಲ್ಲಿ ಈ ಸ್ಕೀಮ್ ಕೆಳಗೆ ಯಾರ್‍ಯಾರು ಅರ್ಜಿ ಹಾಕುತ್ತಾರೆ, ಅವರಿಗೆ ಲೀಡ್ ಬ್ಯಾಂಕ್‌ನವರು, ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನವರು, ಆರ್ಥಿಕ ಸಹಾಯ ಕೊಡುತ್ತಾರೆ. It is being done. ಇದು ಏನಾಗಿದೆ, ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಾಗಲೀ, ಸರ್ಕಾರದಲ್ಲಾಗಲೀ ಡಿಫೆಕ್ಟ್ ಅಲ್ಲ. ಬ್ಯಾಂಕ್‌ನವರು ಸಿಂಗಲ್‌ವಿಂಡೋ ಏಜೆನ್ಸಿಯಲ್ಲಿ ನೀವು ಸೆಲೆಕ್ಟ್ ಆಗಿದ್ದೀರಿ, ನಿಮಗೆ ಇಷ್ಟು ರೂಪಾಯಿ ಸ್ಯಾಂಕ್ಷನ್ ಆಗುತ್ತದೆ, Later on, it is the Banks which have been delaying. I can give instances. ಅವರು ಇಲ್ಲಿ ಕ್ಲಿಯರ್ ಆಯಿತು, ಇನ್ನು ನಮಗೆ ಲೋನ್ ಸಿಕ್ಕಿಬಿಡುತ್ತದೆ ಎಂದು ಬ್ಯಾಂಕ್‌ಗೆ ಸುತ್ತಾಡಿ, ಸುತ್ತಾಡಿ ಕೊನೆಗೆ ಬ್ಯಾಂಕ್‌ನಿಂದ ಸಿಗಲಿಲ್ಲ ಎಂದು ನಮ್ಮನ್ನು ಬೈಯುವುದು ಆಗಿದೆ.

SRI M. VEERAPPA MOILY.—I am not referring to that. ನೀವು ಮಂಜೂರು ಮಾಡುತ್ತೀರಿ, ಬ್ಯಾಂಕ್‌ನವರು ಕೊಡುತ್ತಾರೋ ಇಲ್ಲವೋ ಎಂಬುದು ಫಾಲೋ ಅಫ್ ಆಕ್ಷನ್, ನಾನು ಹೇಳುವುದು, ಯಾರನ್ನು ತಾವು ಸೆಲೆಕ್ಟ್ ಮಾಡುತ್ತೀರಿ, ಯೂತ್ಸ್ ಏನಿದ್ದಾರೆ ಅವರ ಬಗ್ಗೆ ಹೇಳುತ್ತೇನೆ. ಈಗ ಸ್ಮಾಲ್ ಇಂಡಸ್ಟ್ರೀಸ್ ಸರ್ವೀಸ್ ಇನ್‌ಸ್ಟಿಟ್ಯೂಟ್ ಗೌರ್ನಮೆಂಟ್ ಆಫ್ ಇಂಡಿಯಾದ್ದು ಇದೆ, ಟೆಕ್ನಿಕ್ ತಪ್ಪಾದೇ ಆಗಿದೆ. ಇಲ್ಲಿ ತಾವು ವರ್ಷಕ್ಕೆ ಇಂತಿಷ್ಟು ಎಂದು ಯುವಕರನ್ನು ತಯಾರು ಮಾಡಬೇಕು. ತಯಾರು ಮಾಡಿ ಅವರನ್ನು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ಗೆ ಅಳವಡಿಸುವುದಕ್ಕೆ ಸಾಧ್ಯ ಇದೆ.

ಶ್ರೀ ಜೆ. ಹೆಚ್. ಪಟೇಲ್.—ಟ್ರೈನಿಂಗ್ ಮಾಡುವುದು, ಅದು ಬೇರೆ. ಟ್ರೈನಿಂಗ್ ಮಾಡುವುದಕ್ಕೆ ಟ್ರೈಸೆಂ ಎಂದು ಒಂದು ಸ್ಕೀಮ್ ಇದೆ. ಟ್ರೈನಿಂಗ್ ಆರು ತಿಂಗಳು, ಮೂರು ತಿಂಗಳ ಇರುತ್ತದೆ. Depending upon the nature of industry. ಅವರಿಗೆ ಟ್ರೈನಿಂಗ್

ಸಿಗುತ್ತದೆ. ಟ್ರೈನಿಂಗ್ ಆದಮೇಲೆ ಅವನು ಏನು ಮಾಡಬೇಕು, ಇಲ್ಲಿ ಅವನ್ನು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ಗೆ ಅರ್ಜಿ ಹಾಕುತ್ತಾನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅದು ಆಗುತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಅದರ ವಿವರಗಳನ್ನು ಬೇಕಾದರೆ ಕೊಡುತ್ತೇನೆ. ಎಷ್ಟು ಕ್ಲಿಯರ್ ಮಾಡಿ ಕಳುಹಿಸಿದ್ದೇವೆ, ಅದರಲ್ಲಿ ಆಕ್ಚ್ಯುಯಲ್ ಆಗಿ ಎಷ್ಟು ಲೋನ್ ಸಿಕ್ಕಿದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಎಂ. ರಘುಪತಿ.—ಇಂಡೋ ಡಚ್ ಪ್ರೋಗ್ರಾಂ ಅಡಿಯಲ್ಲಿ ಸೆಕೆಂಡ್ ಫೇಸ್ ಏತಕ್ಕೆ ಪ್ರಾರಂಭ ಮಾಡಲಿಲ್ಲ ಎಂದು ಕೇಳಿದ್ದಾರೆ. ಸೆಕೆಂಡ್ ಫೇಸ್ ಪ್ರೋಗ್ರಾಂನ್ನು ಚಾಕ್-ಔಟ್ ಮಾಡಿ ಕಳುಹಿಸಿದ್ದೇವೆ. ಅಪ್ರೂವಲ್ ಆದ ತಕ್ಷಣ ಪ್ರಾರಂಭ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಎಂಟರ್‌ಪ್ರಿನರ್ಸ್ ಮುಂದೆ ಬಂದರೆ ಅವರಿಗೆ ೫೦ ಸಾವಿರ ರೂಪಾಯಿ ಹಣ ಒದಗಿಸಿಕೊಡುತ್ತೇವೆ ಮತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ೧೫ ರಿಂದ ೨೦ ರವರೆಗೆ ಷೆಡ್ಸ್‌ನ್ನು ಅವರಿಗೆ ರಿಸರ್ವ್ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇವರಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕಾದರೆ ಇದಕ್ಕಾಗಿ ಈ ವರ್ಷ ಎಷ್ಟು ಹಣ ಪ್ರಾವಿಜನ್ ಮಾಡಿದ್ದೀರಿ, ಎಷ್ಟು ಜನಕ್ಕೆ ಐಡೆಂಟಿಫೈ ಮಾಡಿ ಕೊಡಬೇಕೆಂದು ಉದ್ದೇಶ ಇದೆ.

ಇನ್ನು ಎರಡನೆಯದಾಗಿ ಕರ್ನಾಟಕ ಹ್ಯಾಂಡ್‌ಲೂಮ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಈಗಾಗಲೇ ಏನು ಯುನಿಟ್ಸ್ ಕೆಲಸ ಮಾಡುತ್ತಿವೆ ಅದರಲ್ಲಿ ಎಷ್ಟು ವೀವರ್ಸ್ ಕೆಲಸ ಮಾಡುತ್ತಿದ್ದಾರೆ ಅದನ್ನು ಬಿಟ್ಟು. ಈ ವರ್ಷ ಎಷ್ಟು ಜನರಿಗೆ ನಿಮ್ಮ ಯೋಜನೆಯನ್ನು ಎಕ್ಸ್‌ಟೆಂಡ್ ಮಾಡಬೇಕೆಂದು ಇದ್ದೀರಿ ? ಹೊಸದಾಗಿ ಹ್ಯಾಂಡ್‌ಲೂಮ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ಸ್ ತೆಗೆದುಕೊಳ್ಳಬೇಕೆಂದು ಮಾಡಿರುತ್ತೀರಾ ? ಅದರಲ್ಲಿ ಎಷ್ಟು ಜನ ಬೆನಿಫಿಷಿಯರೀಸ್ ಬರುತ್ತಾರೆ.

ಮೂರನೆಯದಾಗಿ ಈಗ ಇರತಕ್ಕಂಥ ವೀವರ್ಸ್‌ಗೆ ನೂಲು ಕೊಡತಕ್ಕಂಥ ವ್ಯವಸ್ಥೆ ಇಲ್ಲ ಎಂದು ನಿನ್ನೆ ಮಾನ್ಯ ವೆಂಕಟರಾಮಯ್ಯನವರು ಕೊಶ್ಚನ್ ಮುಖಾಂತರ ಪ್ರಸ್ತಾಪ ಮಾಡಿದರು. ಆಗ ತಾವು ತಕ್ಷಣ ಕಳುಹಿಸಿಕೊಡುತ್ತೇವೆ ಎಂದು ಹೇಳಿದಿರಿ. ಇವತ್ತೂ ಸಹ ನನಗೆ ಟೆಲಿಗ್ರಾಂ ಬಂದಿದೆ. ಸಂಬಂಧಪಟ್ಟ ಪ್ರಾಜೆಕ್ಟ್ ವೀವರ್ಸ್‌ನಿಂದ ಬಂದಿದೆ "ಇನ್ನೂ ನೂಲು ವ್ಯವಸ್ಥೆ ಆಗಿಲ್ಲ. ನಾವು ಅನ್‌ಎಂಪ್ಲಾಯ್ಡ್ ಆಗಿ ಕುಳಿತಿದ್ದೇವೆ. ಹೊಟ್ಟೆಗೆ ಅನ್ನ ಇಲ್ಲದೆ ಸಾಯುತ್ತಿದ್ದೇವೆ" ಎಂಬ ಮಾತನ್ನು ತಿಳಿಸಿದ್ದಾರೆ. ಇದರ ಬಗ್ಗೆ ತಕ್ಷಣ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಬೇಕು.

ನಾಲ್ಕನೆಯದಾಗಿ, ಡಚ್ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿದ್ದೀರಿ. ಗುರುಮಿಟ್ಕಲ್‌ನಲ್ಲೂ ಕಟ್ಟಿದ್ದೀರಿ. ಆದರೆ ಅವುಗಳನ್ನು ಆಕ್ಯುಪೈ ಮಾಡುವುದಕ್ಕೆ ಮುಂಚೆಯೇ ಅದರಲ್ಲಿ ಕೆಲವು ಮನೆಗಳು ಬಿದ್ದು ಹೋಗಿವೆ. ಮಣ್ಣಿನಲ್ಲಿ ಮನೆ ಕಟ್ಟಿ ಪ್ಲಾಸ್ಟರ್ ಮಾಡಿದ್ದಾರೆ. ಅವುಗಳನ್ನು ಆಕ್ಯುಪೈ ಮಾಡುವುದಕ್ಕೆ ಮುಂಚೆಯೇ ಬಿದ್ದು ಹೋಗಿವೆ ಇನ್ನೂ ಕೆಲವು ಕಡೆ ಮನೆಗಳನ್ನು ಕಟ್ಟಿಸಬೇಕೆಂದು, ಮುಧೋಳ್ ರಂಗಮ್‌ಪೇಟೆ ಮುಂತಾದ ಕಡೆಗಳಿಂದ ಅರ್ಜಿಗಳನ್ನು ತಮಗೆ ಸಲ್ಲಿಸಿದ್ದಾರೆ. ಒಂದು ವರ್ಷದಿಂದ ಸೇಡಮ್‌ನ ಜನತಾ ಪಾರ್ಟಿ ಪ್ರೆಸಿಡೆಂಟ್‌ರವರು ಇದಕ್ಕಾಗಿ ಅಡ್ಡಾಡುತ್ತಿದ್ದಾರೆ. ಮಾನ್ಯ ಚಂದ್ರಶೇಖರ ರೆಡ್ಡಿ ಮದನ ಅವರು ಇಲ್ಲಿ ಇಲ್ಲ. ಅವರಿಗೆ ಗೊತ್ತಿದೆ. ಪ್ರಾಜೆಕ್ಟ್ ಮಂಜೂರಾದರೂ ಕೂಡಾ ಇಲ್ಲಿಯವರೆಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ವ್ಯವಸ್ಥೆ ಮಾಡಲಿಲ್ಲ.

ಈ ನಾಲ್ಕೂ ಪ್ರಶ್ನೆಗಳಿಗೆ ತಾವು ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

ಶ್ರೀ ಎಂ. ರಘುಪತಿ.—ಯಾರನ್ ಬಗ್ಗೆ ಏನು ಹೇಳಿದ್ದೇನೆ, ಈ ಅಸೆಂಬ್ಲಿ ಮುಗಿದ ತಕ್ಷಣ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಮಾಲನ್ನು ಕಳುಹಿಸಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಇದರ ಬಗ್ಗೆ ತಕ್ಷಣ ಕಾರ್ಯಕ್ರಮ ಜರಗಿಸುತ್ತೇನೆ.

ಈ ವರ್ಷ ಐದುಸಾವಿರ ಲೂಮ್ಸ್ ಕವರ್ ಮಾಡುವುದಕ್ಕೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ೧೯೮೮-೮೯ರಲ್ಲಿ ಇದನ್ನು ಮಾಡುತ್ತೇವೆ. ಡಚ್ ಸ್ಕೀಮ್ ಅಡಿಯಲ್ಲಿ ಮನೆಗಳು ಸರಿಯಾಗಿಲ್ಲ

ಬಿದ್ದು ಹೋಗಿದೆ ಎಂದು ತಾವು ಏನು ಹೇಳಿದ್ದೀರಿ ಅದನ್ನು ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ ಎಂದು ಹೇಳುತ್ತೇನೆ.

SRI M. MALLIKARJUNA KHARGE.—What is the provision you have made for the boys of Scheduled Caste? ೫೦ ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳಿದ್ದಾರೆ. ಹಣವಿದ್ದರೆ ತಾನೆ ಕೊಡುವುದು. Unless you make some provision, wh t can you give to them ? ಸುಮ್ಮನೆ ಕೊಡುತ್ತೇವೆಂದು ಹೇಳಿ ಹಣವಿಲ್ಲದಿದ್ದರೆ ಹೇಗೆ ? ಬಡ್ಜೆಟ್ ಪ್ರಾವಿಜನ್ ಒಂದು ೧೦ ಲಕ್ಷ. ೨೦ ಲಕ್ಷ ಅಥವಾ ಒಂದು ಕೋಟಿ ರೂಪಾಯಿ ಅಥವಾ ಎಷ್ಟು ಇಟ್ಟಿದ್ದೀರಿ ಹೇಳಿ ?

ಶ್ರೀ ಎಂ. ರಘುಪತಿ.—ವಿವರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಡ್ಜೆಟ್ ಪ್ರಾವಿಜನ್ ಇಲ್ಲದೆ ಹೇಗೆ ಅನೌನ್ಸ್ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಆದಷ್ಟು ಹೆಚ್ಚು ಜನರನ್ನು ಕವರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸಣ್ಣ ಕೈಗಾರಿಕಾ ಮಂತ್ರಿಗಳನ್ನು ಕೇಳುವುದೇನೆಂದರೆ ಅಗ್ರಿಕಲ್ಚರ್ ಪ್ರೊಡ್ಯುಸಸ್ ಪ್ರೋಸೆಸಿಂಗ್ ಅನ್ನು ಸ್ಮಾಲ್ ಸ್ಕೇಲ್‌ನಲ್ಲಿ ಸೇರಿಸಿ ಏನಾದರೂ ಮಾಡುವುದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೀರಾ ಹೇಗೆ ?

ಶ್ರೀ ಎಂ. ರಘುಪತಿ.—ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಈ ಬಗ್ಗೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿಕೊಂಡು ಒಂದು ಮಾಸ್ಟರ್ ಪ್ಲಾನ್ ಮಾಡಿಟ್ಟರೆ ಮುಂದೆ ಒಳ್ಳೆಯದಾಗಬಹುದು.

ಶ್ರೀ ಎಂ. ರಘುಪತಿ—ಯೋಜನೆ ಇಲ್ಲ.

ಶ್ರೀಮತಿ ಮುಕ್ತರುನ್ನೀಸಾ.—ಮಾನ್ಯ ಮಂತ್ರಿಗಳು ಈವಾಗ ಆ ಸ್ಕೀಮ್ ಈ ಸ್ಕೀಮ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಜೊತೆಗೆ ಬಡವರಿಗೆ ಸಹಾಯ ಮಾಡಬೇಕೆಂದು ಸಹ ಹೇಳಿದ್ದಾರೆ. I am happy that so many incentives are being announced. I would like to know from the Hon'ble Minister for Small Scale Industries as to whether he will cover the backlog also.

ಶ್ರೀ ಎಂ. ರಘುಪತಿ.—ಬಡ್ಜೆಟ್‌ನಲ್ಲಿ ಎಲ್ಲಾ ಕವರ್ ಆಗುತ್ತದೆ. ಬಡ್ಜೆಟ್ ಹೊರತಾಗಿ ಯಾವುದೂ ಇಲ್ಲ. We will cover up the backlog also.

SMT. MUKTHARUNNISA.—Sir, there are so many schemes, but they are not implemented. Government is spending lot of money on so many schemes. The Government have not implemonted the schemes. When the Government have not cleared the backlog, what about the new schemes ? These schemes are bogus.

ಶ್ರೀ ಎಂ. ರಘುಪತಿ.—ಯಾವುದೂ ಬೋಗಸ್ ಇಲ್ಲ. we will couer the backlog.

SMT MUKTHARUNNISA —I am talking about the self-employment schemes. You have not implemented the self-employment schemes.

ಶ್ರೀ ಎಂ. ರಘುಪತಿ.—ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಇದರಲ್ಲಿ ಕವರ್ ಆಗುತ್ತದೆ.

SMT MUKTHARUNNISA.—80% of the Small Scale Industries are sick. What are the measures you have taken to revamp the sick industries ? Before clearing the backlog, you are announcing new

incentives. When a sickperson is in need of Oxygen, you are not giving it. But you are giving Oxygen to a new-born baby.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಸದಸ್ಯರ ಗ್ರಹಿಕೆ ಒಳ್ಳೆಯದು. ಕರೆಕ್ಟ್ ಆಗಿದೆ. ಯಾರು ಉಳಿಯುವುದಿಲ್ಲವೋ ಅವರನ್ನು ಸಂತೋಷದಿಂದ ಸಾಯುವುದಕ್ಕೆ ಬಿಡಬೇಕು. ಆಗುವುದಿಲ್ಲ ವೆಂದು ಹೇಳಬಾರದು. ಹೊಸದಾಗಿ ಹುಟ್ಟುತಕ್ಕಂಥವರಿಗೆ ಒಳ್ಳೆಯ ಜೀವನಕ್ಕೆ ಮಾರ್ಗೋಪಾಯ ಗಳನ್ನು ಮಾಡಿ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರು ಬದುಕುತ್ತಾರೋ ಅವರನ್ನಾದರೂ ಬದುಕಿಸಿ.

ಶ್ರೀ ಜೆ. ಹೆಚ್. ಪಟೇಲ್.—ಶೇಕಡಾ ೮೦ ಭಾಗ ಸ್ಮಾಲ್ ಸ್ಕೇಲ್ ಇಂಡಸ್ಟ್ರಿಗಳು ಸಿಕ್ ಆಗಿವೆ ಎಂದು ಹೇಳುವುದು ಸರಿಯಲ್ಲ. ೬ ತಿಂಗಳ ಕೆಳಗೆ ಸ್ಯಾಂಪಲ್ ಸರ್ವೆ ಮಾಡಿಸಿದೆವು. ಬೆಂಗಳೂರು ಹುಬ್ಬಳ್ಳಿ, ಧಾರವಾಡ ಇಂತಹ ಕಡೆ ಎಷ್ಟು ಇಂಡಸ್ಟ್ರಿಗಳು ಲೈಸೆನ್ಸ್ ತೆಗೆದುಕೊಂಡು ನಡೆಸುತ್ತಿವೆ ಇನ್ನು ಎಷ್ಟು ಇಂಡಸ್ಟ್ರಿಗಳು non-startesr ಆಗಿವೆ ಎಂದು ನೋಡಿದಾಗ ಸುಮಾರು 700 Units were examined out of which only 21% were found to be sick. To say that 80% of the industries are sick. is not correct.

ಶ್ರೀ ಎಸ್. ಜಿ. ನಂಜಯ್ಯನ ಮಠ.—ಸಪರೇಟ್ ಡೈರೆಕ್ಟರೇಟ್ ಮಾಡುವ ವಿಷಯವನ್ನು ನಾನು ಸ್ವಾಗತಿಸಿ ಜೊತೆಗೆ ಬಡ ನೇಕಾರರು ಯಾರಿದ್ದಾರೆ ಅವರಿಗೆ ಹಸಿರು ಕಾರ್ಡ್ ಹಂಚುವ ಬಗ್ಗೆ ಪ್ರಸ್ತಾಪ ಮಾಡಿದ್ದೆ ಇದರ ಬಗ್ಗೆ ಮಾನ್ಯ ಸಚಿವರು ಏನೂ ಹೇಳಲಿಲ್ಲ.

೧೨-೩೦ ಪಿ.ಎಂ.

ನೇಕಾರರು ಹಸಿರು ಕಾರ್ಡನ್ನು ಪಡೆಯುವಲ್ಲಿ ವಂಚಿತರಾಗಿದ್ದಾರೆ. ಆದ್ದರಿಂದ ಇವರು ಗಳಿಗೆಲ್ಲ ಹಸಿರು ಕಾರ್ಡ್‌ಗಳನ್ನು ಕೊಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಆಮೇಲೆ, ಸೇಲಂ ನಲ್ಲಿ ನೇಕಾರರಿಗೆ ತರಬೇತಿಯನ್ನು ಕೊಡುವ ಒಂದು ತಾಂತ್ರಿಕ ಸಂಸ್ಥೆ ಇದೆ. ಇದೇ ಮಾದರಿಯಲ್ಲಿ ಕರ್ನಾಟಕದಲ್ಲೂ ತಾಂತ್ರಿಕ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆಂದು ಸರ್ಕಾರದವರು ಹೇಳಿ ೨ ವರ್ಷಗಳಾಯಿತು ಆದರೆ ಇದುವರೆಗೂ ಅದನ್ನು ಪ್ರಾರಂಭ ಮಾಡಿಲ್ಲ. ಸೇಲಂನಲ್ಲಿ [illegible]ವ ರೀತಿ ಕೈಗಾರಿಕಾ ತರಬೇತಿ ಕೇಂದ್ರವನ್ನು ತೆರೆಯಲಾಗಿದೆಯೋ ಅದೇ ರೀತಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಹುಲಿಕೋಟೆಯಲ್ಲಿ ಪ್ರಾರಂಭ ಮಾಡುತ್ತೇವೆಂದು ಹೇಳಲಾಗಿದೆ. ಆದಷ್ಟು ಬೇಗ ಈ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ನಾನು ಹೇಳುತ್ತೇನೆ. ಇದರ ಜೊತೆಗೆ ಮತ್ತೊಂದು, ಲೂಮ್ಸ್ ಕವರೇಜ್ ಬಗ್ಗೆ ತಾವು ಅಂಕಿ ಸಂಖ್ಯೆಗಳನ್ನು ಹೇಳಿದ್ದೀರಿ. ನಿಮ್ಮ ಅಧಿಕಾರಿಗಳು ಕೊಡ ತಕ್ಕಂಥ ಅಂಕಿ ಸಂಖ್ಯೆಗಳನ್ನು ಇಲ್ಲಿ ಹೇಳಿ ಇಷ್ಟು ಮಗ್ಗಗಳನ್ನು ವರ್ಷಕ್ಕೆ ಹಾಕಿಸಿದ್ದೇವೆಂದು ಹೇಳುತ್ತೀರಿ. ಒಂದು ವರ್ಷದಲ್ಲಿ ೧೫೦ ಮಗ್ಗಗಳನ್ನು ಸರ್ಕಾರ ಹಾಕಿಸಿದೆ ಮತ್ತು ಈ ೧೫೦ ಮಗ್ಗಗಳನ್ನು ಹಾಕಿರುವ ವರಿಗೆ ಸಹಾಯ ಮಾಡಲಾಗಿದೆ ಎಂದು ಹೇಳಿದರೆ ಸಾಲದು. ನೀವು ಹಾಕಿಸಿರುವ ೧೫೦ ಮಗ್ಗಗಳಲ್ಲಿ ೫೦ ಮಗ್ಗಗಳ ಕೆಲಸ ನಿಂತೇ ಹೋಗಿರುತ್ತದೆ. ಆದರೆ, ನಿಮ್ಮ ಲೆಕ್ಕದಲ್ಲಿ ಮಾತ್ರ ೧೫೦ ಮಗ್ಗಗಳು ಕೆಲಸ ಮಾಡುತ್ತಿವೆ ಎಂದು ಇರುತ್ತದೆ. ನಾನು ಹೇಳುವುದೇನೆಂದರೆ, ಇಷ್ಟು ಮಗ್ಗಗಳನ್ನು ಹಾಕಿಸಿ ಸಿದ್ದೇವೆಂದು ಹೇಳುವುದರ ಜೊತೆಗೆ ಎಷ್ಟು ಮಗ್ಗಗಳು ಚಾಲ್ತಿಯಲ್ಲಿ ಇವೆ ಎಂಬುದನ್ನು ಹೇಳಬೇಕು. ನೂಲಿನ ಬೆಲೆ ಜಾಸ್ತಿಯಾಗಿರುವುದರಿಂದ ಅನೇಕ ಮಗ್ಗಗಳವರು ಕೆಲಸವನ್ನು ನಿಲ್ಲಿಸಿಬಿಟ್ಟಿದ್ದಾರೆ. ಇದರ [illegible]ಡೆ ಸರ್ಕಾರ ಗಮನ ಹರಿಸಿ ನೂಲಿನ ಬೆಲೆಯನ್ನು ಕಡಿಮೆ ಮಾಡಿಸಬೇಕು. ಆಮೇಲೆ ಗ್ರಾಮೋದ್ಯೋಗ ದಲ್ಲಿ ತಯಾರಾಗುವ ಖಾದಿ ಬಟ್ಟೆಗಳಿಗೆ ಕರವನ್ನು ಹಾಕಬಾರದು. ಗ್ರಾಮೋದ್ಯೋಗದಲ್ಲಿ ತಯಾರಾಗುವ ಎಂದರೆ, ಗಾಣದಿಂದ ತೆಗೆಯುವ ಎಣ್ಣೆ ಆಗಲೀ, ಮತ್ತೊಂದಾಗಲೀ ಯಾವುದಕ್ಕೂ ಕರವನ್ನು ಹಾಕ ಬಾರದು. ತಮಿಳುನಾಡು, ಕೇರಳಾ ಮತ್ತು ಆಂಧ್ರ ಪ್ರದೇಶಗಳಲ್ಲಿ ಗ್ರಾಮೋದ್ಯೋಗದ ಮೂಲಕ ತಯಾರಾಗುವ ಎಲ್ಲಾ ವಸ್ತುಗಳಿಗೂ ಕರ ಹಾಕುವುದನ್ನು ರದ್ದು ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಗ್ರಾಮೋದ್ಯೋಗಳಿಂದ ೫೦ ಲಕ್ಷ ರೂಪಾಯಿ ವಹಿವಾಟು ನಡೆಯುತ್ತಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ವಹಿವಾಟು ನಡೆಯುವಂತಾಗಬೇಕಾದರೆ ಕರ ಹಾಕುವುದನ್ನು ನಿಲ್ಲಿಸಬೇಕು. ಒಟ್ಟಿನಲ್ಲಿ ಗ್ರಾಮೋದ್ಯೋಗ ಗಳನ್ನು ಹೆಚ್ಚು ಲಾಭದಾಯಕವಾಗಿ ಮತ್ತು ಹೆಚ್ಚು ಉತ್ತಮವಾಗಿ ಕೆಲಸ ಮಾಡುವಂತೆ ಸರ್ಕಾರ ನೋಡಿಕೊಳ್ಳಬೇಕು.

ಶ್ರೀ ಎಂ. ರಘುಪತಿ.—ನೇಕಾರರುಗಳಿಗೆ ಗ್ರೀನ್ ಕಾರ್ಡ್ ಕೊಡಬೇಕೆಂದು ಹೇಳಿದ್ದಾರೆ. ಗ್ರೀನ್ ಕಾರ್ಡುಗಳನ್ನು ಪಟ್ಟಣ ಪ್ರದೇಶಗಳಿಗೂ ವಿಸ್ತರಣೆ ಮಾಡತಕ್ಕಂಥ ಒಂದು ಆಲೋಚನೆ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚೆ ಮಾಡಿ ನೇಕಾರರುಗಳಿಗೆ ಗ್ರೀನ್ ಕಾರ್ಡ್ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ, ಲೂಮ್ಸ್‌ಗಳನ್ನು ಹಾಕಿಸಿರುವ ಬಗ್ಗೆ ಅಧಿಕಾರಿಗಳು ಕೊಟ್ಟಿರುವ ಅಂಕಿಸಂಖ್ಯೆಗಳನ್ನು ಹೇಳಿದ್ದೀರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಸರಿಯಾದ ಅಂಕಿ ಅಂಶಗಳನ್ನೇ ಕೊಟ್ಟಿದ್ದೇವೆ. ಇನ್ನು ಮುಂದೆ ಮಗ್ಗಗಳು ಸರಿಯಾಗಿ ನಡೆಯುವುದಕ್ಕೆ ಏನು ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇವೆ. ಮತ್ತೆ ಸೇಲಂನಲ್ಲಿ ಮಾಡಿರುವ ಮಾದರಿಯಲ್ಲಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಇನ್ನೂ ಪ್ರಾರಂಭ ಮಾಡಿಲ್ಲವೆಂದು ಹೇಳಿದ್ದಾರೆ. ಹೌದು ಇನ್ನೂ ಪ್ರಾರಂಭ ಮಾಡಿಲ್ಲ. ಅದರ ಬಗ್ಗೆ ಸರ್ಕಾರ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆಂದು ನಾನು ತಿಳಿಸುತ್ತೇನೆ. ಮತ್ತೆ ಗ್ರಾಮೋದ್ಯೋಗಗಳಿಂದ ತಯಾರಾಗುವ ಎಲ್ಲಾ ವಸ್ತುಗಳಿಗೂ ಕರವನ್ನು ಹಾಕಬಾರದೆಂದು ಹೇಳಿದ್ದಾರೆ. ಆ ರೀತಿ ಸಧ್ಯದಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಬರೀ ಖಾದಿ ಬಟ್ಟೆಗಳಿಗೆ ಮಾತ್ರ ಕರ ರಿಯಾಯಿತಿ ಕೊಡಲಾಗುತ್ತಿದೆ. ಆಮೇಲೆ, ಆಗಲೇ ಶ್ರೀಮತಿ ಮುಕ್ತಾರ್ ಉನ್ನೀಸಾರವರು ರಾಜ್ಯದಲ್ಲಿ ಒಟ್ಟು ೬೦ ಪರ್‌ಸೆಂಟ್ ಇಂಡಸ್ಟ್ರೀಗಳು ಸಿಕ್ ಆಗಿವೆಯೆಂದು ಹೇಳಿದರು. ಅದು ಸರಿಯಲ್ಲ. ರಾಜ್ಯದಲ್ಲಿ ಒಟ್ಟು ೧೭ ಪರ್‌ಸೆಂಟ್‌ನಷ್ಟು ಮಾತ್ರ ಸಿಕ್ ಯೂನಿಟ್‌ಗಳು ಇವೆ. ಇವುಗಳನ್ನೂ ಸಹ ರಿವೈವ್ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಪಟಪಕ್ಕಿ ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರುಗಳಿಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಲ ಕೊಡಲಾಗುತ್ತದೆ. ಇದರ ಜೊತೆಗೆ ಸರ್ಕಾರ ಸಬ್ಸಿಡಿ ಹಣವನ್ನು ಕೊಡಲಾಗುತ್ತದೆಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಯಾರಾದರು ಒಬ್ಬರು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದು ಪ್ರಾಜೆಕ್ಟ್ ರಿಪೋರ್ಟನ್ನು ತಯಾರು ಮಾಡಿ ಸಾಲಕ್ಕೆ ಅರ್ಜಿ ಹಾಕಿದರೆ ಸಾಲ ಮಂಜೂರಾಗುವುದು ಒಂದು ವರ್ಷದ ಮೇಲ್ಪಟ್ಟಾಗುತ್ತದೆ, ಒಂದು ವರ್ಷದಲ್ಲಿ ರಾ-ಮೆಟೀರಿಯಲ್ ಕಾಸ್ಟ್ ಜಾಸ್ತಿಯಾಗಿರುತ್ತದೆ. ಸುಮಾರು ೨೦ ಅಥವಾ ೨೫ ಪರ್‌ಸೆಂಟ್‌ನಷ್ಟು ಬೆಲೆ ಜಾಸ್ತಿಯಾಗಿರುತ್ತದೆ. ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿಗೆ ಪ್ರೋತ್ಸಾಹವನ್ನು ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿವರು. ಆದರೆ ವಿದ್ಯುಚ್ಛಕ್ತಿ ಕೊರತೆಯು ನಮ್ಮ ರಾಜ್ಯದಲ್ಲಿ ಇದೆ. ಕಾಸ್ಟ್ ಆಫ್ ಪ್ರೊಡಕ್ಷನ್ ಹಾಕಬೇಕಾದರೆ ಎಂಟು ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ತಮ್ಮ ಯೋಜನೆಯ ಪ್ರಕಾರ ಇದೆ. ಆ ಪ್ರಕಾರ ಕಾಸ್ಟ್ ಆಫ್ ಪ್ರೊಡಕ್ಷನ್ ಹಾಕಿಕೊಳ್ಳುತ್ತೀರಾ ? ಏಕೆಂದರೆ ಎಂಟು ಗಂಟೆಗಳ ಕಾಲ ವಿದ್ಯುಚ್ಛಕ್ತಿಯನ್ನು ನಿಮಗೆ ಹಗಲು ಹೊತ್ತಿನಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ರಾತ್ರಿ ಹೊತ್ತಿನಲ್ಲಿ ಕೊಡುತ್ತೀರಿ, ಆವಾಗ ಯಾವ ರೀತಿಯಲ್ಲಿ ಮೇಂಟೇನ್ ಮಾಡುವುದಕ್ಕೆ ಆಗುತ್ತದೆ ? ಆ ಬಗ್ಗೆ ತಮ್ಮ ಅಭಿಪ್ರಾಯ ಏನು ? ಏಕೆಂದರೆ ತಾವುಗಳು ಬಂದರು ಖಾತೆಯ ಮಂತ್ರಿಗಳೂ ಕೂಡ ಆಗಿದ್ದೀರಿ. ಹಡಗುಗಳ ರೀತಿಯಲ್ಲಿ ಪದೇ ಪದೇ ಲಂಗರು ಹಾಕುವಂತಾಗಬಾರದು. ಆ ಒಂದು ಭಾವನೆಯಿಂದ ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರ ಆತಂಕವು ಯಾವುದೇ ಯೋಜನೆಗಳು ನಮ್ಮ ಖಾತೆಯಲ್ಲಿ ಲಂಗರು ಹಾಕಿರುವುದಿಲ್ಲ. ಆ ಬಗ್ಗೆ ಭಯ ಪಡಬೇಕಾಗಿಲ್ಲ. ನಾನು ಯಾವುದೇ ಖಾತೆಯನ್ನು ವಹಿಸಿಕೊಂಡಿದ್ದರೂ ಕೂಡ ಆ ಖಾತೆಯಲ್ಲಿ ಏನೇನು ಘೋಷಣೆಗಳನ್ನು ಮಾಡಿದ್ದೇನೋ ಅವುಗಳೆಲ್ಲವನ್ನೂ ಜಾರಿಗೆ ತಂದಿದ್ದೇನೆ. ಸಾಮಾನ್ಯವಾಗಿ ಮಂತ್ರಿಗಳು ಭರವಸೆ ಕೊಡುತ್ತಾರೆ, ಅದನ್ನು ಈಡೇರಿಸುವುದಿಲ್ಲ ಎಂಬ ಭಾವನೆ ಇರಬಹುದು. ಆದರೆ ನನ್ನ ಖಾತೆಯಲ್ಲಿ ಯಾವುದೇ ಮಾಹಿತಿಗಳು ತಮಗೆ ಬೇಕಾದಲ್ಲಿ ಅವುಗಳನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಇದರ ಬಗ್ಗೆ ಭಯ ಪಡಬೇಕಾಗಿಲ್ಲ. ಹಾಗೆಯೇ ಪ್ರಾಜೆಕ್ಟ್ ರಿಪೋರ್ಟ್ ತಯಾರು ಮಾಡುವ ಹೊತ್ತಿಗೆ ಪ್ರೊಡಕ್ಷನ್ ಕಾಸ್ಟ್ ಜಾಸ್ತಿಯಾಗುತ್ತದೆ ಎಂದು ಹೇಳಿದ್ದಾರೆ, ಆ ವಿಷಯವನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಆ ಕುರಿತು ಸೂಕ್ತ ಪ್ರಯತ್ನಗಳನ್ನು ಮಾಡುತ್ತೇನೆ. ಮತ್ತು ಮುಂದಕ್ಕೆ ಇಂಡಸ್ಟ್ರೀಯಲ್ ಶೆಡ್ಸ್ ಮಾಡುವಾಗ ಸಿಂಗಲ್‌ವಿಂಡೋ ಏಜನ್ಸೀಸ್ ಏಸಿಡೆ ಆದರ ಮೂಲಕ ಟೆಲಿಫೋನ್ ಆಗಲಿ, ವಾಟರ್ ಕನೆಕ್ಷನ್ ಆಗಲಿ, ವಿದ್ಯುಚ್ಛಕ್ತಿ ಕನೆಕ್ಷನ್ ಆಗಲಿ, ಮತ್ತಿತರ ಯಾವುದೇ

ಸೌಲಭ್ಯಗಳನ್ನು ಡಿಪಾರ್ಟ್‌ಮೆಂಟ್‌ನವರಿಗೆ ಅವರು ಹಣವನ್ನು ತುಂಬಿದರೆ ಎಲ್ಲಾ ಸೌಲಭ್ಯಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಟವುಕ್ಕಿ ರತ್ನಾಕರ್.—ನಾನು ಕೇಳಿರತಕ್ಕಂಥಾದ್ದು, ನಿಮ್ಮ ಯೋಜನೆಯು ಸ್ಥಾಯಿಯಾಗಿ ಈ ನಮ್ಮ ಅನುಸೂಚಿತ ಜಾತಿ ಮತ್ತು ಪಂಗಡಗಳ ಯುವಕರಿಗೆ ಸಿಕ್ಕಬೇಕಾದರೆ ವಿದ್ಯುಚ್ಛಕ್ತಿಯನ್ನು ಎಷ್ಟರವಟ್ಟಿಗೆ ನಿಮಗೆ ಕೊಡಲು ಸಾಧ್ಯ ಎಂಬುದು ಅವಶ್ಯಕವಾದ ವಿಚಾರ.

ಶ್ರೀ ಎಂ. ರಘುಪತಿ.—ಈ ಪ್ರಶ್ನೆಗೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಯವರು ಉತ್ತರವನ್ನು ಹೇಳುತ್ತಾರೆ.

SRI MOHAMEED LAIQUDDIN BURANUDDIN (Bidar).— Mr. Speaker Sir. I had requested the Hon. Minister regarding the working conditions of the rural artisans. I welcome the gesture of the Government in respect of increase in the revolving fund But, the revolving fund does not provide any incentive to the artisans. This revolving fund of Rs. 1500 should be increased to Rs. 3,000 This fund is being provided to the workers by the branch officer and he is harassing the workers. The raw materials are not being provided to the workers and the artisans. That was my complaint. This revolving fund is not incentive to the artisan. The question is on the raw materials From this revolving fund which they are going to spend, on that there should be some incentive. Because Bidar has been declared as 'No industry district,' large scale industries, medium scale industries and small scale industries, are being previded with 25% subsidy and 15% development loan free of interest. As regards those industries they have export value. Actually the working condition of the artisans is very bad andthe Project Officer is harassing them.He is not giving raw materials, He is nottaking the finished goods in time. All the anomalies and hardshipsshould be settled My friend Sri Raghupathi has not stated regarding the hardship and the incentive.

ಶ್ರೀ ಎಂ. ರಘುಪತಿ.— ಅಲ್ಲಿಗೆ ತಾನೇ ಹೋಗಿ ಬರುತ್ತೇನೆ. ಅಲ್ಲಿ ಯಾವ ಆರ್ಟಿಸನ್‌ಗೆ ತೊಂದರೆಯಾಗುತ್ತಿದೆ. ಅವರಿಗೆ ತೊಂದರೆ ಕೊಡಬಾರದೆಂದು ಮತ್ತು ಅವರಿಗೆ ಸುಲಭವಾಗಿ ರಾ ಮೆಟೀರಿಯಲ್ಸ್ ಸಿಗುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಕೆ. ವಿ. ರವೀಂದ್ರನಾಥ್‌ಬಾಬು.— ಆರ್ಟಿಸನ್‌ಗೋಸ್ಕರ ತಾಲ್ಲೂಕುಗಳಲ್ಲಿ ಶೆಡ್ಸ್ ಕಟ್ಟಿಸುತ್ತೇವೆಂದು ಸಚಿವರು ಹೇಳಿದ್ದಾರೆ. ಅಲ್ಲಿ ಮಾಡುವುದರಿಂದ ಹಳ್ಳಿಗಳಿಂದ ಬಂದು ರೈತರಿಗೆ ಮ್ಯಾನೇಜ್ ಮಾಡಲು ತೊಂದರೆಯಾಗುವುದರಿಂದ ಎಲ್ಲೆಲ್ಲಿ ಆರ್ಟಿಸನ್ಸ್ ಇದ್ದಾರೆಂದು ಐಡೆಂಟಿಫೈ ಮಾಡಿದ್ದೀರೋ ಆಯಾ ಹಳ್ಳಿಗಳಲ್ಲೇ ಶೆಡ್ಸ್ ಕಟ್ಟಿಸುವುದು ಒಳ್ಳೆಯದು.

ಶ್ರೀ ಎಂ. ರಘುಪತಿ.— ಈ ವಿಷಯವನ್ನು ಜಿಲ್ಲಾ ಪರಿಷತ್ತುಗಳ ಜೊತೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಶಿವನಂಜಪ್ಪ.— ಜೆ. ಹೆಚ್. ಪಟೇಲರು ಪರದೇಶಕ್ಕೆ ಹೋಗಿ ಬಂದ ಮೇಲೆ ಶಿಪಟೂರು ತಾಲ್ಲೂಕಿನಲ್ಲಿ ಏಳೆ ನೀರನ್ನು ಉಪಯೋಗಿಸಿ ಪಾನೀಯ ಮಾಡುತ್ತೇವೆಂದು ಹೇಳಿದ್ದರು ಅದನ್ನು ಯಾವಾಗ ಮಾಡುತ್ತಾರೆಂದು ಹೇಳಲಿ. ಎರಡನೆಯದು ನನ್ನ ಗುಬ್ಬಿ ತಾಲ್ಲೂಕಿನಲ್ಲಿ

ಹೇರಳವಾಗಿ ಮಾವಿನ ಹಣ್ಣು ಬೆಳೆಯುತ್ತೇವೆ. ಆದರೆ ಅದು ಮಹಾರಾಷ್ಟ್ರಕ್ಕೆ ಹೋಗಿ ಅಲ್ಲಿ ಡಿಸ್ಟಿಲರೀಸ್ಗೆ ಹೋಗಿ ರೈತರು ಪಾಪರಾಗಿ ಬರುತ್ತಿದ್ದಾರೆ. ಆದ್ದರಿಂದ ಗುಬ್ಬಿ ಬಳಿಯಲ್ಲೇ ಮಾವಿನ ಜಾಮ್ ಅಥವಾ ಪಾನೀಯ ಮಾಡುವ ಘಟಕವನ್ನು ಏಕೆ ತೆರೆಯಬಾರದು ?

ಶ್ರೀ ಎಂ ರಘುಪತಿ.— ಸರ್ಕಾರ ಯಾವ ಕೈಗಾರಿಕೆಯನ್ನೂ ಸ್ಥಾಪನೆ ಮಾಡುವುದಿಲ್ಲ. ಪ್ರೈವೇಟ್‌ನವರು ಬಂದರೆ ಸಹಾಯ ಮಾಡುತ್ತವಷ್ಟೇ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಖಾದಿ ಗ್ರಾಮೋದ್ಯೋಗ ಸಂಸ್ಥೆಗಳಲ್ಲಿ ಲಕ್ಷಾಂತರ ಜನ ಕಾರ್ಯಕರ್ತರಿದ್ದಾರೆ. ಇದನ್ನು ನಡೆಸುವ ಪುಡಾರಿಗಳು ರಿಬೇಟ್ ಹೆಸರಿನಲ್ಲಿ ಕೋಟ್ಯಾಂತರ ರೊಕ್ಕವನ್ನು ಎತ್ತಿ ಹಾಕಿ ಕನಿಷ್ಟ ವೇತನ ನಿಯಮವನ್ನು ಸರ್ಕಾರ ಜಾರಿಗೆ ತಂದಿದ್ದರೂ ಇಂದಿನವರೆಗೆ ಕಾರ್ಮಿಕರಿಗೆ ಕೊಡುತ್ತಿಲ್ಲ. ಅವರು ರಾಜ್ಯಾದ್ಯಂತ ಅನೇಕ ಚಳುವಳಿ ಮಾಡಿದ್ದಾರೆ. ಇದರ ಬಗ್ಗೆ ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಳ್ಳುತ್ತೀರಾ ? ಇಡೀ ರಾಜ್ಯದ ತುಂಬಾ ಬೋಗಸ್ ಗ್ರಾಮೋದ್ಯೋಗ ಸಂಸ್ಥೆಗಳು ಹುಟ್ಟಿಕೊಂಡಿವೆ ಸ್ವಲ್ಪ ಹಣ ಕೂಡಿಕೊಂಡು ನಾಲ್ಕು ಜನ ಸೇರಿಕೊಂಡು ಒಂದು ಖಾದಿ ಸಹಕಾರ ಸಂಘ ಎಂದು ಮಾಡಿಕೊಳ್ಳುತ್ತಾರೆ. ಅವರಿಗೆ ಸಹಾಯ ಮಾಡುವುದಕ್ಕೆ ಇಲ್ಲಿ ಹೆಡ್ ಆಫೀಸಿನಲ್ಲಿ ಒಂದು ತಂಡ ಇದೆ, ಅವರಿಗೆ ಇವರು ಸಹಾಯ ಮಾಡಿ ದುಡ್ಡು ಕಬಳಿಸುತ್ತಾರೆ. ನಮ್ಮಲ್ಲಿ ಶಂಭುಲಿಂಗೇಶ್ವರ ಖಾದಿ ಗ್ರಾಮೋದ್ಯೋಗ ಎಂದು ಈಗಾಗಲೇ 2 ಲಕ್ಷ ರೂ. ತಿಂದು ಹಾಕಿದೆ. ಇದುವರೆಗೂ ಒಂದು ಪೈಸೆ ಕೆಲಸ ಮಾಡಿಲ್ಲ. ಇದನ್ನು ಕಂಡು ಹಿಡಿದು ತಪ್ಪಿತಸ್ಥರಿಗೆ ಶಿಕ್ಷೆ ಕೊಡಲು ಕ್ರಮ ತೆಗೆದುಕೊಳ್ಳುತ್ತೀರಾ ? ಮೂರನೆಯದು ನಮ್ಮಲ್ಲಿ ಗಾಂಧೀಜಿಯವರು ಖಾದಿ, ರೋಟಿ ಮತ್ತು ಅಸ್ಪೃಶ್ಯತೆ ಹೇಗೆ ಮುಖ್ಯ ಎಂದು ಹೇಳಿದ್ದಾರೆ. ಆದರೆ ಆ ಕಡೆಯವರು ಈ ಕಡೆಯವರು ಮೇಲಿಂದ ಕೆಳಗಿನವರೆಗೆ ಖಾದಿ ಹಾಕಿಕೊಂಡಿದ್ದರೂ ಸರ್ಕಾರೀ ಕಚೇರಿಗಳಲ್ಲಿ ಮಾತ್ರ ಬಂದಿಲ್ಲ. ಇನ್ನು ಮುಂದೆ ಸರ್ಕಾರ ತನ್ನೆಲ್ಲ ಕಚೇರಿಗಳಿಗೆ, ತನ್ನ ವಲಯದ ಫ್ಯಾಕ್ಟರಿ ಕಚೇರಿಗಳಿಗೆಲ್ಲ ಖಾದಿ ಬೋರ್ಡಿನಿಂದಲೇ ಪಿಲ್ಲೋಕವರ್ಸ್, ದುಪ್ಪಟ್ಟಿ, ಬೆಡ್‌ಶೀಟ್ಸೆಲ್ಲ ಏಕೆ ಖರೀದಿ ಮಾಡಬಾರದು? ಹಿಂದೇನೆ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಏನೂ ಉಪಯೋಗ ಆಗಿಲ್ಲ.

ಶ್ರೀ ಎಂ. ರಘುಪತಿ.— ಸರ್ಕಾರ ಹಂತಹಂತವಾಗಿ ಖರೀದಿ ಮಾಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದೆ ಅದನ್ನು ಎಲ್ಲ ಕಡೆ ಅನುಸರಿಸಲು ಸೂಚನೆ ಕೊಡುತ್ತೇವೆ. ಇನ್ನು ಖಾದಿ ಬೋರ್ಡಿನ ಅಧಿಕಾರಿಗಳ ತಂಡದೊಂದಿಗೆ ಖಾಸಗಿ ಜನ ಖಾದಿ ಹೆಸರಿನಲ್ಲಿ ಹಣ ದೋಚುತ್ತಿರುವ ಬಗ್ಗೆ ಸ್ಪೆಸಿಫಿಕ್ಕಾದ ಸಲಹೆ ಕೊಟ್ಟಿದ್ದಾರೆ. ಆದರ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆ. ಅಲ್ಲದೆ ಮಿನಿಮಮ್ ವೇಜಸ್ ಬಗ್ಗೆ ಕಾರ್ಮಿಕ ಮಂತ್ರಿಗಳ ಜೊತೆ ಚರ್ಚಿಸಿ ಇದಕ್ಕೇನು ಪರಿಹಾರ ಎಂದು ಹುಡುಕುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.— ಸರ್ಕಾರ ಒತ್ತಾಯ ಮಾಡಿ ಎಲ್ಲಾ ಇಲಾಖೆಗಳು ಖಾದಿ ವಸ್ತ್ರ ಉಪಯೋಗಿಸಬೇಕೆಂದು ಸಲಹೆ ಕೊಟ್ಟಿದೆ. ಅದನ್ನು ನಾವು ಮಾಡುತ್ತಿದ್ದೇವೆ. ಮೂಲತಃ ನಮ್ಮ ಎಕನಾಮಿಕ್ ಸಿಸ್ಟಂ ಏನು ಇದೆ ಅದರ ಬಗ್ಗೆ ಗಮನಹರಿಸಬೇಕಾಗುತ್ತದೆ. ಒಂದು ಕಡೆ ವಿಮಲ್ ಕಂಪೆನಿಯ ಬಟ್ಟೆ, ಇನ್ನೊಂದು ಕಡೆ ಅವನಿಗೆ ಕಾಂಪೀಟ್ ಮಾಡತಕ್ಕಂತಹ ಗಂಗಾರಾಮನೋ ಇಲ್ಲವೇ ಸಿಂಗಾರಾಮನೋ ಬಟ್ಟೆ ತಯಾರು ಮಾಡುತ್ತಾರೆ. ಅವರು ತಯಾರು ಮಾಡತಕ್ಕಂತಹ ಪ್ರೊಡಕ್ಷನ್ ವೆಚ್ಚ ಮತ್ತು ನಮ್ಮ ಖಾದಿ ವೆಚ್ಚ ನೋಡಿದಾಗ ಮತ್ತು ಅದರ ಎಕನಾಮಿಕ್ ಪಾಲಿಸಿ ನೋಡಿದಾಗ ಅವರಿಗೆ ಖಾದಿ ಕೊಂಡು ಕೊಳ್ಳಿ ಎಂದು ಹೇಳಿದರೆ ಕೊಂಡುಕೊಳ್ಳುವುದಿಲ್ಲ. ಅವರೇ ಸ್ವ ಇಚ್ಛೆಯಿಂದ ಅಭಿಮಾನದಿಂದ ಕೊಂಡುಕೊಳ್ಳಬೇಕು.

ಶ್ರೀ ಕೆ ಹೆಚ್. ಪಾಟೀಲ್.— ಖಾದಿ ಟೆಕ್ನಾಲಜಿ ಬೇರೆ ಅದರ ಸ್ಕೀಮ್. ಪ್ರಿನ್ಸಿಪಲ್ ಬೇರೆ.

ಶ್ರೀ ಜೆ. ಹೆಚ್. ಪಟೇಲ್.— ಒಂದು ಕಡೆ ಅಟ್ರಾಕ್ಟೀವ್ ಆದ, ಆಕರ್ಷಣೀಯವಾದ ವಸ್ತ್ರಗಳನ್ನು ಮಾಡಿ ಇದನ್ನೂ ಮಾಡಿದರೆ ಅವರು ಅದನ್ನೇ ಕೊಂಡುಕೊಳ್ಳುತ್ತಾರೆ. ಬಾಟಾ ಷೂ ಕಂಪೆನಿಯ ಷೂ ಅನ್ನೇ ಜನರು ತೆಗೆದುಕೊಳ್ಳುತ್ತಾರೆ ಹೊರತು ನಮ್ಮ ಊರಿನಲ್ಲಿ ತಯಾರಾದುದನ್ನು ಕೊಂಡು ಕೊಳ್ಳುವುದಿಲ್ಲ. The very system in which we are living it it is impossible to save this small scale and village industries. ಕುಂಬಾರರ ಮಡಿಕೆ ತೆಗೆದುಕೊಳ್ಳುವುದಿಲ್ಲ, ಪ್ಲಾಸ್ಟಿಕ್ ಸಾಮಾನು ಬರುತ್ತದೆಂದು ಅದನ್ನು ತೆಗೆದುಕೊಳ್ಳುತ್ತಾರೆ. 2 ರೂಪಾಯಿಗೆ ಪ್ಲಾಸ್ಟಿಕ್ ಚಪ್ಪಲಿ ಬರುತ್ತದೆಂದು ಅದನ್ನೇ ಕೊಂಡುಕೊಳ್ಳುತ್ತಾರೆ. ಮೂಲ ಕಾರಣ

ಇದು. ನಮ್ಮ ಇಲಾಖೆಯಲ್ಲಿ ತೆಗೆದುಕೊಳ್ಳಿ ಎಂದು ಹೇಳಬಹುದು. ನಮ್ಮ ಎಕನಾಮಿಕ್ ಸಿಸ್ಟಂ ಏನು ಇದೆ ಅದರೊಳಗೆ ಈ ಗ್ರಾಮೀಣ ಉದ್ಯಮವಾದ ಖಾದಿ ಮುಂತಾದವು ಬದುಕುವುದಕ್ಕೆ ಸಾಧ್ಯವಾಗದಂತಹ ರಾಷ್ಟ್ರೀಯ ನೀತಿ ನಮ್ಮಲ್ಲಿ ಇದೆ. ಆದರಿಂದ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ರಘುಪತಿ.— ಆಗಲೇ ಹೇಳಿದೆ ಇದರ ಬಗ್ಗೆ ಸರಕಾರೀ ಆಜ್ಞೆಯನ್ನು ಕೊಟ್ಟಿದ್ದೇವೆ ಎಂದು. ಕಿಟಕಿಗಳಿಗೆ ಮತ್ತು ಬೆಡ್‌ಷೀಟ್ ಮುಂತಾದವನ್ನು ಖಾದಿ ಇಲ್ಲವೇ ಹ್ಯಾಂಡ್ ಲೂಮ್ ಈ ಎರಡರಿಂದಲೇ ಖರೀದಿ ಮಾಡಬೇಕೆಂದು ಈಗಾಗಲೇ ಸರಕಾರಿ ಆಜ್ಞೆ ಆಗಿದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಬೆಳಗಾಂ ಜಿಲ್ಲೆಯ ಸತ್ತೂರಿ ಗ್ರಾಮದಲ್ಲಿ ಖಾದಿ ಗ್ರಾಮೋದ್ಯೋಗದ ವತಿಯಿಂದ ಅಂಬರ ಚರಕವನ್ನು ಮಾಡಬೇಕೆಂದು ವಿನಂತಿಸಿಕೊಂಡಿದ್ದೇವೆ. ಅಂಬರ ಚರಕ ಬರಬೇಕೆಂದು ಸರ್ಕಾರದ ನೀತಿಯಿದ್ದರೂ, ಇಲ್ಲಿಯವರೆಗೆ ಅಲ್ಲಿ ತೆಗೆದಿರುವುದಿಲ್ಲ. ಇನ್ನು ಬೈಲಹೋಂಗಲದಲ್ಲಿ ಇಂಡಸ್ಟ್ರಿಯಲ್ ಷೆಡ್ ಕಟ್ಟುವ ಸಲುವಾಗಿ ೧೦ ಎಕರೆ ಭೂಮಿಯನ್ನು ಸರ್ಕಾರದಿಂದ ಪುಕ್ಕಟೆಯಾಗಿ ಕೊಟ್ಟಿದೆ. ಇಂಡಸ್ಟ್ರಿಯಲ್ ಷೆಡ್ ಕಟ್ಟುವುದಕ್ಕೆ ಟೆಂಡರ್ ಕರೆದರೂ ಕೂಡ ಇಲ್ಲಿಯುವರೆಗೆ ಷೆಡ್ ಕಟ್ಟಿರುವುದಿಲ್ಲ. ಅದನ್ನು ಯಾವಾಗ ಕಟ್ಟಿಸುತ್ತೀರಿ ?

ಶ್ರೀ ಎಂ. ರಘುಪತಿ.—ನನ್ನ ಹತ್ತಿರ ಅದರ ಮಾಹಿತಿಯಿಲ್ಲ ತರಿಸಿಕೊಂಡು ಮಾನ್ಯ ಸದಸ್ಯರಿಗೆ ಕಳಿಸಿಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಉಪಾಧ್ಯಕ್ಷರೇ ಕೈಗಾರಿಕಾ ನೀತಿಯ ಬಗ್ಗೆ ಮತ್ತು ನಮ್ಮ ಸರ್ಕಾರದ ಆಡಳಿತ ಕ್ರಮದ ಬಗ್ಗೆ ಮಾನ್ಯ ಮೊಯಿಲಿಯವರು ದಿವಂಗತ ವಿಶ್ವೇಶ್ವರಯ್ಯನವರನ್ನು ನೆನೆಸಿಕೊಂಡು ಅವರಂತಹವರು ಹುಟ್ಟಿದ ಈ ರಾಜ್ಯದಲ್ಲಿ ಕೈಗಾರಿಕಾ ನೀತಿ ಹೇಗೆ ಇರಬೇಕಾಗಿತ್ತೋ, ಸ್ಥಿತಿ ಹೇಗೆ ಇರಬೇಕಾಗಿತ್ತೋ ಹಾಗೆ ಇಲ್ಲ ಎಂದು ವಿಶ್ಲೇಷಣೆ ಮಾಡಿದರು. ಜನತಾ ಸರ್ಕಾರ ಬಂದ ಮೇಲೆ ನಿಮ್ಮ ಸರ್ಕಾರದ ನೀತಿಯಿಂದ ಕೈಗಾರಿಕೆಗಳ ಸ್ಥಾಪನೆ ಮತ್ತು ಅವುಗಳ ಬೆಳವಣಿಗೆ ನಿಂತು ಬಿಟ್ಟಿದೆ ಮತ್ತು ಈಗ ನಡೆಯುತಕ್ಕಂಥಹ ದೊಡ್ಡ ಕಾರ್ಖಾನೆಗಳಾಗಲೀ, ಮಧ್ಯಮ ವರ್ಗದ ಕಾರ್ಖಾನೆಗಳಾಗಲೀ, ಸರ್ಕಾರಿ ವಲಯದಲ್ಲಿರತಕ್ಕಂತಹ ಮತ್ತು ಖಾಸಗೀ ವಲಯದಲ್ಲಿರತಕ್ಕಂತಹ ಕಾರ್ಖಾನೆಗಳು ಏನು ಇವೆ ಅವು ಬೆಳೆಯುವುದಕ್ಕೆ ಬೇಕಾದಂತಹ ವಾತಾವರಣ ನಮ್ಮಲ್ಲಿ ಇಲ್ಲ, ಪವರ್ ಕಟ್ ಇದೆ ಎಂದು ಹೇಳಿದರು. ಅವರು ಹೇಳುವಾಗ ಕೆಲವೊಂದು ಕಾರ್ಖಾನೆಗಳ ಬಗ್ಗೆ ಪ್ರಸ್ತಾಪ ಮಾಡಿದರು. ಆ ಕಾರ್ಖಾನೆಗಳ ಬಗ್ಗೆ ಬರುವುದಕ್ಕಿಂತ ಮುಂಚಿತವಾಗಿ ಕಳೆದ ವರ್ಷಕ್ಕಿಂತ ಈ ವರ್ಷ ಮತ್ತು ಅದರ ಹಿಂದಿನ ವರ್ಷಕ್ಕಿಂತ ಕಳೆದ ವರ್ಷದ ರಾಷ್ಟ್ರೀಯ ಚಿತ್ರ ಏನು ಇತ್ತು ಎಂದು ಅವರಿಗೂ ಗೊತ್ತಿದೆ. ಇದಕ್ಕೆ ಏನು ಕಾರಣವೆಂದು ಕೂಡ ಗೊತ್ತಿದೆ. ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಎಕನಾಮಿಕ್ ಟೈಮ್ಸ್‌ನವರು ಏನು ಕೊಟ್ಟಿದ್ದಾರೆಂದು ಹೇಳುತ್ತೇನೆ. ಅದು ಇಯರ್‌ವೈಸ್ ಇದೆ. ೮೫-೮೬ರಲ್ಲಿ ೮.೭ ಪರ್ಸೆಂಟ್ ಇತ್ತು, ೮೬-೮೭ರಲ್ಲಿ ೯.೧ ಪರ್ಸೆಂಟ್ ಇತ್ತು. Industrial growth year-wise 87-88 ರಲ್ಲಿ 8.1 ಕ್ಕೆ ಇಳಿದು ಇದು latest not available ಎಂದು ಹಾಕಿದ್ದಾರೆ. ಇದು ರಾಷ್ಟ್ರೀಯ ಚಿತ್ರ. ಆ ಮೇಲೆ ಹೇಳಿದರು, ರಾಷ್ಟ್ರದ ಇಂಡಸ್ಟ್ರಿಯಲ್ ಗ್ರೋತ್ ಏರುತ್ತಿರುವಾಗ ಕರ್ನಾಟಕದ್ದು ಇಳಿಯುತ್ತಿದೆ. ಆದ್ದರಿಂದ ಬೇಸಿಕಲಿ there is a kind of decination in the industrial growth in the country. I am not going to ask the reason why ? For example. textile industry. Textile Industry is almost going through depth crisis. Sugar Industries, performance last year was perhaps the best but industries did it ever. Now sericulture, particularly in Karnataka.

ನಾವು ಶೇಕಡ ೭೫-೮೦ ರಷ್ಟು ಭಾಗ ರೇಷ್ಮೆಯನ್ನು ಬೆಳೆಯುತ್ತಿದ್ದೇವೆ. ನಮ್ಮ ರೇಷ್ಮೆ ಬೆಳೆಯುವವನಾಗಲೀ ಅಥವಾ ರೇಷ್ಮೆ ವೀವರ್ಸ್‌ಗಾಗಲೀ ಇವತ್ತು ಜೀವನ ಮಾಡುವುದು ಕಷ್ಟವಾಗಿದೆ. ಹಾಗೆಯೇ ಕೋರ್ ಸೆಕ್ಟರ್ ಇಂಡಸ್ಟ್ರೀಸ್ ಬಗ್ಗೆ ಪವರ್‌ನದ್ದು ಗೊತ್ತೇ ಇದೆ. ಕೋಲ್ ಸ್ಟೀಲ್ ಸಿಮೆಂಟ್ all, except a few singular units why is Bhillai going through this crisis. It is such a massive and big unit – after all you take VISL is a small unit when compared to Bhillai why Tata has not

incurred loss ? Total public Sector investment by Central Government is of the order of 48 000 crores. Only last year, we have made nominal profit of Rs. 900 crores There was no profit at all from the Public Undertakings. So, we have to seriously think about this kind of trend - why is it happening'. Our beloved Prime Minister at one stage said "I am not prepared to be a garage for sick industries.'

Private Industries go sick and they come and stand before the Govt. and then they want that these Industries be taken over by the Govt. ಗುಜರಾತ್‌ನಲ್ಲಿ ೭೬ ಟೆಕ್ಸ್‌ಟೈಲ್ ಮಿಲ್ ಸಿಕ್ ಆಗಿವೆ, ಅವನ್ನೂ ತೆಗೆದುಕೊಳ್ಳಿ, ಟೆಕ್ಸ್‌ಟೈಲ್ ಕಾರ್ಪೊರೇಷನ್‌ರವರಾದರೂ ತೆಗೆದುಕೊಂಡು ಜೀವ ಉಳಿಸಿ ಎಂದು ಕೇಳಿದರು. ನಮ್ಮಲ್ಲಿ ಆರು ಟೆಕ್ಸ್‌ಟೈಲ್ ಮಿಲ್‌ಗಳು ಬಹಳ ತೊಂದರೆಯಲ್ಲಿ ಇದ್ದಾವೆ. ಅದಕ್ಕೆ ಆಮೇಲೆ ಬರುತ್ತೇನೆ. ಹೀಗೆ ಇಡೀ ರಾಷ್ಟ್ರದಲ್ಲಿ ಇಂಡಸ್ಟ್ರಿಯಲ್ ಗ್ರೋಥ್ ಬಗ್ಗೆ decleration ಇದೆ. ನಮ್ಮ ಎಕ್ಸ್‌ಪೋರ್ಟ್, ಇಂಪೋರ್ಟ್ ಪಾಲಿಸಿ ನಮಗೆ ಬೇಕಾದಂಥ ರಾಷ್ಟ್ರೀಯ ಉತ್ಪಾದನೆಯನ್ನು ಬೆಳೆಸುವುದಕ್ಕೆ ಮತ್ತು ವಿತರಣೆ ಮಾಡುವುದಕ್ಕೆ ಅಡ್ಡಿ ಆಗತಕ್ಕಂಥ ಕ್ರಮಗಳು ಆಗಿವೆ. ನಾವು ಸಕ್ಕರೆಯನ್ನು ಹೋದ ವರ್ಷ ೮೭ ಲಕ್ಷ ಟನ್ ಉತ್ಪಾದನೆ ಮಾಡಿದೆವು. ರಿಕವರಿ ಕೂಡಾ ಚೆನ್ನಾಗಿ ಆಯಿತು. ಹಾಗೆಯೇ ಯೀಲ್ಡ್ ಕೂಡಾ ಚೆನ್ನಾಗಿ ಬಂತು. ಬಹುಶಃ ನಮ್ಮ ಕನ್‌ಸ್ಯೂಮರ್ಸ್ ಬೆಲೆ ಜಾಸ್ತಿ ಕೊಡಬಹುದು. ಆಗ ಏನು ಮಾಡುವುದು ಎಂದರೆ ಇಂಪೋರ್ಟ್ ಮಾಡುವುದು. ನಮ್ಮ ರೈತನಿಗೆ ಅನುಕೂಲವಾಗುವಂಥ ವಾತಾವರಣ ಬಂತು ಎಂದರೆ ಕೆನಡಾ ಅಥವಾ ಅಮೇರಿಕಾ ರೈತನಿಗೆ ಅನುಕೂಲ ಆಗುತ್ತದೆ. ಆಗ ಅವರನ್ನು ಒಳಕ್ಕೆ ತರುತ್ತೇವೆ. ನಮಗೆ ಏನಾದರೂ ತೊಂದರೆ ಆಯಿತು ಎಂದರೆ ನಮಗೆ ಕಬ್ಬನ್ನು ಸುಟ್ಟಿದ್ದೂ ಅನುಭವ ಇದೆ. ೧೭೦ ರೂಪಾಯಿ ಪ್ರೈಸನ್ನು ಆಗ ಕಂಪನಿಗಳೂ ಕೊಡುತ್ತಿರಲಿಲ್ಲ. ಅಂಥ ಹೊತ್ತಿನಲ್ಲಿ ಯಾರೇ ಸರ್ಕಾರ ಇರಲಿ, ಯಾರೂ ಸಹಾಯಕ್ಕೆ ಬರುವುದಿಲ್ಲ. ಹಾಗೆಯೇ ಇವತ್ತು ರೇಷ್ಮೆ, ಜವಳಿ, ಕಾಟನ್ ಯಾರ್ನ್ ಎಕ್ಸ್‌ಪೋರ್ಟ್ ಆಗುತ್ತದೆ. ಕಾಟನ್ ಎಕ್ಸ್‌ಪೋರ್ಟ್ ಆಗುತ್ತದೆ, ಈ ಜವಳಿಯಲ್ಲಿ ಗಿರಣಿಗಳು ಒಂದೊಂದೇ ಕಳಚಿಕೊಂಡು ಬೀಳುತ್ತಿವೆ. ನಾನು ನನ್ನ ರಾಜ್ಯದಲ್ಲಿರ ತಕ್ಕಂಥ ನಮ್ಮ ಸರ್ಕಾರದಲ್ಲಿ ಅಧೀನದಲ್ಲಿರತಕ್ಕಂಥ ಕೆಲವು ಕಾರ್ಖಾನೆಗಳ ಬಗ್ಗೆ ಮುತುವರ್ಜಿ ವಹಿಸಿ ಆದರೆ ರಾಷ್ಟ್ರೀಯ ಆರ್ಥಿಕ ನೀತಿಯ ಬಗ್ಗೆ, ಆಮದು ರಫ್ತು ನೀತಿಯ ಬಗ್ಗೆ ನಾನು ಏನೂ ಮಾಡುವು ದಕ್ಕೂ ಆಗುವುದಿಲ್ಲ, ನಾನೇ ಅನುಭವಿಸಬೇಕು ಅಷ್ಟೆ. ಆದುದರಿಂದ ನಮ್ಮ ರಾಜ್ಯದಲ್ಲಿ ಬಹಳ ಅನಾಹುತ ಆಗುತ್ತಿದೆ ಎನ್ನತಕ್ಕಂಥ ಮಾತನ್ನು ನಾವು ಆಡಿದರೆ ನಾನು ಮೊಯಿಲಿಯವರಲ್ಲಿ ವಿನಮ್ರ ವಾಗಿ ಕೇಳಿಕೊಳ್ಳುವುದಿಷ್ಟೆ ಸ್ವಾಮಿ. ಕಳೆದ ನಾಲ್ಕು ವರ್ಷದಲ್ಲಿ ನಾನು ಬಹಳ ದೊಡ್ಡದಾಗಿ ಅಚೀವ್ ಮಾಡಿದ್ದೇವೆ ಎಂದು ಹೇಳುವುದಿಲ್ಲ. ಕಳೆದ ಎರಡು ವರ್ಷದಲ್ಲಿ ೬ ಸಕ್ಕರೆ ಕಾರ್ಖಾನೆಗಳಲ್ಲಿ ಎರಡು ಸಕ್ಕರೆ ಕಾರ್ಖಾನೆಗಳು ನಿಂತು ಹೋಗಿದ್ದವು. ಒಂದನ್ನು ಸರ್ಕಾರದ ಪ್ರಯತ್ನದಿಂದ ಆದರೆ ಗಂಗಾವತಿ ಶುಗರ್ ಮಿಲ್‌ನ್ನು ಪ್ರಾರಂಭ ಆಗಿದೆ ಅಲ್ಲಿನ ರೈತರು ಸಂತೋಷ ಪಡುತ್ತಿದ್ದಾರೆ ಎಂದು ಮಾರ್ಗ ಇಲ್ಲವೆಂದು ವರ್ಕರ್ಸ್‌ಗೆ ಅಟ್‌ಲೀಸ್ಟ್ ಕೆಲಸ ಸಿಕ್ಕಿತು. ಇವುಗಳನ್ನು ಮಾರಾಟ ಮಾಡಿದರು ಎಂದು ಹೇಳುತ್ತಾರೆ. ಮಾರಾಟ ಮಾಡಿದ ತಕ್ಷಣ ಖಾಸಗಿಯವರಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಅದನ್ನು ನಾನು ಇಟ್ಟುಕೊಳ್ಳುವ ಹಾಗೆ ಇಲ್ಲ, ಅದನ್ನು ನಡೆಸುವ ಹಾಗೆಯೂ ಇಲ್ಲ. ಅದನ್ನು ಬೇರೆಯವರಿಗೆ ಕೊಡಬಾರದು ಹೀಗೆ ಏನು ಮಾಡಿದರೂ ದೋಷ ಹುಡುಕುವುದು ಸರಿಯಲ್ಲ, ಈ ತರಹ ಇರಬಾರದು. ಆದ್ದರಿಂದ ನಮ್ಮ ನಿಲುವು ಏನು ? ಇದು ವಿಕ್ರಾಂತ್ ಟೈರ್ಸ್ ಅನ್ನು ಮಾರಾಟ ಮಾಡುತ್ತಾರೆ ಎಂದು ಹೇಳಿದರು, ಪತ್ರಿಕೆಯಲ್ಲಿಯೂ ಬಂತು ನಾವು ಸ್ಪಷ್ಟವಾಗಿ ಹೇಳಿದ್ದೆ, ಮಾರಾಟ ಮಾಡುವುದಿಲ್ಲ ಎಂದು. ಈ ವರ್ಷ ಅವರು ಲಾಭ ಮಾಡಿದ್ದಾರೆ, ಡಿವಿಡೆಂಡ್ ಹಂಚಿದ್ದಾರೆ. ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಇವರಿಗೆ ಗೊತ್ತಿದೆ, ಈ ವರ್ಷ ಅದೂ ಲಾಭ ಮಾಡಿದ್ದೆ, ಡಿವಿಡೆಂಟ್ ಹಂಚಿದ್ದಾರೆ. ಸಣ್ಣ ಯೂನಿಟ್ ಮೈಸೂರು ಸಿಲಿಕೇಟ್ಸ್ ಅದನ್ನು ಮಾರಾಟ ಮಾಡುತ್ತೇವೆಂದು ಹೇಳಿದರು ಅವರೂ ಸಹ ಸಣ್ಣದಾಗಿ ಲಾಭ ಮಾಡುತ್ತಿದ್ದಾರೆ. ಅದು ೧೦ ಲಕ್ಷ ಇರಬಹುದು, ೫ ಲಕ್ಷ ಇರಬಹುದು. ಕಾರಣ ಅವರ ಕೆಲಸ ಪರಿಣಾಮ. ಉತ್ತಮವಾಗಿವೆ.

ಇಷ್ಟು ಪವರ್‌ಕಟ್ ಇದ್ದು ಮತ್ತು financial constraints ಇದ್ದು by sheer improving the management, and by taking the workers into confidence and taking some timaly decisions they have done some thing ಉತ್ತಮ ಮಂಡ್ಯಾ ಶುಗರ್ ಫ್ಯಾಕ್ಟರಿ ಹೋದವರ್ಷ ತೊಂದರೆಯಲ್ಲಿತ್ತು. ಅದು ಈ ವರ್ಷ ಲಾಭ ಮಾಡಿಲ್ಲ. ಆದರೆ ಕೆಪಾಸಿಟಿಗೆ ರನ್ ಮಾಡಿದ್ದರೆ ಲಾಭ ಆಗುತ್ತಿತ್ತು. ಐದು ಲಕ್ಷ ಟನ್ ಅರೆದಿದ್ದರೆ ಲಾಭ ಆಗುತ್ತಿತ್ತು. ಒಟ್ಟು ರಾಜ್ಯದಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರಿಗಳನ್ನು ನಾವು ತೆಗೆದುಕೊಂಡರೆ ಅದಕ್ಕೆ ಒಂದು ವಿಶಿಷ್ಟವಾದ ರೋಗ ಇದೆ, ಅದಕ್ಕೆ ನಾವು ಕಾರಣ ಅಲ್ಲ. ಕೆ.ಆರ್. ಮಿಲ್ಸ್ ಇವತ್ತು ಸತ್ತು ಹೋಗಿದ್ದರೆ ಅದಕ್ಕೆ ನಾವು ಕಾರಣ ಅಲ್ಲ. ದಾವಣಗೆರೆಯಲ್ಲಿ ಗಣೇಶ ಸಿದ್ದೇಶ್ವರ್‌ಗೆ ಇವೊತ್ತು ನಾವು ಜೀವ ತುಂಬುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಸದ್ಯದಲ್ಲಿ ಅದಕ್ಕೆ ಬೋರ್ಡ್ ಆಫ್ ಇಂಡಸ್ಟ್ರಿಯಲ್ ರೀ ಫೈನಾನ್ಸಿಂಗ್, ರಿಹ್ಯಾಬಿಲಿಟೇಷನ್ ಸಂಸ್ಥೆಗೆ ರೆಫರ್ ಮಾಡಿದ್ದೇವೆ. ಈಗ ಅದಕ್ಕೆ ಅವರು ಏನಾದರೂ ಜೀವ ಉಳಿಸುವುದಕ್ಕೆ ಸಹಾಯ ಮಾಡಿದರೆ ಮಾಡುತ್ತಾರೆ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ವೆದರ್ ಇಟ್ ಈಸ್ ಟೆಕ್ಸ್‌ಟೈಲ್ ಇರಲಿ ಅಥವಾ ಶುಗರ್ ಇರಲಿ, ಹೆಚ್ಚು ಕಾರ್ಖಾನೆಗಳು ಸಿಕ್ ಆಗಿವೆ. ಯಾಕೆಂದರೆ ಕೇವಲ ಕೋ-ಆಪರೇಟಿವ್ ಸೆಕ್ಟಾರ್‌ನಲ್ಲಿ ಮಾತ್ರ ಸಿಕ್ ಆಗಿಲ್ಲ. ಕೆಲವು ಜಾಯಿಂಟ್ ಸೆಕ್ಟಾರ್‌ನಲ್ಲಿ ಕೂಡ ಆಗಿವೆ ಖಾಸಗಿಯವರ ಇಂಡಸ್ಟ್ರಿಯಲ್ಲಿ ಸಹ ಲುಕ್ಸಾನು ಆಗಿದೆ. Management industries ನಲ್ಲಿ the argument that it should be profit making. ನಿನ್ನೆ ಮಾನ್ಯ ಮೂಡಲಗಿರಿಯಪ್ಪನವರು ಪಬ್ಲಿಕ್ ಸೆಕ್ಟಾರ್‌ನಲ್ಲಿರತಕ್ಕ ಫ್ರೀಡಂ ಏನಿದೆ, ಅದು ಪ್ರೈವೇಟ್ ಸೆಕ್ಟಾರ್‌ನಲ್ಲಿ ಇಲ್ಲ, ಅದನ್ನು ಪ್ರೈವೇಟ್ ಸೆಕ್ಟಾರ್‌ಗೆ ಕೊಟ್ಟು ಬಿಡಿ ಎಂದರು. ನಾವು ಪಬ್ಲಿಕ್ ಸೆಕ್ಟಾರ್‌ನಲ್ಲಿ ಯಾವುದಕ್ಕೆ ಫ್ರೀಡಂ ಕೊಟ್ಟಿದ್ದೇವೆ, ಮ್ಯಾನೇಜ್‌ಮೆಂಟ್ ನಮ್ಮವರು ಆಫೀಸರ್ಸ್ ಇರುತ್ತಾರೆ, ಇನ್ನೆಲ್ಲಾ tax laws, trade union laws Iudustrial disputes Act, ಇವೆಲ್ಲಾ ಅದಕ್ಕೂ apply ಆಗುತ್ತದೆ. ಇದಕ್ಕೂ ಆಗುತ್ತದೆ. ಬಹುಶಃ ಅವರು ಏನು ಗಮನದಲ್ಲಿ ಇಟ್ಟುಕೊಂಡಿದ್ದಾರೋ ಏನೋ ಅವರ ಭಾವನೆ ಖಾಸಗೀ ಕಾರ್ಖಾನೆಗಳಿಗೆ ಸರ್ಕಾರ ಹೆಚ್ಚು ರಿಸ್ಟ್ರಿಕ್ಷನ್ ಹಾಕುತ್ತದೆ ಎಂದು ಇದಕ್ಕೆ ಹಾಗೆ ಅಲ್ಲ. ಪಬ್ಲಿಕ್ ಸೆಕ್ಟಾರ್‌ಗೆ ರಿಸ್ಟ್ರಿಕ್ಷನ್ ಹಾಕುವುದಿಲ್ಲ ಎಂದು ಆ ಭಾವನೆ ಸರಿಯಲ್ಲ. Public sector or private sector ನಾವು ಇವೊತ್ತು ಅದರ ಎಫಿಷಿಯೆನ್ಸಿ, ನೆಟ್ ರಿಸಲ್ಟ್‌ನಲ್ಲಿ ನೋಡುತ್ತೇವೆ, ಜನಸಾಮಾನ್ಯರ ದುಡ್ಡನ್ನು ನಾವು ಪಬ್ಲಿಕ್ ಸೆಕ್ಟಾರ್‌ನಲ್ಲಿ ಹಾಕಿ ಲುಕ್ಸಾನು ಮಾಡಿಕೊಳ್ಳುವುದಕ್ಕೆ ಹೋಗುವುದಿಲ್ಲ. ಬಸವಲಿಂಗಪ್ಪನವರು ಏನು ಒಂದು ಅಂಕಿ ಅಂಶಗಳನ್ನು ಕೊಟ್ಟರು, ಅದು ಸರಿಯಲ್ಲ, ನಾವು ನಮ್ಮ ರಾಜ್ಯದಲ್ಲಿ ಸರ್ಕಾರಿ ಕಾರ್ಖಾನೆಗಳಿಗೆ ಹಾಕಿರತಕ್ಕ ಬಂಡವಾಳ about 1600 ಕ್ರೋರ್ಸ್ ನಷ್ಟು, ನಾಲ್ಕು ಸಾವಿರ ಕೋಟಿ ರೂಪಾಯಿ ಅಲ್ಲ. ಬೇರೆಯವರಿಗೆ ಅಂದರೆ ಖಾಸಗಿಯವರಿಗೆ ನಾವು ಸಹಾಯ ಮಾಡುವುದಕ್ಕೆ ಹಾಕಿರತಕ್ಕ ಬಂಡವಾಳ ಬಹಳ ಕಡಿಮೆ. ನಾವೇ ಕುಳಿತುಕೊಂಡು ನಮ್ಮ ರಾಜ್ಯದಲ್ಲಿ ಎಲ್ಲಾ ಕಾರ್ಖಾನೆ ಹೋಗುತ್ತಿದೆ, ಎಲ್ಲಾ ಹೋಗುತ್ತಿದೆ ಎಂದರೆ ಏನರ್ಥ ? ಸನ್ಮಾನ್ಯ ಮೊಯಿಲಿಯವರು ಯಾವುದೋ ಒಂದು ವಿಷಯದ ಬಗ್ಗೆ ಹೇಳಿದರು. ಏನೋ ನೇವಲ್ ಹೋಗಿದೆ ಎಂದರು ನಾನು ಬರೆದುಕೊಳ್ಳುವುದಕ್ಕೆ ಆಗಲಿಲ್ಲ. ಸ್ವಲ್ಪ ಲೇಟಾಗಿ ಬಂದೆ ಯಾವುದು ಶಿಫ್ಟ್ ಆಗಿರುವುದು ಆದರೆ ಕಾರವಾರ ನೇವಲ್ ಬೇಸ್ ಶಿಫ್ಟ್ ಆಗಿಲ್ಲ. ನಾನು ಕೇಳಿದೆ, ವಿಜಯನಗರ ಸ್ಟೀಲ್ ಪ್ಲಾಂಟ್ ಬಂದೇ ಬರುತ್ತದೆ ಎಂದು ಹೇಳಿದರು. I am so happy about it. I am not looking at it suspicion. ಇವತ್ತಲ್ಲನಾಳೆ ಬರುತ್ತದೆ. ನಾವು ಮಾತನಾಡುವಾಗ ನಮ್ಮ ರಾಜ್ಯದ ಕಾರ್ಖಾನೆಗಳನ್ನು ನಾವೇ ಹಿಂಜರಿಕೊಂಡರೆ, ಗೇಲಿ ಮಾಡಿ ಮಾತನಾಡಿದರೆ, ಪಕ್ಕದಲ್ಲಿರತಕ್ಕಂಥ ರಾಜ್ಯಗಳಾಗಲಿ, ಅಥವಾ ಬೇರೆ ದೇಶದಿಂದ ಅಥವಾ ಬೇರೆ ರಾಜ್ಯಗಳಿಂದ ಬರುವವರೇ ಆಗ ಅವರಿಗೇ ಈ ರಾಜ್ಯದ ಬಗ್ಗೆ ವಿಶ್ವಾಸ ಇಲ್ಲ ಎಂದು ತಿಳಿದು ಕೊಳ್ಳುತ್ತಾರೆ ನಮ್ಮ ಸರ್ಕಾರದ ಬಗ್ಗೆ ಬೇಕಾದರೆ ಟೀಕೆ ಮಾಡಲಿ Industrial ಗ್ರೋತ್ is annidependent phenomenon, only the Government can help it and if they want is they can stop it.

೧–೦೦ ಪಿ. ಎಂ.

ನಮ್ಮ ರಾಜ್ಯ ಇಂಡಸ್ಟ್ರಿಯಲ್ growth ಬಗ್ಗೆ ಹೇಳುವುದಾದರೆ ವಿಶ್ವೇಶ್ವರಯ್ಯನವರ ಹೆಸರನ್ನೂ ತಾವು ಹೇಳಿದ್ದೀರಿ. ನಾವು ಬಂದಮೇಲೆ ಕಳೆದ ನಾಲ್ಕು ವರ್ಷಗಳಲ್ಲಿ ಕೈಗಾರಿಕಾ ಬೆಳವಣಿಗೆ ಸಾಕಷ್ಟು ಪ್ರಮಾಣದಲ್ಲಿ ಆಗಿದೆ. ವಿಕ್ರಾಂತ್ ಟೈರ್ಸ್, ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಜರ್ಸ್ ಹೀಗೆ ನಾಲ್ಕು ದೊಡ್ಡ ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಬಂದಿವೆ, they have turned corner, they have m de tne profit ಅದೇರೀತಿ ಎಂ.ಇ.ಐ. ನಂತಹ ಕೈಗಾರಿಕೆ ಸಹ ಬಹಳ ಕಷ್ಟದಲ್ಲಿತ್ತು ಮೊದಲು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದವು ಆದರೆ ಈಗ ಅದು ತನ್ನ ಕಾಲ ಮೇಲೆ ತಾನು ನಿಲ್ಲುವ ಸ್ಥಿತಿಗೆ ಬಂದಿದೆ. ನಷ್ಟದಲ್ಲಿದ್ದ ಆರೇಳು ಸಕ್ಕರೆ ಕಾರ್ಖಾನೆಗಳು ಇವೊತ್ತು ಚೆನ್ನಾಗಿ ನಡೆಯುತ್ತಿವೆ. ಚೆನ್ನಾಗಿದ್ದವುಗಳನ್ನು ಆದರೂ ಹೇಳಬಾರದೇ ? ನಿಂತಿದ್ದ ಕೆಲವು ಸಕ್ಕರೆ ಕಾರ್ಖಾನೆಗಳ ಕೆಲಸವನ್ನು ಮತ್ತೆ ಪ್ರಾರಂಭ ಮಾಡಿದ್ದೇವೆ. ಕೆಲವನ್ನು ಏನು ಮಾಡುವುದಕ್ಕಾಗುವುದಿಲ್ಲ. ಉದಾ : ವಾಣಿ ವಿಲಾಸ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಬೇಕೆಂದರೆ, ಆ ಭಾಗದಲ್ಲಿ ನೀರು ಇಲ್ಲದ ಕಾರಣ ಕಬ್ಬನ್ನು ಬೆಳೆಯಲು ಸಾಧ್ಯವಾಗಿಲ್ಲ. ಕಬ್ಬು ಬೆಳೆಯದ ಕಡೆ ಸಕ್ಕರೆ ಕಾರ್ಖಾನೆ ಇಟ್ಟರೆ ಏನು ಪ್ರಯೋಜನ ? ಬ್ರಹ್ಮಾವರ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಲು ಯಾರು ಲೈಸನ್ಸ್ ಕೊಟ್ಟರೋ ನನಗೆ ಗೊತ್ತಿಲ್ಲ, ಕರಾವಳಿ ಪ್ರದೇಶದಲ್ಲಿ ಇವರು ಎಂತಹ ಕಬ್ಬನ್ನು ಬೆಳೆಸುತ್ತಾರೆ ? ಬ್ರಹ್ಮಾವರದಲ್ಲಿ ಶುಗರ್ ಫ್ಯಾಕ್ಟರಿಗೆ ಲೈಸೆನ್ಸ್ ಯಾರು ಕೊಡಿಸಿದ್ದು ಸ್ವಾಮಿ ? ನೀವೋ ನನಗೆ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ನಿಮಗೆ ಅದನ್ನು ನಡೆಸುವುದಕ್ಕೆ ಅಸಮರ್ಥರಾಗಿದ್ದರೆ ಆಗುವುದಿಲ್ಲವೆಂದು ಹೇಳಿಬಿಡಿ. ನೀವು ಅದನ್ನು ನಡೆಸಲು ಅಸಮರ್ಥರಾದರೆ ನಾವು ಏನು ಮಾಡುವುದಕ್ಕಾಗುತ್ತದೆ ?

ಶ್ರೀ ಜೆ. ಹೆಚ್. ಪಟೇಲ್.—ಈ ತರಹದ ಹೀರೋಯಿಜಮ್ ಬೇಡ. ಹಾಗಿದ್ದರೆ ಕರಾವಳಿ ಪ್ರದೇಶದಲ್ಲಿ ಒಂದು ಎಕರೆಯಲ್ಲಿ ಎಷ್ಟು ಕಬ್ಬನ್ನು ಬೆಳೆಯಲು ಸಾಧ್ಯ ಹೇಳಿ ? ಅಲ್ಲಿ ಈಗ ೪೦ ಸಾವಿರ ಟನ್ ಕಬ್ಬನ್ನು ಅರೆದು ನೂರು ಚೀಲ ಸಕ್ಕರೆಯನ್ನು ಉತ್ಪಾದನೆ ಮಾಡಿದ್ದಾರೆ. ಈ ರೀತಿಯಾದರೆ ಅಲ್ಲಿ ಹಾಕಿರುವಂತಹ ಬಂಡವಾಳಕ್ಕೆ ಬಡ್ಡಿಯನ್ನು ಸಹ ಕೊಡುವುದಕ್ಕಾಗುವುದಿಲ್ಲ ಕಬ್ಬನ್ನು ಹೆಚ್ಚಾಗಿ ಬೆಳೆಯುವ ಕಡೆ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಿದರೆ ಲಾಭ ಹೆಚ್ಚು ಬರುತ್ತದೆ. ಇಂತಹ ಪ್ರದೇಶಗಳಲ್ಲಿ ಇನ್ನೂ ನಾಲ್ಕು ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಲು ನಾವು ಕೇಂದ್ರದಿಂದ ಲೈಸನ್ಸ್ ಕೇಳಿದ್ದೇವೆ. ನಮ್ಮ ರಾಜ್ಯದಲ್ಲಿ ಕಬ್ಬನ್ನು ಹೆಚ್ಚು ಬೆಳೆಯುತಕ್ಕಂಥ ಒಳ್ಳೆಯ ವಾತಾವರಣ ಇದೆ. ಶಿವಮೊಗ್ಗ, ಬೆಳಗಾಂ ಹಾಗೂ ಇನ್ನಿತರ ಕಡೆಗಳಲ್ಲಿರುವಂತಹ ನಾಲ್ಕಾರು ಸಕ್ಕರೆ ಕಾರ್ಖಾನೆಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಲಾಭ ಸಹ ಬರುತ್ತಿದೆ. ಆದ್ದರಿಂದ ನೀವು ಈ ಬಗ್ಗೆ ಸ್ವಲ್ಪ ಬಿಚು ಮನಸ್ಸಿನಿಂದ ನೋಡಬೇಕು. ಮತ್ತೆ ಮಾನ್ಯ ಮೊಯಿಲಿ ಅವರು ಮಾತನಾಡುವಾಗ ಈ ಎನ್. ಆರ್.ಐ. ನವರು ಲ್ಯಾಂಡ್ ಗ್ರಾಬಿಂಗ್ ಸಲುವಾಗಿ ಇಲ್ಲಿಗೆ ಬರುತ್ತಾರೆಂದು ಟೀಕೆ ಮಾಡಿದರು. ಇವರು ನಮ್ಮ ರಾಜ್ಯಕ್ಕೆ ಬಂದು ಕೈಗಾರಿಕೆಗಳಲ್ಲಿ ಬಂಡವಾಳ ತೊಡಗಿಸಬೇಕೆಂದು ಕೇಳಿಕೊಂಡಿದ್ದು ನಾವು. ನಮ್ಮ ಒಂದು ಪ್ರಯತ್ನದ ಸಲುವಾಗಿ ಇವರು ಕಳೆದ ಎರಡು ವರ್ಷಗಳಿಂದ ಇಲ್ಲಿ ತಮ್ಮ ಹಣವನ್ನು ಇನ್‌ವೆಸ್ಟ್ ಮಾಡುತ್ತಿದ್ದಾರೆ. ಆದರೆ ಗುಜರಾತ್‌ನಲ್ಲಿ ಇವರು ಕಳೆದ ಆರೇಳು ವರ್ಷಗಳಿಂದ ತಮ್ಮ ಹಣವನ್ನು ಇನ್‌ವೆಸ್ಟ್ ಮಾಡಲು ಪ್ರಾರಂಭ ಮಾಡಿದ್ದಾರೆ. ಅದೇ ರೀತಿ ದೆಹಲಿಯಲ್ಲಿ ಕಳೆದ ಹತ್ತು ವರ್ಷಗಳಿಂದ ಇವರು ಹಣ ಇನ್‌ವೆಸ್ಟ್ ಮಾಡುತ್ತಿದ್ದಾರೆ. In the case of performance with regard to P.R.I investment we stand fourth in the country as per the report of the Reserve Bank of India. ಈ ಎನ್.ಆರ್.ಐ. ನವರು ಯಾವ ಸೆಕ್ಟರ್‌ನಲ್ಲಿ ಹೆಚ್ಚು ಹಣವನ್ನು ತೊಡಗಿಸುತ್ತಿದ್ದಾರೆಂದರೆ, ಎಲೆಕ್ಟ್ರಾನಿಕ್ಸ್‌ನಲ್ಲಿ ಹೆಚ್ಚು ಹಣವನ್ನು ತೊಡಗಿಸುತ್ತಿದ್ದಾರೆ, It has come in a big way. Already Rs. 200 crores has been invested Bangalore is going to be an Electronics City of India. ಅಂದರೆ ಇಲ್ಲಿ ಅಷ್ಟು ಒಳ್ಳೆಯ ವಾತಾವರಣ ಇದೆ, ಇಲ್ಲಿಯಾದರೆ ಸಾಕಷ್ಟು ಕೆಲಸಗಾರರು ಮತ್ತು ನುರಿತ ತಾಂತ್ರಿಕ ಕ್ಷೇತ್ರದಲ್ಲಿ ತಜ್ಞರು ಸಿಗುತ್ತಾರೆಂದುಕೊಂಡು ಅವರು ಇಲ್ಲಿಗೆ ಬರುತ್ತಾರೆ. ಆದರೆ ಇಲ್ಲಿರುವವರು ಅವರಿಗೆ ಬರಬೇಡಿ ಬರಬೇಡಿ ಎಂದು ತಮಟೆ ಹೊಡೆಯುತ್ತಾರೆ. ನೀವು ಬೇಕಾದರೆ ನಮ್ಮ ಸರ್ಕಾರಕ್ಕೆ ಬೈಯಿರಿ, ಆದರೆ ನಮ್ಮ ರಾಜ್ಯದ ಆರ್ಥಿಕ ಪ್ರಗತಿಯ ಬಗ್ಗೆ ನೀವು

ಯೋಚನೆ ಮಾಡುವುದು ಬೇಡವೇ ? ಕೆ.ಎಸ್.ಡಿ ಎಲ್. ಬಗ್ಗೆ ಹೇಳಿದರು, ನಿಜ, ಅದು ಹಲವಾರು ಏರಿಳಿತಗಳನ್ನು ಕಂಡು ಈಗ ಒಂದು ಸ್ಥಿತಿಗೆ ಬಂದಿದೆ. ನಾನು ಅದರ ಹಿಂದಿನ ಕಥೆಗೆ ಈಗ ಹೋಗುವುದಿಲ್ಲ. ಅದು ಕೊನೆಯಪಕ್ಷ ಇನ್‌ಸ್ಟಾಲ್ಡ್ ಕೆಪಾಸಿಟಿಯಲ್ಲಿ ಶೇಕಡಾ ೫೦ರಷ್ಟು ಆದರೂ ಉತ್ಪಾದನೆ ಮಾಡಬೇಕಾಗುತ್ತದೆ ಆದರ ಕೆಪಾಸಿಟಿ ಇರುವುದು ೨೬ ಸಾವಿರ ಟನ್‌ಗಳಷ್ಟು. ಈಗ ಅಲ್ಲಿ ೧೨ ರಿಂದ ೧೩ ಸಾವಿರ ಟನ್‌ಗಳಷ್ಟು ಉತ್ಪಾದನೆ ಆಗುತ್ತಿದೆ. ಇಲ್ಲಿ ತಯಾರು ಆಗುವಂತಹ ಸೋಪ್‌ಗಳನ್ನು ಮಾರಾಟ ಮಾಡುವಂತಹ ಕೆಲಸವನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಅವರು ವಹಿಸಿಕೊಂಡಿದ್ದಾರೆ, ಆದರೆ ಈ ಎರಡು ಸಂಸ್ಥೆಗಳು ಹೊಂದಿಕೊಂಡು ಹೋಗುತ್ತಿಲ್ಲ. ಅಲ್ಲಿನ ಮೇನೇಜಿಂಗ್ ಡೈರೆಕ್ಟರ್ ಅವರು ಈ ಸಂಸ್ಥೆಯ ಮೇನೇಜಿಂಗ್ ಡೈರೆಕ್ಟರ್ ಅವರ ಮೇಲೆ ದೂರುತ್ತಾರೆ. ಇಲ್ಲಿನ ಮೇನೇಜಿಂಗ್ ಡೈರೆಕ್ಟರ್ ಅವರ ಆ ಸಂಸ್ಥೆಯ ಮೇನೇಜಿಂಗ್ ಡೈರೆಕ್ಟರ್ ಅವರ ಮೇಲೆ ದೂರುತ್ತಾರೆ. ಅಷ್ಟೇ ಅಲ್ಲ, ವಿದೇಶಗಳಲ್ಲಿಯೂ ಸಹ ಅಪಪ್ರಚಾರ ಮಾಡಿದರು. ನೀವು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿರಿ ಎಂದು ಕೇಳಿದಿರಿ, ನಾವು ಅವರನ್ನು ಕರೆದು ಕೆಲವರ ಮೇಲೆ ಆಕ್ಷನ್ ತೆಗೆದುಕೊಂಡೆವು.

ಶ್ರೀ ಕೆ.ಹೆಚ್. ಪಾಟೀಲ್.—ಒಬ್ಬ ಐ.ಎ.ಎಸ್. ಆಫೀಸರ್ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರನ್ನು ೬ ತಿಂಗಳು ಇಟ್ಟು ಪಗಾರ ಕೊಡಬೇಕು. ಎನ್‌ಕ್ವೈರಿ ಮಾಡಿ ಅವರನ್ನು ಮನೆಗೆ ಕಳಿಸಬೇಕು; ಇಲ್ಲ ಅಂದರೆ ನೌಕರಿಗೆ ಹಚ್ಚಿಕೊಳ್ಳಬೇಕು. ಇಲ್ಲದೇ ಹೋದರೆ ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಆಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ಬಂದಮೇಲೆ ಅವರ ಪರ್‌ಫಾರ್ಮೆನ್ಸ್ ಇಂಪ್ರೂವ್ ಬಗ್ಗೆ ಕ್ವಾರ್ಟರ್ಲಿ ಪ್ರೊಡಕ್ಷನ್ ಶೀಟ್ ತೆಗೆಸಿಕೊಳ್ಳುತ್ತೇವೆ. ಸೋಪಿನ ಸ್ಟ್ಯಾಂಡರ್ಡ್ ಕೆಟ್ಟು ಹೋಗಿದೆ ಎಂದು ಇತ್ತು. I am happy to say that the standard has been reinstated, it is not as low as the people said ಈಗ ಸ್ಯಾಂಡಲ್ ಸೋಪ್ ಬೇಡಿಕೆ ಜಾಸ್ತಿಯಾಗಿದೆ ಲಾಸ್ ಏಕೆ ಆಯಿತು ಅಂದರೆ ಲಾಸ್ ಆಗುವುದಕ್ಕೆ ಹಲವಾರು ಕಾರಣಗಳಿವೆ. ಆ ಹಲವಾರು ಕಾರಣಗಳಲ್ಲಿ ಮುಖ್ಯವಾದುದು ಅಂದರೆ ಇಂಟರ್‌ನ್ಯಾಷನಲ್ ಮಾರ್ಕೆಟ್‌ನಲ್ಲಿ ಮತ್ತು ನ್ಯಾಷನಲ್ ಮಾರ್ಕೆಟ್‌ನಲ್ಲಿ ಭಾರೀ ಸಿವಿಯರ್ ಕಾಂಪಿಟಿಷನ್ ಇರತಕ್ಕಂಥ ಕನ್‌ಸ್ಯೂಮರ್ ಗೂಡ್ಸ್ ಅದು. ಟಾಟಾ ಇದ್ದಾನೆ, ಗಾಡ್ರೆಜ್ ಇದ್ದಾನೆ, ಹಿಂದೂಸ್ಥಾನ್ ಲಿವರ್ ಇದ್ದಾನೆ. ದೊಡ್ಡ ದೊಡ್ಡ ತಿಮಿಂಗಲಗಳೆಲ್ಲಾ ಇವೆ. ಇವರ ಜೊತೆಗೆ ಇದನ್ನು ಕಾಂಪಿಟ್ ಮಾಡಬೇಕಾದರೆ ಮೊದಲನೆಯದಾಗಿ ಸ್ಟ್ಯಾಂಡರ್ಡ್ ಉಳಿಸಬೇಕು. ಎರಡನೆಯದಾಗಿ, ಮಾರ್ಕೆಟಿಂಗ್ ಎಫಿಷಿಯಂಟಾಗಿ ನಡೆಯಬೇಕು. Production capacity improve ಆಗಬೇಕು. There should also be optimum use of installed capacity. ಇವು ಯಾವುವೂ ಇಲ್ಲದೇ ಇದ್ದುದರಿಂದ ಲಾಸ್ ಆಯಿತು. ಅಲ್ಲದೆ ಅವರ ಮೇಲೆ ಟ್ಯಾಕ್ಸಸ್ ಏರಿಕೊಳ್ಳುತ್ತಾ, ಹೋಯಿತು ಬಡ್ಡಿ ಕಟ್ಟುವುದು ಕಷ್ಟವಾಯಿತು. ಈ ತರಹ ಬಂತು. ಎಂಎಸ್‌ಐಎಲ್ ಮತ್ತು ಕೆಎಸ್ ಅಂಡ್ ಡಿಎಲ್ ಬಗ್ಗೆ ಇಲ್ಲಿಯವರೆಗೆ ಏನಿತ್ತು ಅಂದರೆ, ಕೆಎಸ್‌ಡಿಎಲ್ ಮ್ಯಾನೇಜಿಂಗ್ ಡೈರೆಕ್ಟರ್ ಹೇಳಿದಹಾಗೆ ನೀವು ಕೇಳಬೇಕು ಎಂದು ಕೆಎಸ್‌ಡಿಎಲ್ ವರ್ಕರ್ಸ್, ಎಂಎಸ್‌ಐಎಲ್ ಮ್ಯಾನೇಜಿಂಗ್ ಡೈರೆಕ್ಟರ್ ಮಾತು ಇವರು ಕೇಳಬೇಕು ಎನ್ನುವ ಸ್ಥಿತಿ ಬಂದಿತ್ತು. ಆ ವರ್ಕರ್ಸ್ ಅವರವರ ಸಮಸ್ಯೆ ಬಗೆಹರಿಸಿಕೊಳ್ಳುವುದಕ್ಕಿಂತ ಇದರ ಕಡೆ ಗಮನಕೊಟ್ಟರು. ಇದರ ಸಮಸ್ಯೆ ಬಗೆಹರಿಸುವುದಕ್ಕೆ ಆ ಯೂನಿಯನ್. ಇನ್ನೊಂದು ಕಂಪನಿಯ ಸಮಸ್ಯೆ ಬಗೆಹರಿಸುವುದಕ್ಕೆ ಈ ಯೂನಿಯನ್. ಇದು ಈ ಯೂನಿಯನ್‌ಗಳ ಜವಾಬ್ದಾರಿ ಆಯಿತು. ಇದು ಎಂತಹ ಕೆಟ್ಟ ಸ್ಥಿತಿ. ಆಮೇಲೆ ಆ ಯೂನಿಯನ್‌ನವರಿಗೆ ಹೇಳಿದೆ. ನೀವು ಇದರ ಬಗ್ಗೆ ತಲೆಕೆಡಿಸಿಕೊಳ್ಳುವುದಕ್ಕೆ ಹೋಗಬೇಡಿ. ಉತ್ಪಾದನೆ ಮಾಡುವವರು ಯಾರು, ಅವರ ಸಮಸ್ಯೆ ಏನಿರುತ್ತದೆ ಅದನ್ನು ತೀರ್ಮಾನ ಮಾಡುತ್ತೇವೆ ಎಂದು ಹೇಳಿದಾಗ, ಇಲ್ಲ ಸಾರ್ ಅದು ಕ್ಲೋಸ್ ಆಗುತ್ತದೆ, ಇದು ಕ್ಲೋಸ್ ಆಗುತ್ತದೆ ಅದಕ್ಕೆ ನಾವು ವರಿ ಮಾಡಿಕೊಂಡಿದ್ದೇವೆ ಎಂದು ಹೇಳಿದರು. ಈಗ ಎರಡೂ ಸಂಸ್ಥೆಗಳನ್ನು ಚೆನ್ನಾಗಿ ಮ್ಯಾನೇಜ್ ಮಾಡುತ್ತಿರುವುದರಿಂದ ಒಂದು ಅರೇಂಜ್‌ಮೆಂಟಿಗೆ ಬಂದಿದೆ. ಈಗಾಗಲೇ ಆರ್ಡರ್ಸ್ ಇಷ್ಯೂ ಮಾಡಿದ್ದೇವೆ. ಕೆ.ಎಸ್. ಅಂಡ್ ಡಿ.ಎಲ್.ನವರ ಪ್ರೊಡಕ್ಷನ್‌ನನ್ನು ಸಂಪೂರ್ಣ ಅವರೇ ಭಾರತದಲ್ಲಿ ಮಾರಾಟ ಮಾಡಿಕೊಳ್ಳಲಿ, ವಿದೇಶದಲ್ಲಿ ಮಾರಾಟ ಮಾಡುವುದು ಏನಿತ್ತು ಅದನ್ನು ಎಂ.ಎಸ್.ಐ ಎಲ್.ನವರು ಕಂಟಿನ್ಯು ಮಾಡಲಿ, ಈ ಬಗ್ಗೆ ಕೆ.ಎಸ್. ಅಂಡ್ ಡಿ.ಎಲ್.ಗೆ ವ್ಯವಸ್ಥೆ ಇಲ್ಲ. ಕೆ.ಎಸ್. ಅಂಡ್ ಡಿ.ಎಲ್.ನವರು ಹೇಳುತ್ತಿದ್ದರು,

ನಮ್ಮ ಸೋಪನ್ನು ನಾವು ಮಾರಾಟ ಮಾಡಿಕೊಳ್ಳುವುದಕ್ಕೆ ನಮಗೆ ಅವಕಾಶ ಇರಬೇಕು ಎಂದು ಆಯಿತು ಮಾಡಿ ಎಂದು ಹೇಳಿದೆ. ಎಂ.ಎಸ್.ಐ.ಎಲ್ ಹೇಗೆ ಬದುಕಬೇಕು ಏನು ಬಿಡಬೇಕು ಎನ್ನುವುದಕ್ಕೆ ಅವರದೇ ಆದಂಥ ವ್ಯವಸ್ಥೆ ಇದೆ ಅವರು ಪ್ರತಿವರ್ಷ ಹೇಗೆ ಲಾಭ ಮಾಡುತ್ತಿದ್ದರು ಅಂದರೆ, ಗಂಧದ ಎಣ್ಣೆ, ಲಾಟರಿ ಟಿಕೆಟ್ ಇವೆಲ್ಲಾ ಮಾರಾಟ ಮಾಡುತ್ತಿದ್ದರು. ಆದುದರಿಂದ ಅವರ ಇವರ ಆಕ್ಟಿವಿಟೀಸನ್ನು ಸಪರೇಟ್ ಮಾಡಿದೆ. ಇವರಿಗೆ ಬೇರೆ ಎಂತೂಸಿಯಾಸಂ ಇರಲಿ, ಇವರು ಏನು ಅಚೀವ್ ಮಾಡಬೇಕು, ಏನು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು broadb sing of M.S.I.L. They are connected with trading only. ಪ್ರೊಡಕ್ಷನ್ ಬಗ್ಗೆ ನೀವು ಏಕೆ ತಲೆ ಕೆಡಿಸಿಕೊಳ್ಳಬೇಕು ಎಂದು ಹೇಳಿದೆ. ಈಗ ವ್ಯವಸ್ಥಿತವಾಗಿ ಎರಡೂ ಸಂಸ್ಥೆಗಳ ಸಮಸ್ಯೆಯನ್ನು ಬಗೆಹರಿಸಿದ್ದೇವೆ. ಈ ಎರಡು ಸಂಸ್ಥೆಗಳು ಅವರವರ ದಾರಿಯಲ್ಲಿ ಅವರವರು ಹೋಗುತ್ತಾರೆ. ಯಾರು ಹೆಚ್ಚು ಶ್ರಮಪಟ್ಟು ಅಚೀವ್‌ಮೆಂಟ್ ತೋರಿಸುತ್ತಾರೋ ಅವರಿಗೆ ಶಹಭಾಶಗಿರಿ ಕೊಡುತ್ತೇವೆ, ಯಾರು ಸರಿಯಾಗಿ ಮಾಡುವುದಿಲ್ಲ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಆಮೇಲೆ ವಿ.ಐ.ಎಸ್.ಎಲ್. ಬಗ್ಗೆ ನಾವೆಲ್ಲಾ ಮಾತನಾಡಿದ್ದೇವೆ, ಅದರ ಬಗ್ಗೆ ನಾನು ಮಾತನಾಡುವುದು ಬೇಡ. ಆದಷ್ಟು ಬೇಗ ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ತೆಗೆದುಕೊಳ್ಳುವುದಕ್ಕೆ ನಾವೆಲ್ಲಾ ಸೇರಿ ಪ್ರಯತ್ನ ಮಾಡಿದ್ದೇವೆ. ಅಂದರೆ ಹೋದ ತಿಂಗಳು ೧೨ನೇ ತಾರೀಖು ಕೇಂದ್ರ ಉಕ್ಕು ಖಾತೆಯ ಮಂತ್ರಿಗಳು ನಮ್ಮ ರಾಜ್ಯದ ಉನ್ನತ ಅಧಿಕಾರಿಗಳನ್ನು ಕರೆದು ಮಾತನಾಡಿದ್ದಾರೆ. ಅವರು ಕೆಲವೊಂದು ಷರತ್ತುಗಳ ಬಗ್ಗೆ ಮಾತನಾಡಿದ್ದಾರೆ. ನಾವು ರಾಜ್ಯ ಸರ್ಕಾರದ ಪತಿಯಿಂದ ಈಗಾಗಲೇ ಅವರು ಇಂಡಿಕೇಟ್ ಮಾಡಿರತಕ್ಕಂಥ ಷರತ್ತುಗಳನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿದ್ದೇವೆ ಎಂದು ಹೇಳಿದ್ದೇವೆ. ಡೀಟೇಲ್ಸ್ ಏಕೆ ಬೇಡ ಅಂದರೆ, ಅವರು ತೀರ್ಮಾನ ತೆಗೆದುಕೊಳ್ಳುವಾಗ ಇನ್ನೇನಾದರೂ ಆಗುವುದು ಬೇಡ ಎಂದು. ನನಗೆ ಬೇಕಾಗಿರುವುದು ಸೈಲ್‌ನವರು ತೆಗೆದುಕೊಳ್ಳಬೇಕಾಗಿದೆ. ಆ ವಾತಾವರಣ ಇದೆ, ಅದಕ್ಕೋಸ್ಕರ ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಮಾನ್ಯ ಮೊಯ್ಲಿಯವರು ಸಬ್ಸಿಡಿ ಇನ್‌ಸೆಂಟಿವ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ಸಬ್ಸಿಡಿ ಇನ್‌ಸೆಂಟಿವ್ ಬಗ್ಗೆ ಮಾನ್ಯ ರಘುಪತಿಯವರು ಸ್ಮಾಲ್ ಸೇವಿಂಗ್ಸ್ ಸೆಕ್ಟಾರ್ಸ್‌ಗೆ ಸಂಬಂಧಪಟ್ಟಂತೆ ಹೇಳಿದ್ದಾರೆ. ನಾನು ಈಗ ಕೆಲವು ಅಂಕಿಅಂಶಗಳನ್ನು ತಮಗೆ ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಎಂ.ಎಸ್.ಐ.ಎಲ್., ಕೆ.ಎಸ್. ಅಂಡ್ ಡಿ.ಎಲ್. ನಲ್ಲಿ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡುತ್ತೀರಿ. ಅವರನ್ನು ವರ್ಷಗಟ್ಟಲೆ ಆದರೂ ಎನ್‌ಕ್ವೈರಿ ಮಾಡಿ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಅಥವಾ ಅವರ ಮೇಲೆ ಯಾವುದೇ ಕ್ರಮವನ್ನೂ ನೀವು ತೆಗೆದುಕೊಳ್ಳುವುದಿಲ್ಲ. Ist not waste of Goverament money. Make an enquiry and send home the culprit. If he is not culprit take him to duty.

ಶ್ರೀ ಜೆ. ಹೆಚ್. ಪಟೇಲ್.—ತಾವು ಹೇಳಿದ್ದನ್ನು ನಾನು ಕೇಳಿದ್ದೇನೆ. ಅಲ್ಲಿ ಮೊದಲು ಕೆಟ್ಟ ವಾತಾವರಣ ಇತ್ತು ಈಗ ಅದು ತಿಳಿಯಾಗಿದೆ. ಯಾರ್ಯಾರನ್ನು ಎಲ್ಲೆಲ್ಲಿಡಬೇಕೋ, ಅದನ್ನು ಮಾಡುತ್ತೇವೆ.

ಶ್ರೀ ಕೆ. ಹೆಚ್. ಪಾಟೀಲ್.—ನೀವು ಕಾಂಪಿಟೆಂಟ್ ಮಂತ್ರಿಗಳು ಹೀಗೆ ಹೇಳಿದರೆ ಹೇಗೆ ?

ಶ್ರೀ ಜೆ. ಹೆಚ್. ಪಟೇಲ್.—ಈಗ ಅಲ್ಲಿ ವಾತಾವರಣ ತಿಳಿಯಾಗಿದೆ. ಯಾರಾರನ್ನು ಎಲ್ಲೆಲ್ಲಿ ಜೋಡಿಸಬೇಕೋ ನೋಡೋಣ.

ಇನ್ನು ತಾವು ಸಬ್ಸಿಡಿ ಬಗ್ಗೆ ಹೇಳಿದ್ದೀರಿ. ಮಿಸ್ ಯುಟಿಲೈಸೇಷನ್ ಆಗಿದೆಯೆಂದು ತಾವು ಹೇಳಿದ್ದೀರಿ. ಆದರೆ ಅದು ಅಲ್ಲ. Total amount of reimbursement received during 1987-88 was Rs 402.01 lakhs. The amount of reimbursement received and claims for 1987-88, 63 ಕೋಟಿ 36 ಲಕ್ಷ Amount to be claimed is one crore 20 lakhs. The amount pending with the Government of India for reimbursement is Rs. 1 crore. ಇವರಿಗೆ ಅಲ್ಲಿ ಸಹಾಯ ಬರುತ್ತಿತ್ತು, ಆದರೆ ಅದನ್ನು ತೆಗೆದುಕೊಂಡಿಲ್ಲ, ಕಣ್ಣು ಮುಚ್ಚಿಕೊಂಡು ಕೂತಿದ್ದಾರೆಂದು ಹೇಳುವುದು ಸರಿಯಲ್ಲ.

ನಾವು ಮಾಡಬೇಕಾದ ಪ್ರಯತ್ನವನ್ನು ಮಾಡಿದ್ದೇವೆ. ನಮಗೆ ಬರಗಾಲ ಇಲ್ಲದೆ ನಮ್ಮ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೆ ಇನ್ನೂ ಹೆಚ್ಚಿಗೆ ನಾವು ಖರ್ಚು ಮಾಡುತ್ತಿದ್ದೆವು. ನಾವು ನಮ್ಮ ಶಕ್ತಿಯನ್ನು ಉಪಯೋಗಿಸಿ ದುಡಿದಷ್ಟೂ ಅವರು ನಮಗೆ ದುಡ್ಡನ್ನು ಕೊಡುತ್ತಾರೆ. ರೀ ಇಂಬರ್ಸ್‌ಮೆಂಟ್ ಅಮೌಂಟ್ ಬರುತ್ತದೆ. ಆದರೆ ಸ್ವಲ್ಪಮಟ್ಟಿಗೆ ಕೊರತೆಯಾಗಿದೆ

ಇನ್ನು ನಮ್ಮ ಇನ್‌ವೆಸ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ this is a report given by the I.D.B.I. ಕರ್ನಾಟಕ ೧೯೮೨-೮೩ರಲ್ಲಿ ೧೩.೧೩೬ ಲಕ್ಷ ರೂಪಾಯಿ ಪಡೆದಿತ್ತು. ೧೯೮೩-೮೪ರಲ್ಲಿ ನಮ್ಮ ಸರ್ಕಾರ ಬಂದ ಮೇಲೆ ೧೩,೧೩೬ ಲಕ್ಷ ಇದ್ದುದು ೨೧,೮೩೧ ಲಕ್ಷ ಆಗಿದೆ. ೧೯೮೪-೮೫ರಲ್ಲಿ ಸ್ವಲ್ಪಮಟ್ಟಿಗೆ ಲೋಯರ್ ಆಗಿದೆ. ಅಂದರೆ ೨೦,೩೩೪ ಲಕ್ಷ ರೂ ಮತ್ತೆ ೧೯೮೫-೮೬ರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ೨೪ ಸಾವಿರ ೮೬ ಲಕ್ಷ ಕಳೆದ ವರ್ಷ ಅಂದರೆ ೧೯೮೬-೮೭ರಲ್ಲಿ ೨೫,೭೪೨ ಲಕ್ಷ ರೂ. ಆದರೆ ಇಲ್ಲಿ ಏನೂ ಆಗಿಲ್ಲ. ಕೇಂದ್ರ ಸರ್ಕಾರ ಕೊಡುಗೈನಿಂದ ಕೊಡುತ್ತಿದ್ದರೂ ಇವರು ಮುಖ ತಿರುಗಿಸಿ ಕೊಂಡು ಹೋಗಿದ್ದಾರೆಂದು ಮಾತನಾಡಿದ್ದಾರೆ. ಅದು ಸರಿಯಲ್ಲ. ನೀವು ಟೀಕೆ ಮಾಡಿ. ಆದರೆ ನಿಮ್ಮ ಕಣ್ಣಿಗೆ ಕಂಡಿದ್ದನ್ನಾದರೂ ಸರಿಯಾಗಿ ಹೇಳಿ. ೧೦ ಸಾವಿರ ಸ್ಮಾಲ್ ಇಂಡಸ್ಟ್ರೀಸ್ ಪ್ರಾರಂಭ ವಾಗಿವೆಯೆಂದು ನಾನು ಹೇಳಿದರೆ, ನೀವು ಇಲ್ಲ ಎಂದು ಹೇಳುತ್ತೀರಿ. ಹಾಗಾದರೆ ನಾನು ಫೋಟೋ ಹಿಡಿದುಕೊಂಡು ಬಂದು ತೋರಿಸಲೆ ? ಅಥವಾ ವೀಡಿಯೋ ಮಾಡಿ ತೋರಿಸಲೆ ? ಇದು ಸಾಧ್ಯವೆ ? ಒಬ್ಬ ಕಾಫಿಪುಡಿ ಮಾರುತ್ತಾನೆ, ಇನ್ನೊಬ್ಬ ಸೈಕಲ್ ಷಾಪ್ ಇಟ್ಟಿರುತ್ತಾನೆ ಇದನ್ನೆಲ್ಲಾ ಹೇಗೆ ತೋರಿಸಲಿ. ನಾವು ಹೇಳಿದ್ದನ್ನು ಇನ್ನಾದರೂ ನಂಬಿ.

ಇನ್ನು ಇಂಡಸ್ಟ್ರಿಯಲ್ ಗ್ರೋತ್ ಬಗ್ಗೆ ಹೇಳುವುದಾದರೆ ours is the 6th position in the country, if I am wrong please correct me. ನೀವು ೧೨ನೇ ಸ್ಥಾನ ಎಂದು ಹೇಳಿದಿರಿ. Please verify it. We have come down I agree From 3rd position we have come to the 6th place. ಆ ಮೇಲೆ ಎನ್.ಆರ್.ಐ. ಇನ್‌ವೆಸ್ಟ್‌ಮೆಂಟ್ ಬಗ್ಗೆ ಈಗಾಗಲೇ ನಾನು ಹೇಳಿದ್ದೇನೆ. ಇನ್‌ವೆಸ್ಟ್‌ಮೆಂಟ್ ಆಗಿರತಕ್ಕದ್ದು ಕಾರ್ಖಾನೆಗಳು ಪ್ರಾರಂಭವಾಗಿ ಉತ್ಪಾದನೆ ಬಂದಿರತಕ್ಕದ್ದು ೫೮ ಕೋಟಿ ರೂಪಾಯಿಗಳಷ್ಟು. Projects which are cleared for which we are now taking buildings and lands. That is about Rs. 127 erores. This is compleated. ಇನ್ನು ಬರಬೇಕಾದ್ದು ಎಲೆಕ್ಟ್ರಾನಿಕ್ ಸೆಕ್ಟರ್‌ನಲ್ಲಿ It is about Rs. 400 crores. It will be invested by private capital under N R.I.

ವಿದ್ಯುತ್‌ಶಕ್ತಿ ಕೊರತೆಯು ಒಂದೇ ಕಾರಣ ಇಟ್ಟುಕೊಂಡು ರಾಜ್ಯದಲ್ಲಿ ಏನು ಬರುತ್ತಿಲ್ಲವೆಂದು ಹೇಳುವುದಿಲ್ಲ. ನಮಗ ಆಶ್ಚರ್ಯವಾಗುತ್ತದೆ. ಆಂಧ್ರ ಪ್ರದೇಶದ ಸೆಕ್ರೆಟರಿಯವರು ಅಶೋಕ ಹೋಟಲ್‌ನಲ್ಲಿ ಮೀಟಿಂಗ್ ಮಾಡಿ ಆಕಡೆ ಬನ್ನಿ ಆಕಡೆ ಬನ್ನಿ ಎಂದೆಲ್ಲ ಕರೆದರು. ತಮಿಳುನಾಡಿನವರು ನಮ್ಮ ಹೊಸೂರಿಗೆ ಕರೆದರು, ಯಾರು ಹೋಗಲು ಇಷ್ಟಪಡಲಿಲ್ಲ. ಬಹಳ ಜನ ಕರ್ನಾಟಕಕ್ಕೆ ಹೋಗು ತ್ತೇವೆಂದರು. ನಮ್ಮ ಜನರ ಬಗ್ಗೆ, ನಮ್ಮ ಸಂಸ್ಕೃತಿಯ ಬಗ್ಗೆ ಇಂಡಸ್ಟ್ರಿಯಲಿಸ್ಟ್‌ಗೆ ಬಹಳ ಮೆಚ್ಚುಗೆ ಇದೆ. ಹೊರದೇಶದವರು ಅಷ್ಟೇ ಅಲ್ಲ ಎಲ್ಲಕಡೆಯವರು ಕರ್ನಾಟಕಕ್ಕೆ ಬರುತ್ತೇವೆಂದು ಹೇಳುತ್ತಿದ್ದಾರೆ. We have met them and discussed with them. ಈಗ ಬಂದಿ ರುವವರು ಆಸ್ಪತ್ರೆಗೆ. ಮೂವತ್ತುಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಮಾಡುತ್ತೇವೆಂದು ಹೇಳಿದ್ದಾರೆ, ಆಸ್ಪತ್ರೆಯನ್ನು ಇಂಡಸ್ಟ್ರೀಸ್ ಎಂದು ಹೇಳುತ್ತೀರಾ ? ಪ್ರಪಂಚದಲ್ಲೇ ಅತ್ಯುತ್ತಮ ವಾದ ಎಕ್ವಿಪ್‌ಮೆಂಟ್ ತೆಗೆದುಕೊಂಡುಬಂದು ಬೆಂಗಳೂರಿನಲ್ಲಿ ಮಾಡುತ್ತೇವೆಂದರೆ ಆ ಆಸ್ಪತ್ರೆಯನ್ನು ಏತಕ್ಕೆ ಬೇಡವೆಂದು ಹೇಳುವುದು. ಅದು ಒಂದು ಇಂಡಸ್ಟ್ರಿಯೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಬೇಡವೆಂದು ಹೇಳಲಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಯಾರೋ ಕೆಲವರಿಗೆ ಉಪಯೋಗವಾಗುವುದನ್ನು ಮಾಡುವುದು ಬೇಡವೆಂದು ನಾವು ಹೇಳುವುದು. ಹಳ್ಳಿಯೋಗೆ ಕೆ. ಎಸ್. ಎಫ್. ಸಿ. ಯಿಂದ ಸಾಲ ಕೊಡಿ ಎಂದರೆ ಅದರ ಬಗ್ಗೆ ಹೇಳುವಂತಿಲ್ಲ. ಸಾಲವನ್ನು ಕೇಳಿದರೆ ಇಲ್ಲವೆಂದು ಹೇಳುತ್ತೀರಿ.

ಶ್ರೀ ಜೆ. ಎಚ್. ಪಟೇಲ್.— ಎಲ್ಲಿಂದಲೋ ಎಲ್ಲಿಗೋ ಹೋಗುವುದು ಬೇಡ. ಅಮೇರಿಕಾದವರಿಂದ ದುಡ್ಡನ್ನು ತೆಗೆದುಕೊಂಡು ಆಸ್ಪತ್ರೆಯನ್ನು ಮಾಡುತ್ತೇವೆಂದರೆ ಕೆ. ಎಸ್. ಎಫ್. ಸಿ.ಯ ಬಗ್ಗೆ ಮಾತನಾಡುತ್ತೀರಲ್ಲ. ಆಸ್ಪತ್ರೆಗಳಿಗೆ ಕೆ. ಎಸ್. ಎಫ್. ಸಿ. ಯಿಂದ ದುಡ್ಡು ಕೊಡುವುದಕ್ಕಾಗುವುದಿಲ್ಲ. ಆಸ್ಪತ್ರೆಗಳಿಗೆ ಸರ್ಕಾರ ದುಡ್ಡು ಕೊಡುತ್ತದೆ. ಇಂಪ್ರೂವ್ ಎಕ್ವಿಪ್‌ಮೆಂಟ್ಸ್ ಕೊಡಿಸುತ್ತದೆ. ಆಮೇಲೆ ಇನ್ನೊಂದು ಮಾತನ್ನು ಹೇಳಿದರು. ಸೂಪರ್ ಪವರ್ ಥರ್ಮಲ್ ಪ್ಲಾಂಟ್ ಬಗ್ಗೆ ಹೇಳಿದ್ದೇನೆ ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರು ನಮ್ಮ ಸರ್ಕಾರ ಇದಿದ್ದರೆ ವಿಜಯನಗರ ಸ್ಟೀಲ್ ಪ್ಲಾಂಟ್ ಬರುತ್ತಿತ್ತು, ೧೯೭೭ ರಲ್ಲಿ ನಮ್ಮ ಸರ್ಕಾರ ಹೋದದ್ದರಿಂದ ನಿಮ್ಮ ಸರ್ಕಾರ ಬಂದ ಮೇಲೆ ವಿಜಯನಗರ ಸ್ಟೀಲ್ ಪ್ಲಾಂಟ್ ಬರದ ಹಾಗೆ ಮಾಡಿದರೆಂದು ಹೇಳಿದರು.

SRI M. VEARAPPA MOLIY.— He gave a statement in Mangalore it self.

SRI J. H. PATEL.— I was present when he made this st tment. I was present there. ಏನು ಹೇಳಿದರು ಅಂದರೆ ಅವರು ೧೯೭೮ನೇ ಇಸವಿಯಲ್ಲಿ ಚುನಾವಣೆಯ ಕಾಲಕ್ಕೆ ಬಂದು ವಿಜಯನಗರ ಸ್ಟೀಲ್ ಪ್ಲಾಂಟ್‌ನಿಂದ ಉಕ್ಕಿನ ಅದಿರು ಸಿಕ್ಕುತ್ತದೆ ಎನ್ನುವ ಮೂಲ ಕಾರಣದಿಂದ ಮಾಡಿದರು. ಅದೇ ಕಾಲಕ್ಕೆ ಅದೇ ಕಾಂಗ್ರೆಸ್ ಸರ್ಕಾರ ಇದ್ದಾಗ ಒರಿಸ್ಸಾದಲ್ಲೂ ಸ್ಟೀಲ್ ಪ್ಲಾಂಟ್ ಮಾಡುವುದೂ ಇದು ಎರಡೂ ಕೇಂದ್ರ ಸರ್ಕಾರದಲ್ಲಿತ್ತು.

ಶ್ರೀ ಯು. ಭೂಪತಿ.— ವಿಶಾಖಪಟ್ಟಣ, ಸೇಲಂ, ವಿಜಯನಗರ ಈ ಮೂರು ಕಡೆಗಳಿಗೂ ಸ್ಟೀಲ್ ಪ್ಲಾಂಟ್ ಕೊಡುವ ವಿಚಾರ ಕೇಂದ್ರ ಸರ್ಕಾರದಲ್ಲಿತ್ತು ಒರಿಸ್ಸಾದ್ದು ಏಕೆ ಹೇಳುತ್ತೀರಿ ?

ಶ್ರೀ ಜೆ. ಎಚ್. ಪಟೇಲ್.— ಆಗ ಉತ್ತರದ್ದು ಒಂದು ಒರಿಸ್ಸಾದು ಇತ್ತು ಅದು ಯಾವ ಕಾರಣಕ್ಕಾಗಿ ನಿಂತಿತೂ ಗೊತ್ತಿಲ್ಲ. ಆಗ it was sanctioned. ಆಗ ಮಾನ್ಯ ಜಾರ್ಜ್ ಫರ್ನಾಂಡೀಸ್‌ರವರು ಏನು ಹೇಳಿದರು ಎಂದರೆ 000 ಕೋಟಿ ಅಂತ ಆಗ ಇತ್ತು. ಈಗ ಅದು ೫ ಅಥವಾ ೬ ಸಾವಿರ ಕೋಟಿಯಾಗಬಹುದು. ಬ್ರಿಟಿಷ್ Sted Minister ಹತ್ತಿರ ನಾನು ಮಾತನಾಡಿದಾಗ to make it more economical unit. it should be in coastal areas ಅಥವಾ ಕೋಸ್ಟಲ್ ಏರಿಯಾದಲ್ಲಿ ಮಾಡಿದರೆ viable ಆಗುತ್ತದೆಂದು ಜಸ್ಟ್ ಮಾಡಿದರು ಎಂದು ಹೇಳಿದರು. ವಿಜಯನಗರ ಸ್ಟೀಲ್ ಪ್ಲಾಂಟ್ ಕೊಡಬಾರದು ಎಂದು ಹೇಳಿಲ್ಲ, ಅಥವಾ ಅದಕ್ಕೆ ವಿರುದ್ಧವಾಗಿ ಹೇಳಲಿಲ್ಲ. ಆವಾಗ ಮಂಗಳೂರು ಬಹಳ ಖುಷಿಯಾಯಿತು. ಮಂಗಳೂರಿನವರನ್ನು ಖುಷಿಪಡಿಸುವುದಕ್ಕೋಸ್ಕರವಾಗಿ ಬಳ್ಳಾರಿಯವರಿಂದ ಒದಗಿಸಿಕೊಳ್ಳುವುದು ಬೇಡ ಎಂದು ಹೇಳಿದರು. ಆದರಿಂದ ಅದು ನಿಮ್ಮ ತಪ್ಪು ಗ್ರಹಿಕೆ ನಾವು ನಾವೇ ಜಗಳವಾಡಿ ಗುದ್ದಾಡದಿದ್ದರೆ ಆದ ಜಾರ್ಜ್ ಫರ್ನಾಂಡಿಸ್ ವಿಜಯನಗರ ಸ್ಟೀಲ್ ಪ್ಲಾಂಟ್ ಮಾಡುತ್ತಿದ್ದರು. ಅದು ನಮ್ಮ ದುರಾದೃಷ್ಟ.

ಶ್ರೀ ಯು. ಭೂಪತಿ.— ಈಗ ಕೇಂದ್ರ ಸರ್ಕಾರದ ಮೇಲೆ ಏನು ಒತ್ತಡ ತಂದಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.— ಸ್ಟೀಲ್ ಪ್ಲಾಂಟನ್ನು ರಾಜ್ಯ ಸರ್ಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಯು. ಭೂಪತಿ.— ನೀವು ಮಾಡಬೇಕೆಂದು ಹೇಳುತ್ತಿಲ್ಲ. ನೀವು ಕೇಂದ್ರ ಸರ್ಕಾರದ ಮೇಲೆ ಏನು ಒತ್ತಡ ತಂದಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.— ಒತ್ತಾಯ ಮಾಡುತ್ತಿದ್ದೇವಲ್ಲ. ಅದಕ್ಕೆ ನಾನು ಉತ್ತರ ಹೇಳುತ್ತೇನೆ.

ಶ್ರೀ ಪಟಪಕ್ಕಿ ರತ್ನಾಕರ್.— ಒತ್ತಡ ತರುವುದಕ್ಕೆ ಇವರ ಹತ್ತಿರ ಪವರ್ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಎಷ್ಟು ಬೇಕಾದರೂ ಪವರ್ ಕೊಡುತ್ತೇವೆ. ನಮ್ಮ ಪವರ್ ಕಟ್ಟಿಕೊಂಡು ನೀವೇನು ಮಾಡುತ್ತೀರಿ ?

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಿಮ್ಮ ಸ್ವಂತ ಪವರ್ ಅಲ್ಲ ಕೇಳಿದ್ದು, ಸರ್ಕಾರದ ಪವರ್.

ಶ್ರೀ ಜೆ. ಹೆಚ್. ಪಾಟೀಲ್.— ವಿ. ಐ. ಎಸ್. ಎಲ್.ಗೆ ಕೊಡುವುದಕ್ಕೆ ನಿಮ್ಮಲ್ಲಿ ಪವರ್ ಇಲ್ಲ. ಇನ್ನು ವಿಜಯನಗರದ ಸ್ಟೀಲ್ ಪ್ಲಾಂಟಿಗೆ ಎಲ್ಲಿ ಕೊಡುತ್ತೀರೆಂದು ಕೇಳಿದರು ಅಲ್ಲಿಗೆ ಬೇಕಾಗುವಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಹೇಗೆ ಎಂದು ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿದೆ. ಈಗ ವೀಲ್

ಅಂಡ್ ಏಕ್ಸಿಲ್‌ಗೆ ಕೊಟ್ಟೆವು. ಎಲ್ಲಿಂದ ಕೊಟ್ಟೆವು ಕೇರಳದಿಂದ ತರಿಸಿಕೊಟ್ಟೆವು, ಕೇರಳದಲ್ಲಿ ನಿಂತಾಗ ನಾವು ಸರಬರಾಜು ಮಾಡಿದೆವು. ವಿ. ಐ. ಎಸ್. ಎಲ್. ಬಗ್ಗೆ ಒಂದು ಮಾತು ಹೇಳಿದರು. ಕೇಂದ್ರ ಸರ್ಕಾರದವರು ವಿ. ಐ. ಎಸ್. ಎಲ್. ನಡೆಸುವುದಕ್ಕೆ ೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದರೂ ಇವರು ತೆಗೆದುಕೊಳ್ಳಲಿಲ್ಲವೆಂದರು ಸ್ವಾಮಿ ಅದಕ್ಕೆ ಸಂಬಂಧಪಟ್ಟ ಯಾವುದಾದರೂ ಒಂದು ದಾಖಲೆ ತೋರಿಸಿ ಅದರಲ್ಲಿ ನಮ್ಮದು ೬೦ ಪರ್‌ಸೆಂಟ್ ಶೇರ್ ಸ್ಟೈಲ್‌ನವರು ೪೦ ಪರ್ಸೆಂಟ್ ಇದೆ. ಕೇಂದ್ರ ಸರ್ಕಾರದವರು ಲೋನ್ ಕೊಟ್ಟಿದ್ದಾರೆ. ಅವರು ವರ್ಕಿಂಗ್ ಕ್ಯಾಪಿಟಲ್ ಕೊಡುತ್ತೇವೆಂದು ಹೇಳಿಲ್ಲ. ಮಾನ್ಯ ಸದಸ್ಯರು ಹೇಳುವುದು ನಿಜವಲ್ಲ. ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್, ಟೆಕ್ನೋಕ್ರಾಟ್ಸ್, ಬ್ಯೂರೋಕ್ರಾಟ್ಸ್ ಬಗ್ಗೆ ಪ್ರಸ್ತಾಪ ಮಾಡಿದರು. ಟೆಕ್ನೋಕ್ರಾಟ್ಸ್ ವರ್ಸಸ್ ಬ್ಯೂರೋಕ್ರಾಟ್ಸ್ ಆರ್ಗ್ಯುಮೆಂಟ್ ಈಗ ನಡೆಯುತ್ತಿದೆ. ಕೇಂದ್ರ ಸರ್ಕಾರದಲ್ಲಿರತಕ್ಕ ಉದ್ದಿಮೆಗಳೇನಿವೆ ಅವುಗಳಲ್ಲಿ ಕೆಲವು ಕಡೆ ಟೆಕ್ನೋಕ್ರಾಟ್ಸ್ ಇದ್ದಾಗೆ ಬಹಳ ಕಡೆ ಬ್ಯೂರೋಕ್ರಾಟ್ಸ್ ಇದ್ದಾರೆ. ಅದಕ್ಕೆ ನಮ್ಮ ಸರ್ಕಾರದ ವ್ಯವಸ್ಥೆ ಏನಿದೆ ಅದರಲ್ಲಿ ಸಾಧ್ಯವಿಲ್ಲ. ರಷ್ಯದಲ್ಲಿ ಮಾತ್ರ ಸಾಧ್ಯ, ಚೈನಾದಲ್ಲಿ ಸಾಧ್ಯ. ಏಕೆಂದರೆ ಅಲ್ಲಿ ಲಾಕ್ಔಟನು ಆಗಬಹುದು, ತೊಂದರೆಗಳು ಬರಬಹುದು. ಎಲ್ಲಾ ತೊಂದರೆಗಳನ್ನು ಇಟ್ಟುಕೊಂಡು ಹೊಸ ಕಾರ್ಖಾನೆ ಶುರು ಮಾಡಿದ ಮೇಲೆ ಎಷ್ಟು produce ಮಾಡುತ್ತೀಯ, ಎಷ್ಟು ರಿಟರ್ನ್ಸ್ ಕೊಡುತ್ತೀಯ ಎಂದು ವಿವರ ಕೇಳಿ ಹಣ ಮಂಜೂರ್ಮಾಡುತ್ತಾರೆ. ಅವನನ್ನು ಇಂಟರ್‌ಫಿಯರ್ ಮಾಡುವುದಿಲ್ಲ. ಪ್ರೊಡಕ್ಷನ್ ರಿಸಲ್ಟ್ ತೋರಿಸದಿದ್ದರೆ ನೀನು you lose your head. ಎಂದು ಹೇಳುತ್ತಾರೆ. ಆದರೆ ಇಲ್ಲಿ ಆ ರೀತಿ ಹೇಳುವುದಕ್ಕಾಗುವುದಿಲ್ಲ. ಅಂಥ ವ್ಯವಸ್ಥೆಯಲ್ಲಿ ಮಾತ್ರ ಅದು ಸಾಧ್ಯ. ಈ ದ್ವಂದ್ವ ಜಿಜ್ಞಾಸೆ ಈ ರಾಷ್ಟ್ರದಲ್ಲಿದೆ. ಈಗಿರುವ ವ್ಯವಸ್ಥೆಯಲ್ಲಿ ಸಾಧ್ಯವಾದಷ್ಟು ಕಡೆ, ಅಂದರೆ ಟೆಕ್ನೋಕ್ರಾಟ್ಸ್ ಇರುವ ಕಡೆ ಅವರನ್ನೇ ಹಾಕಬೇಕು. ಟೆಕ್ನೋಕ್ರಾಟ್ಸ್ ಪ್ರೈವೇಟ್ ಮಾರ್ಕೆಟ್‌ನಲ್ಲಿ ಸಿಗಬಹುದು. ಆದರೆ ನಮ್ಮ ಸರ್ಕಾರೀ ವ್ಯವಸ್ಥೆಯಲ್ಲಿ ಸಿಗುವುದಿಲ್ಲ. ಎಲ್ಲಾ ಬ್ಯೂರೋಕ್ರಾಟ್ಸ್ ಇನ್‌ಫಿಷಿಯಂಟ್ ಎಂಬುದನ್ನು ನಾನು ಒಪ್ಪುವುದಿಲ್ಲ. ಬಹಳ ಕಡೆ ಒಳ್ಳೆಯ ಉದ್ದಿಮೆಗಳನ್ನು ನಡೆಸುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ — ಇಂಡಸ್ಟ್ರಿ ಬಗ್ಗೆ ಟ್ರೈನಿಂಗ್ ಪಡೆದವರನ್ನು ಯಾವುದೊ ಇಲಾಖೆಗೆ ಹಾಕುತ್ತಿದ್ದಾರೆ. ಒಂದೆರಡು ವರ್ಷಗಳ ಕಾಲ ಇಂಡಸ್ಟ್ರಿಗಳಲ್ಲಿ ಇದ್ದರೂ ನಂತರ ಬೇರೆ ಕಡೆ ಹಾಕುತ್ತಾರೆ ತರಬೇತಿ ಪಡೆದ ಐ. ಎ. ಎಸ್. ಅಧಿಕಾರಿಗಳನ್ನು ಇಂಡಸ್ಟ್ರಿಗಳಲ್ಲಿ ಹಾಕಿ ಅವರು ಹತ್ತು ವರ್ಷಗಳ ಕಾಲ ಅಲ್ಲೇ ಇರಲಿ. ಇಲ್ಲದಿದ್ದರೆ, it is no going to serve the purpose, I am not questioning the com petency of IAS officers. They can convert themselves as excellent professional technocrats. They can manage very well. Some times you do not allow them to function as professionals. In Tamil nadu, there are some IAS officers who are managing the industries for 10 years. They are delivering the goods. You can depute somebody and find but, what they are doing. They do not change them every now and then. His services are continued for 10 years in the same industry.

ಶ್ರೀ ಜೆ. ಎಚ್. ಪಟೇಲ್.—ಯೂನಿವರ್ಸಲ್ಲಾಗಿ ನಾನು ಹೇಳುತ್ತಿಲ್ಲ. ಪರ್ಫಾರ್ಮೆನ್ಸ್ ನೋಡಿಕೊಂಡು ಆ ಮನುಷ್ಯನಿಗೆ ಇಂಡಸ್ಟ್ರೀಸ್ ಬಗ್ಗೆ ವಿಷಯಗಳು ತಲೆಗೆ ಹೋಗುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಂಡು ಕೆಲವು ಸಾರಿ ಬದಲಾವಣೆ ಮಾಡಬೇಕಾಗುತ್ತದೆ. ಆಗಾಗ್ಗೆ ಬದಲಾವಣೆ ಮಾಡುವುದು ಇಂಡಸ್ಟ್ರೀಸ್‌ಗೆ ಹಾನಿಯಾಗುತ್ತದೆ ಎಂಬುದನ್ನು ಒಪ್ಪುತ್ತೇನೆ. ಆದ್ದರಿಂದ ಮ್ಯಾನೇಜ್‌ಮೆಂಟ್ ಗ್ರಿಪ್ ಇರುವುದಿಲ್ಲ ಎಂಬುದನ್ನು ಒಪ್ಪುತ್ತೇನೆ. ಆದರೆ ಯೂನಿವರ್ಸಲ್ಲಾಗಿ ಮಾಡಬಾರದು ಎಂದು ಹೇಳಬಾರದು ವರ್ಕಿಂಗ್ ಪರ್ಫಾರ್ಮೆನ್ಸ್ ಮೇಲೆ ಮಾಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಫಾರಿನ್‌ಗೆ ಹೋಗಿ ಟ್ರೈನಿಂಗ್ ಮಾಡಿಕೊಂಡು ಬಂದಿರುತ್ತಾರಲ್ಲ.

ಶ್ರೀ ಜೆ. ಎಚ್. ಪಟೇಲ್.—ಅವರು ಏನು ಟ್ರೈನಿಂಗ್ ಮಾಡಿಕೊಂಡು ಬರುತ್ತಾರೋ ಅದನ್ನು ಬೇರೆ ಕಡೆಗೆ ಉಪಯೋಗಿಸಿಕೊಳ್ಳುತ್ತಾರೆ. ಮಾನ್ಯ ಮೊಯಿಲಿಯವರು ಎಸ್. ಎಸ್. ಐ. ಬಗ್ಗೆ ಮತ್ತು ಶಿವರಾಮನ್ ಕಮಿಟಿ ಬಗ್ಗೆ ಹೇಳಿದ್ದಾರೆ. ಫರ್ನಾಂಡಿಸ್ ಅವರು, ಮತ್ತು ಮುಖ್ತರುನ್ನೀಸಾ ಬೇಗಂ ಅವರು ವಿಶೇಷವಾಗಿ ಬೆನಿಫಿಷರೀಸ್ ಬಗ್ಗೆ, ಮತ್ತು ಸೆಲ್ಫ್ ಎಂಪ್ಲಾಯ್ಮೆಂಟ್ ಸ್ಕೀಮ್ ಬಗ್ಗೆ ಹೇಳಿದ್ದಾರೆ. ಬೆನಿಫಿಷರೀಸ್‌ಗಳಲ್ಲಿ ಮೇಲ್ ಎಷ್ಟು ಫೀಮೇಲ್ ಎಷ್ಟು ಎಂದು ಕೇಳಿದ್ದಾರೆ. ಆ ಪಟ್ಟಿ ಹುಡುಕಿ ನಾನು ಹೇಳುತ್ತೇನೆ. ಅಮೇಲೆ ಬೆಲ್ಲದ್ ಅವರು ಪವರ್ ಜನರೇಷನ್ ಇಂಪ್ರೂವ್ಮೆಂಟ್ ಮಾಡದೇ ಇದ್ದರೆ ಉದ್ಯಮಗಳು ಸರಿಹೋಗುವುದಿಲ್ಲ, ಅವರಿಂದ ಕೃಷಿ ಮತ್ತು ಕೈಗಾರಿಕೆಗೆ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಮತ್ತು ತೆಫ್ಟ್ ಆಗುವುದನ್ನು ನಿಲ್ಲಿಸಬೇಕೆಂದು ಹೇಳಿದ್ದಾರೆ. ಅದಕ್ಕೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೋ ತೆಗೆದುಕೊಳ್ಳುತ್ತೇವೆ. ಶ್ರೀ ನಂಜಯ್ಯನಮಠ್ ಅವರು ಬಹುತೇಕ ಮಾತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಹೇಳಿದ್ದಾರೆ. ಐ. ಪಿ ಸೆಟ್ಸ್ ಬಗ್ಗೆ ಕೂಡ ಹೇಳಿದರು. ಅದನ್ನು ನಾನು ನೋಟ್ ಮಾಡಿಕೊಂಡಿದ್ದೇನೆ. ಎಷ್ಟು ಜನರಿಗೆ ಕೆಲಸ ಕೊಟ್ಟಿದೆ ಎಂಬುದು ಮುಖ್ಯವಲ್ಲ ಎಷ್ಟು ಬೇಗ ಕೊಟ್ಟರಿ ಎಂದು ಕೇಳಿದ್ದಾರೆ. ಅದು ಸರಿ. ಲೈಕುದ್ದೀನ್ ಅವರು ಬೀದರ್ ಬಹಳ ಹಿಂದುಳಿದ ಪ್ರದೇಶ ಎಂದು ಹೇಳಿದರು. I do not think that Bidar will remain backward within another couple of years. So much of progress is taking place in Industrial sector at Bidar. ಅಲ್ಲಿನ ಹವಾಗುಣ ಬೆಂಗಳೂರಿಗಿಂತ ಉತ್ತಮ. ಆದರೆ ಅಲ್ಲಿ ನೀರಿನ ಅಭಾವ ಇದೆ. ಅದಕ್ಕೆ ಯೋಚನೆ ಮಾಡುತ್ತೇವೆ. ಹೊಸದಾಗಿ ಅನೌನ್ಸ್ ಮಾಡಿರುವ ಪಾಲಿಸಿಯಲ್ಲಿ we will continue those facilities to Bidar. ಇದೇ ರೀತಿಯ ಸವಲತ್ತನ್ನು ಬೆಳಗಾಂ ಡಿಸ್ಟ್ರಿಕ್ಟ್‌ಗೂ ಕೊಡಬೇಕೆಂದು ಮಾಡಿದ್ದೇವೆ. ಏಕೆಂದರೆ ಬಾರ್ಡರ್ ಏರಿಯಾದಲ್ಲಿ ಕೈಗಾರಿಕೆಗಳ ಬೆಳವಣಿಗೆ ಆಗಬೇಕು. ಎಷ್ಟೆಷ್ಟು ಇಂಡಸ್ಟ್ರಿಯಲಿ ಸ್ಪ್ರಿಂಗ್ ಆಗುತ್ತದೋ ಅಷ್ಟೂ ನಮಗೆ ಅನುಕೂಲವಾಗುತ್ತದೆ.

ಶ್ರೀ ಬಸವರಾಜ್.—ಅಲ್ಲಿಗೆ ಎಷ್ಟು ದಿನ ಎಕ್ಸ್‌ಟೆಂಡ್ ಮಾಡಿದ್ದೀರಿ ?

ಶ್ರೀ ಜೆ. ಎಚ್. ಪಟೇಲ್.—ಮೂರು ವರ್ಷ ಮಾಡಿದ್ದೇವೆ. ನರಾಂಜ ಷುಗರ್ ಫ್ಯಾಕ್ಟರಿ ಬಗ್ಗೆ ಕೇಳಿದ್ದಾರೆ ಅದರ ಡೀಟೈಲ್ಸ್ ಸಿಕ್ಕಿಲ್ಲ. ಆಮೇಲೆ ತಿಳಿಸುತ್ತೇನೆ. ಅವರು sugar industries as a whole ಹೇಳಿದ್ದಾರೆ. The sugar industry as a whole is now recouping. 6 sugar factories have made profit. One factory which was closed, we have opened it. The other factories are being given notices for proper action and price policy. ಪ್ರೈಸ್ ಪಾಲಿಸಿ ಬಗ್ಗೆ ಮೂಡಲಗಿರಿಯಪ್ಪನವರು ಹೇಳಿದರು. ಅಗ್ರಿಕಲ್ಚರಲ್ ಪ್ರೈಸ್ ಕಮಿಷನ್‌ನವರು ಏನು price ಫಿಕ್ಸ್ ಮಾಡುತ್ತಾರೆ, ಅಷ್ಟು ಕೊಟ್ಟರೆ ರೈತರು ಉಳಿಯುವುದಿಲ್ಲ, ಫ್ಯಾಕ್ಟರಿಗಳೂ ಉಳಿಯುವುದಿಲ್ಲ. ಕಂಡೂ ಕಂಡೂ ಏತಕ್ಕೆ ಆರೀತಿ ಮಾಡುತ್ತಾರೆ ?

ಶ್ರೀ ಕೆ. ಎಚ್. ಪಾಟೀಲ್.—ಅಗ್ರಿಕಲ್ಚರಲ್ ರೆಪ್ರಸೆಂಟೆಟೀವ್ಸ್ ಎಲ್ಲ ಕಡೆ ಇಲ್ಲ. ನಿಮ್ಮ ಸರ್ಕಾರದಲ್ಲೂ ಪ್ರೈಸ್ ಕಡಿಮೆ ಫಿಕ್ಸ್ ಮಾಡುತ್ತಾರೆ. ಅಲ್ಲೂ ಅದೇರೀತಿ ಮಾಡುತ್ತಾರೆ ಯಾರಾದರೂ ಅಗ್ರಿಕಲ್ಚರ್ ಮಾಡುವವರು ಇದ್ದರೆ ಸರಿಹೋಗುತ್ತದೆ. ಡಾ. ಅರಕೇರಿಯವರು ಇದ್ದಾಗಿನಿಂದ ನಾನು ಇದನ್ನು ಹೇಳುತ್ತಿದ್ದೇನೆ ನಿಜವಾದ ಅಗ್ರಿಕಲ್ಚರಿಸ್ಟ್‌ನ್ನು ಹಾಕಿ ಎಂದು ಹೇಳುತ್ತಿದ್ದೇನೆ. ಆದರೂ ಆ ರೀತಿ ಮಾಡಿಲ್ಲ.

ಶ್ರೀ ಜೆ ಎಚ್. ಪಟೇಲ್.—ಅಲ್ಲಿ ಇಲ್ಲ ಎಂಬುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಇಲ್ಲಿ ಇಲ್ಲ ಎಂದು ನಾನು ಒಪ್ಪುವುದಿಲ್ಲ. ಇಲ್ಲಿ ಇದ್ದಾರೆ. ಇಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಡೆಲ್ಲಿಯಲ್ಲಿ ಅದು ಸಾಧ್ಯ.

೧-೩೦ ಪಿ.ಎಂ.

ಇನ್ನು ಬಿದ್ರಿ ವೇರ್ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ಮಾನ್ಯ ರಘುಪತಿಯವರು ಉತ್ತರ ಕೊಟ್ಟಿದ್ದಾರೆ. ಮತ್ತೆ ರಿವಾಲ್ವಿಂಗ್ ಫಂಡ್ಸ್ ಬಗ್ಗೆ ಮತ್ತು ಸೋಶಿಯಲ್ ಜಸ್ಟೀಸ್ ಬಗ್ಗೆ ಸಹ

ಹೇಳಿದ್ದಾರೆ. ಅವರು ಕೊಟ್ಟ ಸಲಹೆಗಳನ್ನು ನಾವು ಈಗಾಗಲೇ ನಮ್ಮ ಇಂಡಸ್ಟ್ರಿಯಲ್ ಪಾಲಿಸಿಯಲ್ಲಿ ತೋರಿಸಿದ್ದೇವೆ. ಸ್ಮಾಲ್‌ಸ್ಕೇಲ್ ಇಂಡಸ್ಟ್ರೀನಲ್ಲಿ, ರೂರಲ್ ಇಂಡಸ್ಟ್ರೀಯಲ್ಲಿ ಏನು ಪ್ರೈಯಾರಿಟಿ ಕೊಡಬೇಕೋ ಅದನ್ನು ಕೊಟ್ಟಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಶೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್‌ಗೆ ಎಷ್ಟು ಜನರಿಗೆ ಸಹಾಯ ಮಾಡಿದ್ದೀರಿ, ಎಷ್ಟು ಜನರಿಗೆ ಇನ್‌ಸೆಂಟೀವ್ ಕೊಟ್ಟಿದ್ದೀರಿ ಎಂಬುದರ ಪಟ್ಟಿ ಕೊಡಿ ಎಂದು ಹೇಳಿದರು. ಒಂದು ಮಾತನ್ನು ಅತ್ಯಂತ ವಿನಯದಿಂದ ಅವರಿಗೆ ಹೇಳುತ್ತೇನೆ. ಈ ಹುಡುಗರಿಗೆ, ಇಂಡಸ್ಟ್ರಿ ಕೊಡುತ್ತೇವೆ ಎಂದರೆ ಬೇಡ. ಇವರಷ್ಟೇ ಅಲ್ಲ, ಹಳ್ಳಿ ಗಾಡಿನ ಹುಡುಗರೆಲ್ಲರಿಗೂ ಸರ್ಕಾರಿ ನೌಕರಿಯೇ ಬೇಕು. ಇಂತಹ ಸಣ್ಣ ಕೈಗಾರಿಕೆ ಮಾಡಿ, ಎಮ್ಮೆ ಸಾಕಿ, ಸೋಪ್ ಫ್ಯಾಕ್ಟರಿ ಮಾಡಿ ಎಂದರೆ ಅವರಿಗೆ ಬೇಡ. ಅವರೆಲ್ಲರಿಗೂ ಸರ್ಕಾರಿ ನೌಕರಿಯೇ ಬೇಕು. ಏಕೆಂದರೆ ಇದು ಗ್ಯಾರೆಂಟೀಡ್ ಇನ್‌ಕಮ್. ಮಳೆ ಬರಲಿ ಬರದಿರಲಿ ಹಣ ಬರುತ್ತದೆ. ಅದೂ ಮಾವನ ಮನೆಯ ಹತ್ತಿರವೇ ಕೆಲಸ ಬೇಕು. ಇಂತಹ ರಾಂಗ್ ನೋಷನ್‌ನ್ನು ನಾವು ತೆಗೆಯದೇ ಹೋದರೆ ಇವತ್ತಿನ ದಿವಸ ಆಗುವುದಿಲ್ಲ. ನಮ್ಮ ಯುವಕರಿಗೆ ಕೆಲಸ ಎಂದರೆ ಸರ್ಕಾರಿ ನೌಕರಿ ಎಂದು ಎಂದು ಅರ್ಥ. ಅದನ್ನು ಕೊಡುವುದಕ್ಕಾಗುವುದಿಲ್ಲ. ಯಾವ ಸರ್ಕಾರ ಬಂದರೂ ಕೊಡುವುದಕ್ಕಾಗುವುದಿಲ್ಲ. ನಾನು ಒಂದೇ ಒಂದು ಸಣ್ಣ ವಿಶ್ಲೇಷಣೆ ಮಾಡುತ್ತೇನೆ. ಕರ್ನಾಟಕದ ಜನಸಂಖ್ಯೆ ೪ ಕೋಟಿ. ಕರ್ನಾಟಕದಲ್ಲಿ ೪ ಲಕ್ಷ ಜನ ಸರ್ಕಾರಿ ನೌಕರರು ಇದ್ದಾರೆ. ನಮ್ಮ ರಾಜ್ಯ ಸರ್ಕಾರದ ಒಟ್ಟು ಉತ್ಪಾದನೆ ೨,೩೦೦ ಕೋಟಿ ರೂಪಾಯಿಂಗಳು. ಸರ್ಕಾರಿ ನೌಕರರಿಗೆ ಸಂಬಳ ಸಾರಿಗೆ ಇತ್ಯಾದಿ ಕೊಡುವುದು ೯೫೦ ಕೋಟಿ ರೂಪಾಯಿಗಳು. ನೋಡಿ ಸ್ವಾಮಿ, ೨,೩೦೦ ಕೋಟಿ ಆದಾಯದಲ್ಲಿ ೯೫೦ ಕೋಟಿ ರೂಪಾಯಿ ಸರ್ಕಾರಿ ನೌಕರರಿಗೆ ಹೋಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—೯೫೦ ಕೋಟಿ ಅಲ್ಲ ೧,೨೦೦ ಕೋಟಿ ರೂಪಾಯಿ.

ಶ್ರೀ ಜೆ. ಎಚ್. ಪಟೇಲ್.—೧ ಸಾವಿರ ಕೋಟಿ ಎಂದು ಇಟ್ಟುಕೊಳ್ಳಿ. ಆದಾಯದ ಶೇಕಡಾ ೪೬ ರಷ್ಟು ಭಾಗ ಇವರಿಗೆ ಕೊಡುತ್ತೇವೆ. ಸರ್ಕಾರಿ ನೌಕರ ಎಂದರೆ ಯಾರು? ನಮ್ಮ ಮಗನೋ, ತಮ್ಮನೋ, ಅಳಿಯನೋ ಇರುತ್ತಾನೆ. ರೈತರಿಗೆ ನಾವು ೧ ರೂಪಾಯಿ ಕೊಟ್ಟರೆ, ಕೂಲಿಗಾರನಿಗೆ ೫೦ ಪೈಸೆ ಕೊಟ್ಟು ಉಳಿದ ಅವರಿವರಿಗೆ ೧೦-೧೫ ರೂಪಾಯಿ ಕೊಟ್ಟರೆ ಸರ್ಕಾರಿ ನೌಕರನಿಗೆ ೪೬ ರೂಪಾಯಿ ಕೊಡುತ್ತಿದ್ದೇವೆ. ಇಂತಹ ವ್ಯವಸ್ಥೆ ಜಗತ್ತಿನಲ್ಲಿ ಎಲ್ಲೂ ಇಲ್ಲ. ಹೀಗೆ ಕೆಲಸಕ್ಕಿಂತಲೂ ಹೆಚ್ಚು ಜನ ಇದ್ದರೂ ಹೆಚ್ಚು ಹೆಚ್ಚು ಕೆಲಸ ಆಗುತ್ತಾ ಇಲ್ಲ. ಒಂದು ಸೂಜಿಯನ್ನು ಏಳು ಜನ ಹೊರಲಾರದೇ ಹೊತ್ತರಂತೆ ಎಂದು ನಮ್ಮ ಕಡೆ ಹೇಳುತ್ತಾರೆ. ಇವರ ಮೇಲೆ ದ್ವೇಷಕ್ಕೆ ನಾನು ಹೇಳುತ್ತಾ ಇಲ್ಲ. ಅವರೂ ಕೂಡಾ ನಮ್ಮ ಅಣ್ಣತಮ್ಮಂದಿರು. ಇವತ್ತು ಕೇಂದ್ರ ಸರ್ಕಾರದವರು ಆರಾರು ತಿಂಗಳಿಗೆ ಅವರ ನೌಕರರ ಸಂಬಳ ಹೆಚ್ಚು ಮಾಡುತ್ತಾರೆ. ಅವರು ನೀರು ಕುಡಿದರೆಂದು ನಾವು ಗಂಧ ಹಚ್ಚುವುದು. ನಾವು ಗಂಧ ಹಚ್ಚಿದೆವೆಂದು ಅವರು ನೀರು ಕುಡಿಸುವುದು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕಾಂಪಿಟೀಷನ್ ಮೇಲೆ......

ಶ್ರೀ ಕೆ. ಎಚ್. ಪಾಟೀಲ್.—ಈಗ ಇರುವ ನೌಕರರಿಗೆ ಪಗಾರ ಕೊಡಿ. ಮತ್ತೆ ತಾವು ಏನು ಹೊಸದಾಗಿ ನೌಕರಿಗೆ ತೆಗೆದುಕೊಳ್ಳುತ್ತೀರಿ ಅವರಿಗೆ ಕೇವಲ ೫೦೦ ರೂಪಾಯಿ ಮಾತ್ರ ಸಂಬಳ ಕೊಡುತ್ತೇವೆ ಅದಕ್ಕಿಂತಾ ಹೆಚ್ಚು ಕೊಡುವುದಿಲ್ಲ ಎಂದು ಹೇಳಿ. ಮುಂದೆ ಬರುವವರು ಇದೇ ಸ್ಕೇಲ್‌ನಲ್ಲಿ ಮುಂದುವರಿಯಲಿ.

ಶ್ರೀ ಜೆ. ಎಚ್. ಪಟೇಲ್.—ಯಾರೂ ಬರುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಈ ಬಗ್ಗೆ ಕಾನೂನು ಬದಲಾವಣೆ ಮಾಡಿ. ನಿಯಮ ಬದಲಾವಣೆ ಮಾಡಿ. ಮಹಾತ್ಮಾ ಗಾಂಧೀಜಿಯವರು ಏನು ಹೇಳುತ್ತಿದ್ದರು ಅದರಂತೆ ಮಾಡಿ. ೫೦೦ ರೂಪಾಯಿ ಮಾತ್ರ ಪಗಾರ ಕೊಡುತ್ತೇವೆಂದು ಹೇಳಿ.

ಶ್ರೀ ಜೆ. ಎಚ್. ಪಟೇಲ್.—ಸ್ವತಃ ಮಹಾತ್ಮಾಗಾಂಧೀಜಿಯವರೇ ಬಂದರೂ ಈ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ನೀವು ಆ ರೀತಿ ಕಾನೂನು ಮಾಡಿ. ನಾನು ಒಂದು ಸಾವಿರ ಜನರನ್ನು ನಿಮಗೆ ಒದಗಿಸಿಕೊಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್.—ಹಾಗೆ ಜಾರಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಇವತ್ತು ಒಂದು ಸರ್ಕಾರಿ ಕ್ವಾರ್ಟರ್ಸ್ ನಲ್ಲಿ ರಾಜ್ಯ ಸರ್ಕಾರಿ ನೌಕರ ಹಾಗೂ ಕೇಂದ್ರ ಸರ್ಕಾರಿ ನೌಕರ ಇಬ್ಬರೂ ವಾಸ ಮಾಡುತ್ತಿರುತ್ತಾನೆ. ಕೇಂದ್ರ ಸರ್ಕಾರಿ ನೌಕರನಿಗೆ ಎರಡೂವರೆ ಸಾವಿರ ಸಂಬಳ ಬರುತ್ತಿದ್ದು ನಮ್ಮ ಸರ್ಕಾರಿ ನೌಕರನಿಗೆ ೫೦೦ ರೂಪಾಯಿ ಸಂಬಳ ಕೊಟ್ಟಾಗ ಆತ ಜೀವನ ನಡೆಸುವುದಕ್ಕೆ ಹೇಗೆ ಸಾಧ್ಯ ಎಂಬುದನ್ನು ಯೋಚನೆ ಮಾಡಿ, ಅವನು ಎರಡು ಸಾವಿರ ತೆಗೆದುಕೊಳ್ಳುತ್ತಾನೆ. ಅವನು ಇಲ್ಲಿ ಹೇಗೆ ಇರುತ್ತಾನೆ? These are things which we will have to think about. We are utilising major portion of our income for these salaries.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಎಲ್ಲಾ ಮುಂದುವರೆದ ದೇಶಗಳನ್ನು ಅವರ ಹಾಗೆ ನಾನು ಸಹ ಹೋಗಿ ನೋಡಿದ್ದೇನೆ; ನೀವು ಕಾಂಟ್ರಾಕ್ಟ್ ಮೇಲೆ ಯಾಕೆ ಜಾಬ್ಸ್ ಕೊಡುವುದಿಲ್ಲ? ಯಾರನ್ನಾದರೂ ಕೆಲಸಕ್ಕೆ ಸೇರಿಸಿಕೊಂಡರೆ ಅವನಿಗೆ ಬುದ್ಧಿ ಇರಲಿ, ಇಲ್ಲದೇ ಇರಲಿ, ಕೈಹೋಗಲಿ, ಕಣ್ಣು ಹೋಗಲಿ, ಎಂಟು ಸಾವಿರದ ವರೆಗೆ ಕೊಟ್ಟು ತುದಿ ಮುಟ್ಟಿಸುವುದು ಯಾವ ದೇಶದಲ್ಲೂ ಇಲ್ಲ. ಕಾಂಟ್ರಾಕ್ಟ್ ಮೇಲೆ ಕೆಲಸ ಕೊಡುವುದರಿಂದ, ಏನಿದ್ದರೂ ಅವನ ದುಡಿಮೆ, ಅದಕ್ಕೆ ತಕ್ಕಂತೆ ಹಣ ಸಿಗುತ್ತದೆ. ಆದ್ದರಿಂದ ಕಾಂಟ್ರಾಕ್ಟ್ ಜಾಬ್ಸ್ ಏಕೆ ಮಾಡುವುದಿಲ್ಲ?

ಶ್ರೀ ಕೆ.ಬಿ. ಶಾಣಪ್ಪ.—ಕಾಂಟ್ರಾಕ್ಟ್ ಸಿಸ್ಟಮ್ ಹೋಗಬೇಕೆಂದು ನಮ್ಮ ಸರ್ಕಾರವೇ ಹೇಳುತ್ತದೆ. ನಾವು ಸಹ ಹೇಳುತ್ತಿದ್ದೇವೆ. ಇದನ್ನು ಇಂಟ್ರೊಡ್ಯೂಸ್ ಮಾಡುವುದು ಸರಿಯಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಕೆಲವೊಂದು ಉದ್ಯಮಗಳಲ್ಲಿ ಕಾಂಟ್ರಾಕ್ಟ್ ಮೇಲೆ ತೆಗೆದುಕೊಳ್ಳುತ್ತಾರೆ. ಈಗಲೂ ಕೆಲವು ಎಂ.ಡಿ. ಪೋಸ್ಟ್‌ಗಳಿಗೆ ಹೀಗೆ ಆಗಿದೆ. ಆದರೆ ಸರ್ಕಾರಿ ನೌಕರಿ ಎಂದರೆ ಏನರ್ಥ? ಪರ್ಮನೆನ್ಸಿ. ಅವರಿಗೊಂದು ಪ್ರೊಟೆಕ್ಷನ್ ಇರುತ್ತದೆ. ತಾವು ಹೇಳಿದಹಾಗೆ ಮಾಡುವುದಾದರೆ ಅದು ನ್ಯಾಷನಲ್ ಪಾಲಿಸಿ ಆಗುತ್ತದೆ, ಒಂದು ರಾಜ್ಯ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕಾಂಟ್ರಾಕ್ಟ್ ಲೇಬರರ್ಸ್ ಕಾನ್ಸೆಪ್ಟ್ ಏನಿದೆ "it must be acceptable to the whole nation" ನಮ್ಮ ಸರ್ಕಾರಿ ನೌಕರರನ್ನು ಎರಡು ವರ್ಷ ಕಾಂಟ್ರಾಕ್ಟ್‌ನಲ್ಲಿ ಕೆಲಸ ಮಾಡಿಹೋಗಿ ಎಂದು ಹೇಳುವುದಕ್ಕೆ ಆಗುವುದಿಲ್ಲ. ನೀವು ಸ್ಟೈಪೆಂಡರಿ ಪದವೀಧರರನ್ನು ತೆಗೆದುಕೊಂಡಿದ್ದಕ್ಕೆ ಅವರನ್ನು ಸಮಾಧಾನ ಮಾಡುವುದಕ್ಕೆ ನಮಗೆ ಮೂರು ವರ್ಷ ಆಯಿತು. ನೀವು ಗೋಮಟೇಶ್ವರನ ತರಹ ತುಲಾಭಾರ ಮಾಡಿಸಿಕೊಂಡಿರಿ. ಅವರನ್ನು ಅಬ್ಸಾರ್ಬ್ ಮಾಡಿ ಒಂದು ವ್ಯವಸ್ಥೆ ಮಾಡುವಷ್ಟರಲ್ಲಿ ನಮ್ಮ ಹೆಣ ಬಿದ್ದುಹೋಯಿತು.

ಶ್ರೀ ಆರ್.ಎನ್. ನಾಯಕ್.—ಹೆಲಿಕಾಪ್ಟರನ್ನು ನೀವು ಇಟ್ಟುಕೊಂಡಿರಿ. ಅದನ್ನು ಇಟ್ಟುಕೊಳ್ಳುವುದಕ್ಕೆ ತೊಂದರೆ ಇಲ್ಲ. ಇದು ಮಾಡುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್.—ಈ ನೀತಿಯನ್ನು ನಾನು ಒಪ್ಪುತ್ತೇನೆ. ಆದರೆ ಇದು ರಾಷ್ಟ್ರೀಯ ನೀತಿ ಆಗಬೇಕು. ಒಂದು ರಾಜ್ಯ ಮಾಡಿದರೆ ಅದು ಸರಿಯಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೌಕರರ ಬಗ್ಗೆ ಮಾತನಾಡಿದರು. ಈ ಲಿವಿಂಗ್ ಇಂಡೆಕ್ಸನ್ನು ಹರಿಯಾಣದಲ್ಲಿ ಯಾರೋ ಒಬ್ಬರು ಕೂತು ತೀರ್ಮಾನ ಮಾಡುತ್ತಾರೆ. ಅವರೇನು ಸೌತ್ ಇಂಡಿಯಾದಲ್ಲಿ ಕೂತು ಮಾಡುತ್ತಾರೋ, ನಾರ್ತ್ ಇಂಡಿಯಾದಲ್ಲಿ ಕೂತು ಮಾಡುತ್ತಾರೋ ಗೊತ್ತಿಲ್ಲ. ಅವರು ಹೇಳಿದರು ಏನೆಂದರೆ ಇವರು ವರ್ಷಂಪ್ರತಿ ಜಾಸ್ತಿ ಮಾಡಿಕೊಂಡು ಹೋಗುತ್ತಿರುತ್ತಾರೆ. ಇದು ಸರಿಯೋ ತಪ್ಪೋ ಎಂದು ವಿವೇಚನೆ ಮಾಡಿ ಹೇಳತಕ್ಕಂಥಾದ್ದು ನಮಗೆ ಇನ್ನೂ ಬಂದಿಲ್ಲ. ಅವರು ಏನು ಇಂಡೆಕ್ಸ್ ಅಂತ ಹೇಳುತ್ತಾರೆ, ಅದರಂತೆ ನಾವು ಜಾಸ್ತಿ ಮಾಡಿಕೊಂಡು ಹೋಗುತ್ತೇವೆ. ಮತ್ತೆ how you fix up the livingndex in villages? ರೈತ ಇದ್ದಾನೆ, ಅಗ್ರಿಕಲ್ಚರಿಸ್ಟ್ ಇದ್ದಾನೆ. ಅವರಿಗೆ ಯಾವ ಇಂಡೆಕ್ಸ್ ಕೂಡ ಅನ್ವಯವಾಗುವುದಿಲ್ಲ. ಆತನಿಗೂ ಮಾಡಬೇಕೆಂದರೆ ಹತ್ತು ರೂಪಾಯಿ ಅಂತ ಫಿಕ್ಸ್ ಮಾಡುತ್ತಾರೆ. ಎರಡನೆಯದಾಗಿ, ಈ ಲಿವಿಂಗ್ ಇಂಡೆಕ್ಸನ್ನು ನಾವು ಪ್ರಶ್ನೆ ಮಾಡಲೇಬೇಕು. We will have to question these people who fix up the living index, because they are all interested in the continuance of this bureaucracy and their salaries; they are interested in protecting their properties and protecting everything

they want. ಇದಕ್ಕೆ ತಾವು ಪುನಃ ಪರಿಶೀಲನೆ ಮಾಡಬೇಕು. ಮೂರನೆಯದಾಗಿ ಇವತ್ತು ಬೆಳಗ್ಗೆ ಪೇಪರ್ ನೋಡಿದೆ. ಎಂಟು ಜನ ಐ.ಎ.ಎಸ್. ಅಧಿಕಾರಿಗಳಿಗೆ ಅಬೌವ್ ಸೂಪರ್‌ಟೈಮ್ ಸ್ಕೇಲ್ ಆಫೀಸರ್ ಅಂತ ಹೇಳಿಬಿಟ್ಟು ಅವರಿಗೆ ಎಂಟು ಸಾವಿರ ಸಂಬಳ ಕೊಡತಕ್ಕಂಥ ಒಂದು ಪ್ರಶ್ನೆ ಬಂದಿದೆ. ಇದರಲ್ಲಿ ಲಿವಿಂಗ್ ಇಂಡೆಕ್ಸ್‌ಗೆ ಏನು ಸಂಬಂಧ? ಏನು ಅಂತಹ ಅವಸರ ಇತ್ತು? ಒಬ್ಬೊಬ್ಬರಿಗೆ ೭–೮ ಸಾವಿರ ಫಿಕ್ಸ್ ಮಾಡಬೇಕೆಂದು ಯಾರು ಹೇಳಿದ್ದು? ನಾವು ನೀವು ಹೇಳಲಿಲ್ಲ. ಸದನದಲ್ಲೂ ಕೇಳಲಿಲ್ಲ. ಆದ್ದರಿಂದ ಬೇರೆಯವರು ಬೈಯುವುದಕ್ಕೆ ಮುಂಚಿತವಾಗಿ ನಿಮ್ಮ ಬುದ್ಧಿಯನ್ನು ಸರಿಯಾಗಿ ಇಟ್ಟಿರಬೇಕು. ಸರ್ಕಾರದಲ್ಲಿ ಯಾರು ತೀರ್ಮಾನ ತೆಗೆದುಕೊಳ್ಳುತ್ತಾರೆ ಅವರಿಗೆ ಸಮಭಾವನೆ ಇರಬೇಕು, ತುಲನಾತ್ಮಕ ದೃಷ್ಟಿ ಇರಬೇಕು. ಸಮಾಜವಾದದ ಬಗ್ಗೆ ನೀವು ಎಷ್ಟೋ ಸಲ ಭಾಷಣ ಮಾಡಿದ್ದೀರಿ, ನಾನು ಸಹ ಎಷ್ಟೋ ಸಾರಿ ಭಾಷಣ ಮಾಡಿದ್ದೇನೆ.

ನೂರಕ್ಕೆ ೯೦ ಭಾಗ ಜನ ಇವತ್ತಿನ ದಿವಸ, ಇವರಿಗೆ ಲಿವಿಂಗ್ ಇಂಡೆಕ್ಸ್ ಇಲ್ಲ, ಇವರಿಗೆ ಮಿನಿಮಮ್ ಇನ್‌ಕಮ್ ಇಲ್ಲ, ಸ್ಯಾಲರಿ ಇಲ್ಲ, ಎಂಪ್ಲಾಯ್‌ಮೆಂಟ್ ಇಲ್ಲ, ಅಷ್ಯೂರ್ಡ್ ಎಂಪ್ಲಾಯ್‌ಮೆಂಟ್ ಇಲ್ಲ. ಆದರೆ ಈ ನಾಲ್ಕುವರೆ ಲಕ್ಷ ಸರ್ಕಾರಿ ನೌಕರರು ಏನಿದ್ದಾರೆ ಅವರ ಬಗ್ಗೆ ಆಸಕ್ತಿ ವಹಿಸುತ್ತಿದ್ದೀರಿ. ಇದು ಯಾವ ಧರ್ಮ?

ಶ್ರೀ ಜೆ. ಹೆಚ್. ಪಟೇಲ್.—೨೫–೩೦ ವರ್ಷದಿಂದ ನಾವೂ ನೋಡಿದ್ದೇವೆ, ನೀವೂ ನೋಡಿದ್ದೀರಿ. ಈ ಸಲಹೆಗಳು ವ್ಯಾವಹಾರಿಕವಾಗಿ ಪ್ರಕೃತ ಚಲಾವಣೆಗೆ ಬರುವ ಹಾಗೆ ನಾವು ಮಾಡಿಲ್ಲ. ಇವು ನಮ್ಮ ಅನಿಸಿಕೆಗಳು, ನಮ್ಮ ಭಾವನೆಗಳು ಅಷ್ಟೇ ಹೊರತು ಬೇರೆ ಇಲ್ಲ. ಅವರು ಹೇಳಿದ ಮಾತು ನೂರಕ್ಕೆ ನೂರು ನಿಜ. ಇವತ್ತು ಬಹಳ ಜನ ಲಿವಿಂಗ್ ಎಂದೇ ದಾಖಲೆ ಇಲ್ಲ, ಇಂಡೆಕ್ಸ್ ಇರಲಿ ಇದನ್ನು ಹೇಗೆ ಸರಿಮಾಡಬೇಕು, ಇದು, ಇವತ್ತು ಈ ಮಟ್ಟದಲ್ಲಿ ಆಗುವುದಿಲ್ಲ, ರಾಷ್ಟ್ರಮಟ್ಟದಲ್ಲಿ ಆಗಬೇಕು. ಇವುಗಳ ಬಗ್ಗೆ ಕಠೋರವಾದ ತೀರ್ಮಾನ ತೆಗೆದುಕೊಳ್ಳಬೇಕು, ''ಒಂದು ಹಡಗು ನಡೆಸುವವನು, ನಾನು ಯಾವುದೋ ಒಂದು ಕೋಣೆಯಲ್ಲಿದ್ದೇನೆ, ಸರಿಯಾಗಿ ಕಸ ಹೊಡೆದುಕೊಂಡು ಚೊಕ್ಕಟವಾಗಿದ್ದೇನೆಂದು ಹೇಳುತ್ತಾರೆ. ಆದರೆ ಹಡಗು ಮುಳುಗಿದಾಗ, ಅವನು ಚೊಕ್ಕಟವಾಗಿದ್ದರೂ ಮುಳುಗಿದ ಹಾಗೆಯೇ.'' ಆದ್ದರಿಂದ ನಿಮ್ಮ ಸಲಹೆ ನಾನು ಒಪ್ಪುತ್ತೇನೆ. ಏಕೆ ಮಾಡಿದರು, ಅಷ್ಟು ಸಂಬಳ ಏಕೆ ತೆಗೆದುಕೊಳ್ಳುತ್ತಾರೆ, ಇಂತಹ ಸಲಹೆಗಳನ್ನು ನಿಮ್ಮ ಪಕ್ಷದ ಮುಖಂಡರೇ ಕೊಟ್ಟಿದ್ದಾರೆಂದು ಕೇಂದ್ರ ಸರ್ಕಾರಕ್ಕೆ ಬರೆಯುತ್ತೇನೆ. ಅವರು ಏನು ಹೇಳುತ್ತಾರೋ ಹೇಳಲಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇದನ್ನು ಹಾಸ್ಯಾಸ್ಪದವಾಗಿ ತೆಗೆದುಕೊಳ್ಳಬಾರದು. ನಾನು ತಾವು ಮುಖಂಡರು ಸಲಹೆ ಕೊಟ್ಟಿದ್ದಾರೆಂದು ಕೇಂದ್ರಕ್ಕೆ ಬರೆಯುತ್ತೇನೆ ಎಂದು ಹೇಳತಕ್ಕಂತಾದ್ದು ಸರಿಯಲ್ಲ. ನೀವು ಈ ೩ ಜನಕ್ಕೆ ಈಗ ೮ ಸಾವಿರ ರೂಪಾಯಿಗಳನ್ನು ಕೊಡುತ್ತೀರಿ, ಇವತ್ತು ಬೆಳಿಗ್ಗೆ ಪೇಪರಿನಲ್ಲಿ ನೋಡಿದ್ದೇನೆ. ನಾವು ಯಾರಿಗಾದರೂ ಸಲಹೆ ಮಾಡಿದ್ದೇವೆಯೇ? ಇವೆಲ್ಲಾ ಏನು ಮಾತುಗಳು...

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಇದಕ್ಕೆಲ್ಲಾ ಸ್ವಲ್ಪ ತಡೆ ಮಾಡಿ...

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ನಾಯಕ್ ಅವರೇ, ಅವರು ಮಾತನಾಡುತ್ತಾರೆ, ಇವೆಲ್ಲಾ ವಿಷಯ ನಿಮಗೆ ಅರ್ಥವಾಗುವುದಿಲ್ಲ, ಸುಮ್ಮನೆ ಕುಳಿತುಕೊಳ್ಳಿ...

ಶ್ರೀ ಆರ್. ಎನ್. ನಾಯಕ್.—ನೀವು ಅವರಿಗೆ ೮ ಸಾವಿರ ಕೊಟ್ಟರೆ ನನಗೆ ಅರ್ಥವಾಗುವುದಿಲ್ಲ, ೮ ಕೋಟಿ ಕೊಟ್ಟರೆ ಅರ್ಥವಾಗುತ್ತದೆ. ದಿನ ಒಂದೊಂದು ಕೋಟಿ ಕೊಡುತ್ತಾ ಇದ್ದರೆ ನನಗೆ ಅರ್ಥವಾಗುತ್ತದೆ. ನಿಮ್ಮಂತಹವರನ್ನು ಅನುಕರಿಸುತ್ತಾ ಹೋದರೆ ಎಲ್ಲವೂ ಅರ್ಥವಾಗುತ್ತದೆ.

ಶ್ರೀ ಪಟಪುಕ್ಕಿ ರತ್ನಾಕರ್.—ಮಾನ್ಯ ಬಸವಲಿಂಗಪ್ಪನವರು ಏಕೆ ಈ ವಿಚಾರವನ್ನು ಮಾನ್ಯ ಪಟೇಲರ ಎದುರಿಗೆ ಏಕೆ ಪ್ರಸ್ತಾಪ ಮಾಡಿದರು ಎಂದರೆ, ನಿಮ್ಮ ಚಿಂತನೆಗೆ ಸಮಾಜವಾದಿ ಲೇಪನ ಇದೆ, ಹೋರಾಟದ ಶಕ್ತಿ ಇದೆ, ಈ ಬಗ್ಗೆ ಯೋಚನೆ ಮಾಡಬಹುದು, ಚಿಂತನೆ ಮಾಡಬಹುದು, ಭಾವನೆಗಳನ್ನು ವ್ಯಕ್ತಪಡಿಸಬಹುದು ಎಂಬ ದೃಷ್ಟಿಯಿಂದ ಹೇಳಿದ್ದಾರೆ. ನಿಮ್ಮ ಚಿಂತನೆಗೆ ಸ್ಥಾಯೀ ಸ್ವರೂಪ ಕೊಡದೇಹೋದರೆ, ಏನು ಬೆಲೆ ಬಂತು? ತಾವು ಅಧಿಕಾರದಲ್ಲಿದ್ದರೂ ಏನು ಬೆಲೆ ಬಂತು...

ಶ್ರೀ ಜಿ. ಹೆಚ್. ಪಟೇಲ್.—ನಾನು ಮತ್ತು ಬಸವಲಿಂಗಪ್ಪನವರು ಚಿಂತನೆ ಮಾಡಿ, ತಲೆ ಕೂದಲು ಹೊರಟು ಹೋಯಿತು. ಮಾನ್ಯ ರತ್ನಾಕರ್ ಅವರು ಹೇಳಿದಹಾಗೆ ಏನಾದರೂ ಮಾಡ ಬೇಕು.

ಶ್ರೀ ಪಟ್ಟಮಕ್ಕಿ ರತ್ನಾಕರ್.—ನಾವು ನಿಮ್ಮಿಂದ ನಿರೀಕ್ಷಣೆ ಮಾಡುತ್ತೇವೆ. ನಾವು ನಿಮ್ಮ ಬಗ್ಗೆ ಕೇಳಿದ್ದೇವೆ, ತಿಳಿದುಕೊಂಡಿದ್ದೇವೆ, ಮತ್ತು ಓದಿದ್ದೇವೆ. ಅದರಿಂದ ನಿಮ್ಮಿಂದ ನಾವು ಇದರ ಬಗ್ಗೆ ನಿರೀಕ್ಷಣೆ ಮಾಡುತ್ತೇವೆ...

ಶ್ರೀ ಆರ್. ಎನ್. ನಾಯಕ್.—ನಾವು ಇಲ್ಲಿ ಬರೋದಕ್ಕೆ ಮೊದಲೇ ನೀವು ನಮ್ಮ ಹೀರೋ ಆಗಿದ್ದಿರಿ...

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ವಿಷಯದಲ್ಲಿ ಮಾನ್ಯ ಜಿ. ಹೆಚ್. ಪಟೇಲರ ಪರವಾಗಿ ನಾನೇ ಉತ್ತರ ಹೇಳುತ್ತೇನೆ. ಅವರಿಗೆ ಇದೆಲ್ಲಾ ಗೊತ್ತಿದೆ, ಆದರೆ ಇದನ್ನು ಮಾಡುವುದಕ್ಕೆ ಪುರಸೊತ್ತು ಇಲ್ಲ.

ಶ್ರೀ ಜಿ. ಹೆಚ್. ಪಟೇಲ್.—ಬಹಳ ಹೊತ್ತು ಇಂತಹವರ ಜೊತೆ ಇದ್ದರೆ ಪುರಸೊತ್ತು ಎಲ್ಲಿ ಇರುತ್ತದೆ, ಆದ್ದರಿಂದ ನಾನು ಅವರ ಅಭಿಪ್ರಾಯಗಳನ್ನು ಒಪ್ಪುತ್ತೇನೆ. ಈಗ ವಾಸ್ತವಿಕವಾಗಿ ಇವತ್ತು ನನ್ನ ಬೇಡಿಕೆಗಳಲ್ಲಿ ಇಷ್ಟು ಸ್ಪಷ್ಟವಾಗಿ ತಿಳಿಸಿದ್ದೇನೆ. ನಾವು ಅಚೀವ್ ಮಾಡುವುದನ್ನೂ ತಿಳಿಸಿದ್ದೇನೆ. ಭಾರಿ ಮಿರಾಕಿಲ್ ಮಾಡಿದ್ದೇವೆಂದು ನಾನು ಹೇಳುವುದಿಲ್ಲ. ನಾವು ಬಹಳ ಕಷ್ಟದ ಸ್ಥಿತಿಯಲ್ಲಿದ್ದೇವೆ, ಹಣಕಾಸಿನ ಕೊರತೆ ಇದೆ ಪ್ರಾಕೃತಿಕ ಕಾರಣಗಳು ಇವೆ. ಆದ್ದರಿಂದ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುವುದು. ಮಾನ್ಯ ಮೊಯ್ಲಿಯವರಂಥ ಜವಾಬ್ದಾರಿ ಸ್ಥಾನದಲ್ಲಿರುವವರು, ಈ ರಾಜ್ಯದಲ್ಲಿ ಆಗುವುದಿಲ್ಲ ಎಂಬ ಇಂಪ್ರೆಷನ್ ದಯವಿಟ್ಟು ಕೊಡಬೇಡಿ. ನಮ್ಮದು ತಪ್ಪಾಗಿದ್ದರೆ ಹೇಳಿ. ಈ ರಾಜ್ಯಕ್ಕೆ ಅತ್ಯಂತ ಉತ್ತಮವಾದ ಭವಿಷ್ಯ ಇದೆ. It would be the number one city in the country and it would be one of the biggest in the world. ಆ ಅಬ್ಜೆಕ್ಟೀವ್ ಇಟ್ಟುಕೊಂಡು ನಾವು ಕೆಲಸ ಮಾಡೋಣ. ಮುಂದೆ ಬರುವವರಿಗೆ ನಾವು ಏನು ಕೊಡು ವುದಕ್ಕೆ ಸಾಧ್ಯ ಎನ್ನುವುದನ್ನು ಹೇಳಬೇಕೇ ಹೊರತು, ಹೇಳಬಾರದ್ದನ್ನು ಹೇಳಬಾರದು. ನಿಮ್ಮ ಸಲಹೆಗಳನ್ನು ಒಪ್ಪಿದ್ದೇನೆ ಇನ್ನು ಮಾನ್ಯ ಲೈಕಂದ್ದೀನ್ಅವರು ಹೇಳಿದರು, ಅದನ್ನು ಒಪ್ಪುತ್ತೇನೆ. "Agriculture is for food and forest is for wood.'' Janata Government is for everybody's good ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕೈಗಾರಿಕಾ ಮಂತ್ರಿಗಳು ಉತ್ತರ ಕೊಡುತ್ತಾ ಕೈಗಾರಿಕೆಯಲ್ಲಿ ದೇಶದ ಮಟ್ಟಿಗೂ ಕೂಡಾ ಪರಿಸ್ಥಿತಿ ಚೆನ್ನಾಗಿಲ್ಲ, ಅದೇ ಇಲ್ಲಿ ರಿಫ್ಲೆಕ್ಟ್ ಆಗಿದೆ ಎಂಬ ಅಭಿಪ್ರಾಯ ಬರುವಹಾಗೆ ಹೇಳಿದರು. ನನ್ನ ಹತ್ತಿರ ಸೆವೆನ್ತ್ ಫೈವ್ ಇಯರ್ ಪ್ಲಾನ್‌ನ ಮಿಡ್ ಟೈಮ್ ಅಪ್ರೈಸಲ್ ಇದೆ. ತಾವು ಹೇಳಿದ್ದು ರೆಕಾರ್ಡ್‌ಗೆ ಹೋಗುತ್ತದೆ, ಜನ ಅದನ್ನು ನಂಬಬೇಕಾಗುತ್ತದೆ. ಸರಕಾರದ ವಕ್ತಾರರು ಹೇಳಿದ್ದನ್ನು ಜನ ನಂಬಬೇಕಾಗುತ್ತದೆ. In 7th five year planನಲ್ಲಿ what was projected in the nation was 8% industrial growth. In 1987-88 it is as much as 10.1% and an average of 9.7% has been achieved all these three years. You can kindly go through this ಆ ಮೇಲೆ ತಾವು ಟೆಕ್ಸ್‌ಟೈಲ್ ಬಗ್ಗೆ ಹೇಳಿದಿರಿ. ಕರ್ನಾಟಕದಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರಿ ಬಹಳ ಕಷ್ಟದಲ್ಲಿದೆ ಎಂಬ ವಿಚಾರವನ್ನು ತಾವು ಲೋಕಲ್ ಆಗಿ ಹೇಳಿ. ಅದು ಲೋಕಲೈಸ್ಡ್ ಇಷ್ಯೂ. It is not a national issue. As far as production is concerned, the textile proeduction is very much in conformity with the target fixed. There is no steep fall. ಈ ಸ್ಟ್ಯಾಟಿಸ್ಟಿಕ್ಸ್ ನಮ್ಮ ಸ್ನೇಹಿತರಿಗೂ ಕೊಡಾ ಕೊಡುತ್ತೇನೆ. Even in sugar production, consistency has been maintained i.e., 6.1%. It has gone ahead, ಶುಗರ್ ಮತ್ತು ಟೆಕ್ಸ್‌ಟೈಲ್ ಬಗ್ಗೆ ತಾವು ಹೇಳಿದಿರಿ. ಇನ್ನು ಮತ್ತೊಂದು ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. Industrial production ಬಗ್ಗೆ ಹೇಳುತ್ತೇನೆ. I am referring now to Econonomic Survey of India for 1987

–88. ನಾವು ಯಾವ ಒಂದು ವಿಚಾರ ಹೇಳುವುದು ಇದ್ದರೂ, ಅಂಕ ಸಂಖ್ಯೆ ಬಗ್ಗೆ ಹೇಳಿದರೆ without basis I will not speak, I will never speak about it. It is not my fertile imagination. It is based on certain statistics, let him believe or not I depend on it. ಇದರಲ್ಲಿ ಇಂಡಸ್ಟ್ರಿಯಲ್ ಪ್ರೊಡಕ್ಷನ್ ಬಗ್ಗೆ ತಾವು ಸ್ವಲ್ಪ ನೋಡಿದರೂ even in 1979-80 it was -1.7% ಅದು ಜನತಾ ರೂಲ್ ಇರಬಹುದು ಅಥವಾ ಯಾವುದೇ ರೂಲ್ ಇರಬಹುದು, For 1987-88 it is provisionally 10.2%. not even 10.1% It is 0.1% more. It was earlier 9.1%. In 1984-85 it was 8.5%. It has maintained a level. ನಾನು ಹೇಳುವುದು ಕರ್ನಾಟಕ ಕೂಡಾ should be in the national mainstream. ಅದನ್ನು ಬಿಟ್ಟುಹೋಗುವುದು ಬೇಡ. ಇದರ ಬಗ್ಗೆ ತಾವು ಏನಾದರೂ ಬೆಳಕು ಚೆಲ್ಲುತ್ತೀರೆಂದು ನಂಬಿದ್ದೇನೆ. There should be some realisation. ತಾವು ಮಾಡಿಲ್ಲ ಎಂದು ನಾನು ಹೇಳಲಿಲ್ಲ. I have not gone on record on that. ಏನು ಒಂದು primacy of place ಈ ಇಂಡಸ್ಟ್ರಿಯಲ್ ಮ್ಯಾಪ್‌ನಲ್ಲಿ ಕರ್ನಾಟಕದಲ್ಲಿದ್ದು ಅದನ್ನು ಮೈಂಟೇನ್ ಮಾಡುವುದಕ್ಕೆ ಆಗಲಿಲ್ಲ. ಅದಕ್ಕೆ ಕಾರಣಗಳು ಇರಬಹುದು ಪ್ರಾಮಾಣಿಕ ಕಾರಣಗಳನ್ನು ಹೇಳಿದರೆ ನಾವು ಅದನ್ನು ಅಫಿಷಿಯೇಟ್ ಮಾಡುತ್ತೇವೆ We are here to appreciate it, ಅಧ್ಯಕ್ಷರೇ. Regarding place of Karnataka in the Industrial map, I am taking only two levels. Firstly State-wise assistance sanctioned and distributed by financial institutions. Karnataka was in the 4th place in 1982-83. In 1985-86 7th place, In 1986-87 8th place. This is the Reserve Bank document I can pass over this document for your verification. ಫೋರ್ತ್ ಪ್ಲೇಸ್ ಇದ್ದುದು ಏಳು ಎಂಟನೇ ಪ್ಲೇಸ್‌ಗೆ ಹೋಗಬೇಕಾದರೆ ಯಾವಾರದ್ದು ಯಾವ ದಿಕ್ಕಿನಲ್ಲಿ ತಾವು ಹೋಗುತ್ತಿದ್ದೀರಿ ಎಂಬುದನ್ನು ದಯವಿಟ್ಟು ನೋಡಬೇಕು. There is another document which is compiled by the Government of India. lending by all financial institutions. two measures are adopted. There are so many measures. But I don't want to take time of the House. I will deal with two measures by which achievement of Karnataka in industrial sector could be assessed. Yearwise statement regarding reimbursement made under Central investment subsidy scheme is there. Industrial development could also be reflected by this. In 1982-83 our place was third. Now in 1987-88 we are pushed to 12th place. How do you explain this? I will pass over this document for your verification. It is not fertile imagination of mine. But where are we going? About subsidy it was said there was misappropriation. It is again on the document and it is for you to explain. I am talking on the basis of the document. In 1987-88 reimbursement made under Central subsidy scheme, even in this statement yearwise statement of reimbursement is given about payment made but it is not sanctioned. That is a case where rapport of the State Government with Government of India is not there. Reimbursement is Rs. 4.02 crore which you have agreed. But what is the release by you? It is in the document. You please verify in your own department. It is about 1.94 crore. This is the amount disbursed.

ಶ್ರೀ ಜೆ. ಹೆಚ್. ಪಟೇಲ್.– ಕೇಂದ್ರ ಸರ್ಕಾರದ ನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅದು...

SRI VEERAPPA MOILY.— 4.02 crore is reimbursed by the Central Government. That money has been given to you. Rs. 1.94 crore you have given according to your statement. That is given for the payment made. How you have paid Rs, 4.02 crore? Have you paid 4.02 crore in 1987-88 ? No. I will take you back to one more year, In 1986-87 what was the reimbursement by the Central Government? It is 6.48 crore and what is disbursed by you is about 6 74 crore which is practically equivalent. This year you please release this question, Last year there is no question of Central Government reimbursement i.e., 1986-87 money. Take reimbursement, only the amount is paid in 1987-88.

ಶ್ರೀ ಜೆ.ಹೆಚ್ ಪಟೇಲ್.— ಯಾವ ಕಾರ್ಖಾನೆಗಳಿಗೆ ಸಬ್‌ಸಿಡಿ ರಿಲೀಜ್ ಮಾಡಿರುತ್ತೇವೆ. ಅದಕ್ಕೆ ಸೆಂಟ್ರಲ್‌ನಿಂದ ಎಷ್ಟು ಹಣ ಬರುತ್ತದೆಂದು ಗೊತ್ತಾಗಿರುತ್ತದೆ. ಅದು ಕೊಟ್ಟು ಸೆಂಟ್ರಲ್ ಸಬ್‌ಸಿಡಿ ಕೊಡುತ್ತೇವೆ. ಅವರು ಹಣ ಕಳುಹಿಸಿ ಮೇಲೆ ಡಿಸ್‌ಪರ್ಸ್ ಮಾಡುತ್ತೇವೆಂದು ಅಲ್ಲಿ ನಾವು ಈಗಾಗಲೇ ಕೊಟ್ಟು ಬಿಟ್ಟಿರುತ್ತೇವೆ. ಆಮೇಲೆ ರಿಲೀಜ್ ಆದ ಹಣವನ್ನು ಪೂರ್ತಿಯಾಗಿ ಕೊಡಲಿಕ್ಕೆ ಆಗದ ಇರಬಹುದು. ಅದು ಡೆವಲಪ್‌ಮೆಂಟ್ ಲೋನ್ ಅಲ್ಲ, ಸಬ್‌ಸಿಡಿಯೂ ಅಲ್ಲ.

ಅದು ಡೆವಲಪ್‌ಮೆಂಟ್ ಲೋನ್ ಇರಲಿ, ಸಬ್ಸಿಡಿನೇ ಇರಲಿ. ಸ್ಯಾಂಕ್ಷನ್ ಮಾಡಿರುತ್ತೇವೆ, ಕೊಟ್ಟಿರುವುದಿಲ್ಲ. ಸೆಂಟ್ರಲ್ ಗೌರ್ನಮೆಂಟ್‌ನ ಸಬ್ಸಿಡಿ ನಾವು use ಮಾಡಿರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾನು ಕೇಳುತ್ತಿರುವುದೇನೆಂದರೆ, ೩ ಕೋಟಿ ೧ ಲಕ್ಷ ರೂಪಾಯಿಗಳು ಎಲ್ಲಿಗೆ ಹೋಯಿತು ? ನೀವು ಎಂಟರ್ ಪ್ರೂನರ್ಸ್‌ಗಳಿಗೆ ಕೊಟ್ಟಿರುವ ಸಬ್ಸಿಡಿ ಹಣ ಕೇವಲ ೧ ಕೋಟಿ ೯೨ ಲಕ್ಷ ರೂಪಾಯಿ ಮಾತ್ರ. ಕೇಂದ್ರ ಸರ್ಕಾರ ನಿಮಗೆ ೪ ಕೋಟಿ ೨ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ difference ಎಲ್ಲಿಗೆ ಹೋಯಿತು ? ಈ ಹಣದಲ್ಲಿ ನೀವು ಕೋಟಿ ೧ ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ ಇನ್ನು ಮಿಕ್ಕ ಹಣ ಎಲ್ಲಿಗೆ ಹೋಯಿತು ?

ಶ್ರೀ ಜೆ. ಹೆಚ್. ಪಟೇಲ್ —ಸೆಂಟ್ರಲ್ ಗೌರ್ನಮೆಂಟಿನವರು ಏನು ೪.೨ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೋ ಅದು ಈ ವರ್ಷಕ್ಕೆ ಅಲ್ಲ. ೧೯೮೬-೮೭ರಲ್ಲಿ ನಾವು ಸಬ್ಸಿಡಿ ಹಣ ಎಂದು ಎಂಟರ್‌ಪ್ರೂನರ್ಸ್‌ಗಳಿಗೆ ಏನು ಕೊಟ್ಟಿದ್ದೇವೋ ಆ ಹಣವನ್ನು ಮಾತ್ರ ಅಂದರೆ ೪.೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ೧೯೮೭-೮೮ರಲ್ಲಿ ಎಂಟರ್‌ಪ್ರೂನರ್ಸ್‌ಗಳಿಗೆ ನಾವು ಬಿಡುಗಡೆ ಮಾಡಿರುವ ಹಣದಲ್ಲಿ ಕೇಂದ್ರ ಸರ್ಕಾರವು ಇನ್ನೂ ನಮಗೆ ಹಣವನ್ನು ಕೊಟ್ಟಿಲ್ಲ ಕೇಂದ್ರ ಸರ್ಕಾರದವರು ಕೊಟ್ಟಿರುವ ೪.೨ ಕೋಟಿ ರೂಪಾಯಿಗಳಲ್ಲಿ ನೀವು ಎಂಟರ್‌ಪ್ರೂನರ್ಸ್‌ಗಳಿಗೆ ಕೊಟ್ಟಿರುವುದೇ ೧.೯೨ ಕೋಟಿ. ಇನ್ನು ಮಿಕ್ಕ ಹಣ ಎಲ್ಲಿ ಹೋಯಿತೆಂದು ಕೇಳಿದರೇನು ಹೇಳುವುದು ?

ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ.—ಹೋದಸಲ ೬ ಕೋಟಿ release ಮಾಡಿ disburse ಮಾಡಿದ್ದಾರೆ. ಈ ಸಲ ನೀವು ೪.೨ ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದೀರಿ. ಆದರೆ ಈ ವರ್ಷ ನಿಮಗೆ ಬಿಡುಗಡೆ ಮಾಡಿರುವ ೪.೨ ಕೋಟಿ ರೂಪಾಯಿಯಲ್ಲಿ ೧ ಕೋಟಿ ೯೪ ಲಕ್ಷ ರೂಪಾಯಿಗಳನ್ನು ಮಾತ್ರ ಎಂಟರ್‌ಪ್ರೂನರ್ಸ್‌ಗಳಿಗೆ ಡಿಸ್ಬರ್ಸ್ ಮಾಡಿದ್ದೀರಿ. ಇನ್ನು ಮಿಕ್ಕ ಹಣವನ್ನು ನೀವು ಡಿಸ್ಬರ್ಸ್ ಮಾಡಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಅನೇಕ ಎಂಟರ್‌ಪ್ರೂನರ್ಸ್‌ಗಳು ಅನೇಕ ಸಲ ನಮಗೆ ಸಬ್ಸಿಡಿ ಹಣ ಬಂದಿಲ್ಲವೆಂದು ಸುತ್ತಾಡಿರುವುದನ್ನು ನಾನು ನೋಡಿದ್ದೇನೆ. ನೀವು ನಿಜವಾಗಿ ಎಲ್ಲಾ ಹಣವನ್ನು ಬಿಡುಗಡೆ ಮಾಡಿದ್ದರೆ ಇವರುಗಳಿಗೆ ಏಕೆ ಸಬ್ಸಿಡಿ ಹಣ ಸಿಗಲಿಲ್ಲ. ನಾವು ಬೇಕಾದರೆ check up ಮಾಡಿಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಪುನಃ ಪುನಃ ಏನು ಹೇಳಲಿ ! ನಾವು ಸಬ್ಸಿಡಿ ಹಣವನ್ನು ಎಂಟರ್‌ಪ್ರೂನರ್ಸ್‌ಗಳಿಗೆ ಬಿಡುಗಡೆ ಮಾಡಿದ ಮೇಲೇನೇ ಕೇಂದ್ರ ಸರ್ಕಾರ ನಮಗೆ ಹಣವನ್ನು ಕೊಡುವುದು. ನಾವು ಈಗಾಗಲೇ ಕೊಟ್ಟು ಬಿಟ್ಟಿದ್ದೇವೆ. ಆ ಆಧಾರದ ಮೇಲೆ ಅವರು ನಮಗೆ Sanction ಮಾಡುವುದು.

ಶ್ರೀ ಎಂ. ವೀರಪ್ಪಮೊಯಿಲಿ.—೧೯೮೭–೮೮ರಲ್ಲಿ ಸೆಂಟ್ರಲ್ ಸಬ್ಸಿಡಿ ಮತ್ತು ಸ್ಟೇಟ್ ಗೌರ್ನಮೆಂಟ್ ಸಬ್ಸಿಡಿ ಸೇರಿ ಒಟ್ಟು ಬಾಕಿ ೮೭–೮೮ರ ಕೊನೆಯಲ್ಲಿ ೪೪ ಕೋಟಿ ೮೩ ಲಕ್ಷ ರೂಪಾಯಿಗಳು. ಇದರಲ್ಲಿ ಸ್ಟೇಟ್ ಗೌರ್ನಮೆಂಟ್ ಸಬ್ಸಿಡಿ ಎಷ್ಟು, ಸೆಂಟ್ರಲ್ ಗೌರ್ನಮೆಂಟ್ ಸಬ್ಸಿಡಿ ಎಷ್ಟು ಎಂದು ದಯಮಾಡಿ ಹೇಳುತ್ತೀರಾ ? ನಾನು ಹೇಳುತ್ತೇನೆ. ಆಮೇಲೆ ೮೮–೮೯ ಕ್ಕೆ ೧೫ ಕೋಟಿ sanction ಆಗಿರುವುದು. ಇಷ್ಟು ಬಾಕಿ ಇದೆ. ಕಳೆದ ವರ್ಷ ನೀವು ಒಟ್ಟು ಸೆಂಟ್ರಲ್ ಮತ್ತು ಸ್ಟೇಟ್ ಸಬ್ಸಿಡಿ ಸೇರಿಸಿ ೧೯೮೭–೮೮ ರಲ್ಲಿ ೮ ಕೋಟಿ ರೂಪಾಯಿಗಳನ್ನು ಸಬ್ಸಿಡಿ ಹಣವನ್ನು ಕೊಟ್ಟಿದ್ದೀರಿ. ನೀವು ಈ ರೀತಿ ೮ ಕೋಟಿ ಕೊಟ್ಟರೆ ಹಿಂದಿನದು ಬಾಕಿ disburse ಮಾಡಲಿಕ್ಕೆ ೭½–೮ ವರ್ಷ ಬೇಕಾಗಬಹುದು. ಹೀಗಾದರೆ ಕೈಗಾರಿಕೆಗಳ ಹೇಗೆ ಬರಬೇಕು ?

ಶ್ರೀ ಜೆ. ಹೆಚ್. ಪಟೇಲ್.—ನಾನು ಹೇಳುತ್ತಿರುವುದೇನೆಂದರೆ, ಸಬ್ಸಿಡಿ ಮತ್ತು ಡೆವಲಪ್‌ಮೆಂಟ್ ಲೋನ್ ಬಾಕಿ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹೊಸ ಇಂಡಸ್ಟ್ರಿಯಲ್ ಪಾಲಿಸಿಯನ್ನು ನಾವು ಅನೌನ್ಸ್ ಮಾಡಿರುವುದರಿಂದ ಹಿಂದೆ ಆಗಿರತಕ್ಕ ಕಮಿಟ್‌ಮೆಂಟ್ ಏನು ಇದೆ ಅದನ್ನು we have honoured it. There is no other way,

ಶ್ರೀ ಎಂ. ವೀರಪ್ಪಮೊಯಿಲಿ.—ತಾವು ಇಂಡಸ್ಟ್ರಿಯಲ್ ಪಾಲಿಸಿ ಸ್ಟೇಟ್‌ಮೆಂಟ್‌ನ್ನು ತಾವು ಇಲ್ಲಿ ಮಾಡಿದ್ದೀರಿ. ಬಹುಶಃ ಕರ್ನಾಟಕದ ಇತಿಹಾಸದಲ್ಲೇ ಇಂಥ ಎರಡು ಪುಟಗಳ ಕೈಗಾರಿಕಾ ನೀತಿಯನ್ನು ಯಾರು ಮಾಡಿರಲಿಲ್ಲವೆಂದು ಹೇಳಬೇಕಾಗುತ್ತದೆ. ಅಂಥ ದೊಡ್ಡ ದಾಖಲೆಯನ್ನು ತಾವು ಮಾಡಿದ್ದೀರಿ,

ಶ್ರೀ ಜೆ. ಹೆಚ್. ಪಟೇಲ್.—This is only for incentives. ನಾನು ಭಾಷಣ ಮಾಡುವಾಗಲೇ ಹೇಳಿದ್ದೇನೆ. ೧೯೮೩ರಲ್ಲಿ ಇದ್ದ ಇಂಡಸ್ಟ್ರಿಯಲ್ ಪಾಲಿಸಿಯನ್ನೇ ಕಂಟಿನ್ಯೂ ಮಾಡಲಾಗುತ್ತದೆ. ಲಾರ್ಜ್ ಸ್ಕೇಲ್ ಮತ್ತು ಮೀಡಿಯಮ್ ಸ್ಕೇಲ್ ಇಂಡಸ್ಟ್ರೀಗಳಿಗೆ ಕರ್ನಾಟಕ ಸರ್ಕಾರ ಪರ್ಮಿಷನ್ ಕೊಡುವುದಿಲ್ಲವೆಂದು ಹೇಳಿಲ್ಲ. ಅದು ತಪ್ಪು. ನಾವು ಲಾರ್ಜ್ ಸ್ಕೇಲ್ ಮತ್ತು ಮೀಡಿಯಮ್ ಸ್ಕೇಲ್ ಇಂಡಸ್ಟ್ರೀಗಳನ್ನು ಇನ್‌ವೈಟ್ ಮಾಡುತ್ತೇವೆ. But not in Bangalore and not in congested areas, Let them go to villages. ಆಮೇಲೆ Power oriented industriesಗೆ discouragement ವಿಲೇಜ್ ಇಂಡಸ್ಟ್ರೀ ಮತ್ತು ಕಾಟೇಜ್ ಇಂಡಸ್ಟ್ರೀ ಬಗ್ಗೆ ಆದೇನೆ, ಬೇರೆ ಇಲ್ಲ. But incentives and concesions ಏನಿವೆ, ಅದಕ್ಕೆ ಬೇರೆನೇ ಒಂದು ಚಾಪ್ಟರೇ ಇದೆ.

2–00 P.M.

SRI M. VEERAPPA MOILY.—It is not a comprehensive industrial policy statement.

SRI J. H. PATEL.—It is an industrial policy statement.

SRI M. VEERAPPA MOILY.—In supplement to the policy which has already been announced and which is in existence in Karnataka.

ಶ್ರೀ ಜೆ. ಎಚ್. ಪಟೇಲ್.—Exactly. ಇನ್ನು ಎರಡು ಪೇಜ್‌ಗಳಲ್ಲಿ ಪಾಲಿಸಿಯನ್ನು ಕೊಟ್ಟ ಬಗ್ಗೆ ಹೇಳಿದ್ದೀರಿ, ಇದನ್ನು ಮೊದಲೇ ಹೇಳಿದ್ದರೆ ೨೫ ಪೇಜ್‌ಗಳಷ್ಟು ಬೇಕಾದರೂ ಕೊಡಬಹುದಾಗಿತ್ತು. ಇಂತಿಷ್ಟು ಪೇಜ್‌ಗಳು ಎಂದು ಹೇಳುವುದರಲ್ಲಿ ಏನಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಹೀಗೆ ಇನ್ಸೆಂಟಿವ್ಸ್ ಇಲ್ಲದೇ ಹಿಂದೆ ಅನೇಕ ವರ್ಷಗಳ ಕಾಲದಿಂದ ಕೈಗಾರಿಕೆಗಳು ಏನು ತೊಂದರೆಯನ್ನು ಅನುಭವಿಸುತ್ತಾ ಬರುತ್ತಾ ಇದ್ದು, ಈ ಹೇಳಿಕೆ ಮತ್ತು ನಿಮ್ಮ ನೀತಿ ಏನಿತ್ತು ಅದನ್ನು ತೆಗೆದು ಬಿಟ್ಟಿದ್ದೀರಿ. ಡೆವಲಪ್‌ಮೆಂಟ್ ಲೋನ್ ಇಲ್ಲ. In para-3 even in committed development loan a provision of interest-free development loan and interest-free working capital loan is proposed to be discontinued and instead ST exemption is

given. ಆಮೇಲೆ 4th ನಲ್ಲಿ A number of concession which were offered earlies and many of them which were not uitlised by the enter-preneur have been proposed to be discontinued. ಈಗ ಆ ಕಮಿಟ್‌ಮೆಂಟ್ ಮೇಲೆ ಇಂಡಸ್ಟ್ರೀಸ್ ಮಾಡಿರುತ್ತಾರೆ. ನಾನು ಕೇಳುವುದು ಇಷ್ಟೆ. ಯಾರು ಇಫೆಕ್ಟಿವ್ ಸ್ಟೆಪ್ಸ್ ತೆಗೆದುಕೊಂಡಿದ್ದಾರೆ, ಅವರಿಗೆ ಈ ಹಿಂದಿನ ಕನ್‌ಸೆಶನ್ ತಾವು ಮುಂದುವರಿಸುತ್ತೀರಾ ಅಥವಾ ಬಿಡುತ್ತೀರಾ ಎಂದು ಹೇಳಬೇಕು ಏಕೆಂದರೆ ನಿಮ್ಮನ್ನು ನಂಬಿ ಅವರು ಇಲ್ಲಿ ಬಂದಿದ್ದಾರೆ. ಅವರಿಗೆ ನೀವು ಇಷ್ಟರ ವರೆಗೆ ಕ್ಲೈಮ್ ಹಾಕಿಲ್ಲ, ಇನ್ನು ಹಾಕಬೇಕು ಎಂದು ಹೇಳಿದರೆ ಹೇಗೆ ? That is not a cut off data and cannot be a cut of data ಅಂದರೆ, ಇದು ನೆಗೆಟಿವ್ ಇನ್ಸ್‌ಂಟಿವ್ ಪಾಲಿಸಿ ಸ್ಟೇಟ್‌ಮೆಂಟ್ ಆಗಿದೆ. ಇದರಿಂದ ಕೊಟ್ಟಿದ್ದಕಿಂತಲೂ ಹೆಚ್ಚಾಗಿ ೯೯ ಪರ್ಸೆಂಟ್ ಪಾಲು ಎಲ್ಲಾ ಕನ್‌ಸೆಶನ್ ಹಿಂದಕ್ಕೆ ತೆಗೆದುಕೊಳ್ಳತಕ್ಕಂಥ ಸ್ಟೇಟ್‌ಮೆಂಟ್ ಆಗಿದೆ. ಆದುದರಿಂದ ಇದನ್ನು ಮರು ಚಿಂತನೆ ಮಾಡಬೇಕು.

ಇನ್ನು ವೀಲ್ ಅಂಡ್ ಎಕ್ಸಲ್ ಪ್ಲಾಂಟ್ ಬಗ್ಗೆ ಹೇಳಿದ್ದೀರಿ. ಅದಕ್ಕೆ ನಾವೆಲ್ಲಾ ಪವರ್ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಸೆಂಟ್ರಲ್ ಸೆಕ್ಟಾರ್ ಇಂಡಸ್ಟ್ರೀಗೆ ಯಾವ ತರಹ ಎನ್‌ಕರೇಜ್ ಮಾಡುತ್ತೀರಿ ಎಂಬ ಬಗ್ಗೆ ಒಂದು ಹೇಳಿಕೆ ಹಿಂದು ಪತ್ರಿಕೆಯಲ್ಲಿ ೧೬-೪-೧೯೮೭ರಲ್ಲಿ ಬಂದಿತ್ತು. ಆ ಫ್ಯಾಕ್ಟರಿಯವರೇ ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದಾರೆ. "They have reached the target even though the State Government gave deaf ears to the power problem of our factory."

This is what they have said.

SRI J·H. PATEL.—I think the gentleman who gave the statement has apologised because he made it without any basis. Then Govt. of India also wrote to us and use aho we also to them

SRI M. VEERAPPA MOILY.—Anyway this is the statement which has appeared. ನಾನು ಹೇಳುವುದೇನೆಂದರೆ ನಾವು ನಿಮ್ಮ ಆಟಿಟ್ಯೂಡ್ ಟೀಕೆ ಮಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಕೈಗಾರಿಕಾ ಅಭಿವೃದ್ಧಿ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಿ ಅದಕ್ಕೆ ನಮ್ಮ ಬೆಂಬಲ ಮತ್ತು ಪ್ರೋತ್ಸಾಹ ಇದ್ದೇ ಇದೆ. ಆದರೆ ನಾವು ಪ್ರತಿ ವರ್ಷವೂ ಕೆಲವು ಸಲಹೆಗಳನ್ನು ಕೊಡುತ್ತೇವೆ ಮತ್ತು ಕೈಗಾರಿಕಾ ನೀತಿ ಬಗ್ಗೆ ನಾವು ತಿದ್ದುಪಡಿಯನ್ನು ಮಂಡನೆ ಮಾಡುತ್ತೇವೆ. ಆದರೆ ನೀವು ಕುರುಡ ಹಿಡಿದದ್ದೇ ಬಡಿಗೆ ಎಂದು ಉತ್ತರವನ್ನು ಕೊಡುತ್ತೀರಿ. ಆ ರೀತಿಯಲ್ಲಿ ತಮ್ಮ ಕೈಗಾರಿಕಾ ನೀತಿ ಮತ್ತು ಇಲಾಖೆ ನಡೆಯುತ್ತಾ ಇದೆ. ಆ ಬಗ್ಗೆ ನಾವು ಟೀಕೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಹಿಂದೆ ಕೆಲವು ವಿಷಯಗಳ ಬಗ್ಗೆ ಕ್ಲಾರಿಫಿಕೇಷನ್ ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್,—ಈ ಸ್ಟೇಟ್‌ಮೆಂಟ್ ಪ್ರಕಾರ ಕಟ್‌ಆಫ್ ಡೇಟ್ ಯಾವುದು ಎಂದು ಅಂದರೆ ಕಟ್ ಆಫ್ ಡೇಟ್ ನೋಟಿಫಿಕೇಶನ್ ಆಗಿ ಡೇಟ್ ಫಿಕ್ಸ್ ಮಾಡಬೇಕಾಗುತ್ತದೆ. ಇದು ಸರ್ಕಾರದವರು ಒಪ್ಪಿಕೊಂಡ ಪಾಲಿಸಿ. ಇದನ್ನು ಜಾರಿಗೆ ಕೊಡುವಾಗ ಇಫೆಕ್ಟೀವ್ ಸ್ಟೆಪ್ಸ್ ತೆಗೆದುಕೊಂಡು ಹಿಂದೆ ಕಮಿಟ್‌ಮೆಂಟ್ ಏನಿದೆ ಅದನ್ನು ಆನರ್ ಮಾಡುತ್ತೇವೆ.

SMT. MUKHTARUNNISA.—How many Companies and Corporations are under your jurisdiction and how many are under loss ?

ಶ್ರೀ ಜೆ. ಎಚ್. ಪಟೇಲ್,—ನಮ್ಮಲ್ಲಿ ೫೮ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಇದ್ದಾವೆ. ಅದರೊಳಗೆ ಲಾಭ ಮತ್ತು ಲುಕ್ಸಾನು ಲಿಸ್ಟನ್ನು ಬೇರೆಯಾಗಿ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀಮತಿ ಮುಕ್ತ್ತರುನ್ನೀಸಾ.—ನನಗೆ ಕಳುಹಿಸಿಕೊಡುತ್ತೀರಿ, ಆದರೆ ನಮ್ಮ ಇತರ ಮಾನ್ಯ ಸದಸ್ಯರಿಗೆ ಗೊತ್ತಾಗಬೇಕಲ್ಲ ?

ಶ್ರೀ ಜೆ. ಎಚ್. ಪಟೇಲ್.— ನಿಮಗೆ ಉತ್ತರ ಕೊಟ್ಟಿದ್ದೇನೆ ಎಂದು ನಾನು ಅವರಿಗೆಲ್ಲಾ ಹೇಳುತ್ತೇನೆ.

SMT. MUKHTARUNNISA.—Secondly, what steps you have taken to reopen the sick industries like K. R. Mills and others ?

ಶ್ರೀ ಜೆ ಹೆಚ್. ಪಟೇಲ್.—ಕೆ. ಆರ್. ಮಿಲ್, ದಾವಣಗೆರೆ ಮಿಲ್ ಎಲ್ಲ ಆಗಲೇ ಹೇಳಿದೆ. ಬಿಐಎಫ್‌ಆರ್ ಎಂದು ಕೇಂದ್ರ ಸಂಸ್ಥೆ ಒಂದಿದೆ. ಅದಕ್ಕೆ ಸಿಕ್ ಇಂಡಸ್ಟ್ರಿ ಬಗ್ಗೆ ರೆಫರ್ ಮಾಡುತ್ತೇವೆ. ಅವರು ಸ್ಟಡಿ ಮಾಡಿ ಅದಕ್ಕೇನು ಮದ್ದು ಮಾಡಬೇಕು, ಮತ್ತೆ ಅದಕ್ಕೆ ಜೀವ ತುಂಬಲು ವಯಬಲ್ ಎಂಬ ವಿಚಾರದಲ್ಲಿ ತಿಳಿಸುತ್ತೇವೆ, ಆ ಪ್ರಕಾರ ನಾವು ಮಾಡುತ್ತೇವೆ.

SMT. MUKHTARUNNISA.— What is the budget sanctioned for subsidy and developmental loan for 1988-89 ? How much is the backlog ? what measures you have taken to set right this ?

ಶ್ರೀ ಜೆ. ಹೆಚ್. ಪಟೇಲ್.—ಇದುವರೆವಿಗೂ ಕೊಡದೇ ಇರುವುದಕ್ಕೂ ಈಗ ಹೇಳುವುದಕ್ಕೂ ಸಂಬಂಧ ಇರುವುದಿಲ್ಲ, ಆದರೂ ನಮ್ಮ ಕಮಿಟ್‌ಮೆಂಟ್ ಏನಿದೆ ಅದನ್ನು ಆನರ್ ಮಾಡುತ್ತೇವೆ, ಸ್ಟೆಪ್ಸ್ ತೆಗೆದುಕೊಳ್ಳುತ್ತೇವೆ.

SMT. MUKTHARUNNISA.—What is the investment of KSIIDC in Joint Sector for the years 1987-88 and 1988-89 ? what is the achievement in these two years ?

ಶ್ರೀ ಜೆ. ಹೆಚ್. ಪಟೇಲ್.—ಕೆಎಸ್‌ಐಐಡಿಸಿ ಮತ್ತು ಕೆಎಸ್‌ಎಫ್‌ಸಿ ಈ ಎರಡೂ ಹಣಕಾಸಿನ ಸಂಸ್ಥೆಗಳು ಏನಿವೆ. ಈ ವರ್ಷ ಅವರ ಟಾರ್ಗೆಟನ್ನು ಮೀರಿವೆ. ಇಲ್ಲಿಯವರೆಗೂ ಸುಮಾರು ೩೦೦ ಕೋಟಿ ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟಿನಲ್ಲಿ ಕೆಎಸ್‌ಐಐಡಿಸಿ ಪಾರ್ಟಿಸಿಪೇಟ್ ಮಾಡಿದೆ, ಕೆಎಸ್‌ಎಫ್‌ಸಿ ಯಂತೂ ೧೦೦ ಕೋಟಿಗಳ ಟಾರ್ಗೆಟನ್ನು ಅಚೀವ್ ಮಾಡಿ ರಾಷ್ಟ್ರಕ್ಕೇ ಒಂದನೆಯದೆನಿಸಿದೆ. Sanction in 1987-88 is Rs. 281 lakhs. Loan disbursement 29 crore, Total is 34 cr. 31 lakhs in 1987-88. Investment is 201 crores. Disbursed loan is 31 cr, 69 lakhs.

ಶ್ರೀ ಬಿ. ಬಸವಲಿಂಗಪ್ಪ.— ಎರಡೇ ಪ್ರಶ್ನೆ ನನ್ನವು. ಬ್ಯುರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಬಗ್ಗೆ ಪೇಜ್ ೧೬ರಲ್ಲಿ ಟೇಬಲ್ ೨.೦ರಲ್ಲಿ ಏನು ಹೇಳಿದೆ ಎಂದರೆ ಟೋಟಲ್ ರಿಸೋರ್ಸಸ್ ಇನ್ ಕರ್ನಾಟಕ ೪,೬೪೪ ಕೋಟಿಗಳೆಂದು. ಇದರಲ್ಲಿ ಅಕ್ಯುಮಲೇಟೆಡ್ ೩೮೫ ಕೋಟಿ ಲಾಸ್ ಎಂದು ತೋರಿಸಿದೆ, ಈ ಲಾಸನ್ನು ಯಾವಾಗ ನೀವು ತುಂಬಲಿಕ್ಕೆ ಪ್ರಯತ್ನ ಮಾಡುತ್ತೀರಾ ? ಒಂದೇ ವರ್ಷದಲ್ಲಿ ೧೨೭ ಕೋಟಿ ಲುಕ್ಸಾನಾಗಿದೆ. ಎರಡನೆಯದು ಎಸ್. ಸಿ. ಗಳ ಬಗ್ಗೆ ಬಹಳ ಕನಿಕರದಿಂದ ಭಾಷಣ ಮಾಡುತ್ತಿದ್ದೀರಿ. ನೀವು ಇಂಡಸ್ಟ್ರಿಯಲ್ ಪಾಲಿಸಿ ಎಂದು ಹೇಳಿ ನಮ್ಮ ಕೈಗೆ ಕೊಟ್ಟಿದ್ದೀರಲ್ಲ ಅದರಲ್ಲಿ Provision of interest free development loan and interest free working capital loan is proposed to be discontinued and instead sales tax exemption and somany things are now added. etc., ಎಂದು ಹೇಳಿದ್ದೀರಿ. ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯಿಸುವ ರೀತಿಯಲ್ಲಿ ರಾಜ್ಯಾಂಗದಲ್ಲಿ ಮಾಡಿದ್ದಾರೆ. ಎಲ್ಲರಿಗೂ ಅನುಕೂಲವಾಗುವ ಹಾಗೆ ಪಾಲಿಸಿ ಮಾಡುತ್ತಾರೆ. Equality of opportunity. But this will not apply to Scs/Sts. ಈ ಪಾಲಿಸಿ ಸ್ಟೇಟ್‌ಮೆಂಟ್ ಎಂದು ಏನು ಮಾಡಿದ್ದೀರಿ ಅದರ ಬಗ್ಗೆ ಸ್ವಲ್ಪ ಗಮನ ಹರಿಸಬೇಕು. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಬೇರೆಯವರೂ ಕೂಡ ಒಂದೇ ತಕ್ಕಡಿಯಲ್ಲಿ ತೂಕ ಮಾಡುವುದಾದರೆ ಮತ್ತು ಅವರಿಗೆ ಏನು ಕನ್‌ಸೆಷನ್ ಕೊಡುತ್ತಿತ್ತು, ಅದನ್ನು ಡಿಸ್ ಕಂಟಿನ್ಯು ಮಾಡುವುದಾದರೆ ಹೇಗೆ ಅವರು ನಿಮ್ಮ ಕನಿಕರದ ವ್ಯಾಪ್ತಿಗೆ ಬರುತ್ತಾರೆ ಎಂಬುದನ್ನು ಹೇಳಬೇಕು.

Exception must be shown to Scs because they cannot come up even educated boys try to enter into Government service because it is a secured job. Some educated tried to go in for other sectors particularly industries side. ಇದಕ್ಕೆ ತಾವು ಹೆಚ್ಚು ಹೆಚ್ಚಾಗಿ ಪ್ರೋತ್ಸಾಹ ಕೊಡಬೇಕು ಸಹಕಾರ ಕೊಡಬೇಕು. ಎಸ್‌ಎಸ್‌ಐ ಆರ್ಗನೈಸೇಷನ್‌: ಇಂಡಸ್ಟ್ರೀಸ್‌ ಇಲಾಖೆಯಲ್ಲಿರತಕ್ಕಂತಹ ಅಧಿಕಾರಿಗಳು ಇಂತಹವರನ್ನು ಕರೆದುಕೊಂಡು ಬಂದು ಅವರಿಗೆ ಎಲ್ಲಾ ರೀತಿಯ ಸಹಾಯ ಸಹಕಾರಗಳನ್ನು ಹಣವನ್ನು ಕೊಟ್ಟು ಅವರು ಕೈಗಾರಿಕೆಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕು. ಈ ದೇಶದಲ್ಲಿ ಇವತ್ತು ಇರುವವರು ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಟಾಟಾ, ಬಿರ್ಲಾ, ಡಾಲ್‌ಮಿಯಾ ಮುಂತಾದವರು ನಡೆಸುತ್ತಿದ್ದಾರೆ ಇಲ್ಲದವರು ಏನೂ ಪ್ರಾರಂಭ ಮಾಡಿಲ್ಲ. Hence special care and encouragement will have to be given to them.

ಶ್ರೀ ಜೆ. ಎಚ್‌. ಪಟೇಲ್‌.—ಮಾನ್ಯ ಸದಸ್ಯರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ — ತೆಗೆದುಕೊಂಡು ಓದಿ ಹೇಳಿ.

ಶ್ರೀ ಜೆ. ಹೆಚ್‌. ಪಟೇಲ್‌.—ಓದುತ್ತೇನೆ. ಪಾಠ ಹೇಳಲೇ?

ಶ್ರೀ ಬಿ. ಬಸವಲಿಂಗಪ್ಪ.—ಎಸ್‌.ಸಿ. ಯವರು ಯಾರೇ ಕೈಗಾರಿಕೆ ನಡೆಸುವದಕ್ಕೆ ನಿಮ್ಮಿಂದ ಸಹಾಯ ಪಡೆದಿದ್ದಾರೆ ಅವರು ಸರಿಯಾಗಿ ಕೈಗಾರಿಕೆಗಳನ್ನು ನಡೆಸದೇ ಹೋದರೆ ಏಕೆ ನಡೆಸಲಿಲ್ಲ ಎಂಬುದರ ಬಗ್ಗೆ ತೀವ್ರವಾದ ಯೋಚನೆಯನ್ನು ಮಾಡಿ ಅವರ ಸರಿಯಾದ ರೀತಿಯಲ್ಲಿ ನಡೆಸಲು ಸೂಕ್ತ ಪ್ರೋತ್ಸಾಹವನ್ನು ಕೊಡಬೇಕು. ಇದನ್ನು ತಾವೂ ಕೂಡ ಒಪ್ಪುತ್ತೀರಿ ಎಂದು ಕಾಣಿಸುತ್ತದೆ.

ಶ್ರೀ ಜೆ. ಹೆಚ್‌. ಪಟೇಲ್‌.—The number of concessions which were offered earlier have been proposed to be discontinued. ಅವರಿಗಷ್ಟೆ ಮಾತ್ರ ಮಾಡುವುದಕ್ಕಾಗುವುದಿಲ್ಲ. ಅವರಿಗೆ ಮಾಡುವುದಕ್ಕೆ ಏನಾದರೂ ಬರುತ್ತದೆಯೋ ಎಂದು ನೋಡೋಣ.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ಸ್ಟೇಟ್‌ ಬ್ಯೂರೋ ಎಂಟರ್‌ ಪ್ರೈಸಸ್‌ ಬಗ್ಗೆ ಹೇಳಿದ್ದೆ. ಉತ್ತರ ಕೊಡುವುದನ್ನು ಮರೆತಿದ್ದೀರಾ?

ಶ್ರೀ ಜೆ. ಹೆಚ್‌, ಪಟೇಲ್‌,—ನೀವು ಏನು ಹೇಳಿದಿರಿ ಸ್ಟೇಟ್‌ ಇನ್‌ವೆಸ್ಟ್‌ಮೆಂಟ್‌ ಇನ್‌ ಪಬ್ಲಿಕ್‌ ಸೆಕ್ಟರ್‌ ಸ್ಟೇಟಿನ್ದು ಇಂಡಸ್ಟ್ರೀಸ್‌ ೪ ಸಾವಿರ ಕೋಟಿ ಎಂದು. ಅದು ೪ ಸಾವಿರ ಕೋಟಿ ಅಲ್ಲ. ಅದು ಸುಮಾರು ೧೫೦೦ ಕೋಟಿ ಇನ್‌ವೆಸ್ಟ್‌ಮೆಂಟ್‌ ಇದೆ.

SRI B. BASAVALINGAPPA.—Discontinuation will not affect to SCs/STs, this should be added here.

ಶ್ರೀ ಪಂಪಾಪತಿ.—ನಮ್ಮಲ್ಲಿ [illegible]೦ ಟೆಕ್ಸ್‌ಟೈಲ್‌ ಮಿಲ್‌ಗಳು ಇರತಕ್ಕಂಥಾದ್ದು ಅದರಲ್ಲಿ ೧೦ ಮುಚ್ಚಿ ಹೋಗಿದೆ. ದಾವಣಗೆರೆಯಲ್ಲಿ ೪ ಇದೆ. ನಾಲ್ಕರಲ್ಲಿ ಒಂದಂತೂ ಪೂರ್ತಿ ಮೆಷಿನನ್ನೇ ತೆಗೆದು ಹಾಕಿದ್ದಾರೆ. ಇನ್ನು ಮೂರು ಮಿಲ್‌ಗಳನ್ನು ಪ್ರಾರಂಭ ಮಾಡಬೇಕು. ಒಂದು ವರ್ಷದಿಂದ ಒತ್ತಾಯ ಮಾಡುತ್ತಿದ್ದೇವೆ, ಅದಕ್ಕೆ ಹಲವಾರು ಮೀಟಿಂಗ್ಸ್‌ಗಳನ್ನು ಅಧಿಕಾರಿಗಳ ಮಟ್ಟದಲ್ಲಿ ಮುಖ್ಯ ಮಂತ್ರಿಗಳ ಮಟ್ಟದಲ್ಲಿ ಮಾನ್ಯ ಕಾರ್ಮಿಕ ಮಂತ್ರಿಗಳ ಮಟ್ಟದಲ್ಲಿ, ಮತ್ತು ಮಾನ್ಯ ಕೈಗಾರಿಕಾ ಮಂತ್ರಿಗಳ ಮಟ್ಟದಲ್ಲಿ ನಡೆದಿದೆ. ಅದನ್ನು ಬಿ.ಎ.ಎಫ್‌.ಆರ್‌. ಗೆ ಹಾಕಿದ್ದಾರೆ. ಅವರು ಕೂಡಾ ಸಹಕಾರ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ನಮ್ಮ ಆಡಳಿತ ವರ್ಗದವರಿಗೂ. ಕಾರ್ಮಿಕ ವರ್ಗದವರಿಗೂ ಬಿ.ಎ.ಎಫ್‌.ಆರ್‌. ಪ್ರಕಾರ ಕಾರ್ಮಿಕ ಮಂತ್ರಿಗಳು ಸಭೆಯನ್ನು ಕರೆಯುವುದಕ್ಕೆ ಅವರು ಯಾವುದೇ ರೀತಿಯಲ್ಲಿ ಸಹಕಾರ ಮನೋಭಾವನೆಯನ್ನು ತೋರಿಸಿಲ್ಲ. ಅವರು ಮಿಲ್ಲನ್ನು ನಡೆಸತಕ್ಕಂಥ ಒಂದು ಉದ್ದೇಶ ಕೂಡಾ ಅವರು ವ್ಯಕ್ತಪಡಿಸಿಲ್ಲ. ಆದುದರಿಂದ ತಮ್ಮ ಮೂಲಕ ಆದರೂ ಒಂದು ಸಭೆಯನ್ನು ಕರೆಯಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆ ಇದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳು ತಿಳಿಸಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಸಭೆಯನ್ನು ಕರೆದು ಆ ಮಿಲ್‌ಗಳನ್ನು ನಡೆಸುತ್ತೀರೋ ಅಥವಾ ಆ ಮಿಲ್‌ಗಳನ್ನು ಮುಚ್ಚುತ್ತೀರೋ ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಗಣೇಶ ಮತ್ತು ಸಿದ್ಧೇಶ್ವರ ಮಿಲ್‌ಗಳು ಅವುಗಳ ಸ್ವಾಸ್ಥತೆಯನ್ನು ಕಾಪಾಡುವುದಕ್ಕೆ ಸರ್ಕಾರ ಪ್ರಯತ್ನಪಟ್ಟಷ್ಟು ಬಹುಶಃ ಯಾರೂ ಮಾಡಲಿಕ್ಕಿಲ್ಲ. ಪಂಪಾಪತಿಯವರಿಗೆ ಯೂನಿಯನ್ ಮತ್ತು ಅಲ್ಲಿರತಕ್ಕಂಥ ಕಾರ್ಮಿಕರ ಕಷ್ಟ ಅವರಿಗೆ ಗೊತ್ತಿದೆ. ನಾನು ಅದೇ ಊರಿನವನು. ಆ ಎರಡು ಮಿಲ್‌ಗಳನ್ನು ಸ್ಥಾಪನೆ ಮಾಡಿದವರು ಮತ್ತು ಅದನ್ನು ನಡೆಸಿದವರು ತಮ್ಮದೇ ಆದಂಥ ನೋವಿನ ಕತೆಗಳನ್ನು ಸರ್ಕಾರದ ಮುಂದೆ ಹೇಳಿದ್ದಾರೆ. ಆದರೆ ಒಂದು ಸಮಗ್ರ ದೃಷ್ಟಿಯಿಂದ ಕಾರ್ಯಕ್ರಮಗಳನ್ನು ಕೈಗೊಂಡು ಪುನರ್ ಪ್ರಯತ್ನ ಮಾಡಬೇಕು ಎಂದು ಅವರಿಂದ ಬಿ.ಐ.ಎಫ್.ಆರ್. ಗೆ ಕಳುಹಿಸಿ ಬಿ.ಐ.ಎಫ್.ಆರ್. ಕೂಡಾ ಒಂದರ ಬಗ್ಗೆ ನಿಗಧಿಯಾದಂಥ ಡೈರೆಕ್ಷನ್ ಕೊಡುವುದಕ್ಕೆ ತಯಾರಾಗಿದ್ದಾರೆ. ಇನ್ನೊಂದು ರೆಫರ್ ಆಗಿದೆ. ಎರಡು ರೆಫರ್ ಆಗಿ ಬಂದಮೇಲೆ ಅದಕ್ಕೆ ಏನು ಇನ್‌ಸೆಂಟೀವ್ಸ್ ಕೊಡಬೇಕು, ಏನು ಕನ್‌ಸೀಷನ್ಸ್ ಕೊಡಬೇಕು ಬ್ಯಾಂಕರ್ಸ್ ಏನು ಮಾಡಬೇಕು ಅದು ಗೌರ್ನಮೆಂಟ್ ಎಲೆಕ್ಟ್ರಿಸಿಟಿ ಬಗ್ಗೆ, ಮತ್ತೊಂದರಬಗ್ಗೆ ಸೇಲ್ಸ್ ಟ್ಯಾಕ್ಸ್ ರಿಕವರಿ ಬಗ್ಗೆ, ಅದಕ್ಕೆ ಏನು ಕನ್‌ಸೆಷನ್ ಕೊಡಬೇಕೋ ಅದನ್ನು ಕೊಡುವುದಕ್ಕೆ ನಾವು ತಯಾರು ಇದ್ದೇವೆ. ಪಂಪಾಪತಿ ಯವರು ಅದನ್ನು ಮಾಡುತ್ತೀರೋ ಅಥವಾ ಇಲ್ಲವೇ ಎಂದು ಕೇಳಿದರು ಅದಕ್ಕೆ ಏನೂ ಹೇಳುವುದಕ್ಕಾಗುವುದಿಲ್ಲ. ಅದರ ಈ ತರಹ ಬಗೆಹರಿಯುವ ಪ್ರಶ್ನೆ ಅಲ್ಲ. ಮಾಡಬೇಕು ಎನ್ನುವ ತೀರ್ಮಾನದಿಂದ ಇದನ್ನೆಲ್ಲಾ ಪ್ರಯತ್ನ ಮಾಡುತ್ತಿರುವುದು. ಮಾಡಬಾರದು ಎಂದು ಹೇಳಿದರೆ ನನಗೇನು ಇದು ಕಾಟ.

ಶ್ರೀ ಪಂಪಾಪತಿ.—ಬಿ.ಐ.ಎಫ್.ಆರ್. ಪ್ರಕಾರ ಕಾರ್ಮಿಕರ ಮತ್ತು ಮಾಲೀಕರ ಮಧ್ಯೆ ಒಂದು ಒಡಂಬಡಿಕೆ ಪತ್ರ ಆಗಬೇಕು. ಒಂದು ಸಭೆಯನ್ನು ಕರೆಯಬೇಕು ಎಂದು ಮಾನ್ಯ ಕಾರ್ಮಿಕ ಸಚಿವರಿಗೂ ಮತ್ತು ತಮಗೂ ಎಲ್ಲರಿಗೂ ತಿಳಿಸಿದ್ದೇನೆ. ಯಾವಾಗ ಸಭೆಯನ್ನು ಕರೆಯುತ್ತೀರಿ ಎಂದು ಹೇಳಬೇಕು. ಏಕೆಂದರೆ ಅಲ್ಲಿಗೆ ಹೋದಾಗ ಕೆಲಸಗಾರರು ಅಲ್ಲಿ ಏನಾಯಿತು ಎಂದು ಕೇಳುತ್ತಾರೆ? ಆಗ ನಾವು ಏನು ಹೇಳಬೇಕು. ನೀವು ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಮಾನ್ಯ ಮಂತ್ರಿಗಳು ಈ ರೀತಿ ಹೇಳಿದ್ದಾರೆ ಎಂದು ನಾವು ಕಾರ್ಮಿಕರಿಗೆ ತಿಳಿಸಬಹುದು.

ಶ್ರೀ ಜೆ.ಹೆಚ್. ಪಟೇಲ್.—ನಾವು ಈ ಕಾರ್ಖಾನೆಗಳನ್ನು ಪ್ರಾರಂಭ ಮಾಡುತ್ತೇವೆ, ಅದರ ಬಗ್ಗೆ ಅನುಮಾನ ಬೇಡ. ಅದಕ್ಕೆ ಕೆಲವು ಪ್ರೊಸೀಜರ್ ಇರುತ್ತದೆ. ಮಾಲೀಕರು ಸಹಕರಿಸಿಲ್ಲ ಎಂದು ಹೇಳುತ್ತಾರೆ. ನಾನು ಕರೆಸಿ ಮಾತನಾಡುತ್ತೇನೆ, ಸಹಕರಿಸಿದರೆ ಒಂದು ಮಾರ್ಗ ಸಹಕರಿಸದಿದ್ದರೆ ಇನ್ನೊಂದು ಮಾರ್ಗ ಇದ್ದೇ ಇದೆ. ಈಗ ಬೆಂಕಿ ಹಚ್ಚಿ ಬೇಳೆ, ಅಕ್ಕಿ ಎಲ್ಲವನ್ನೂ ಹಾಕಿದ್ದೇವೆ. ಅದು ಬೇಯುವವರೆಗೂ ಕಾಯಬೇಕು. ಸ್ವಲ್ಪ ಹೊತ್ತಾದರೂ ಅದು ಬೇಯಬೇಕಲ್ಲ.

ಶ್ರೀ ಪಂಪಾಪತಿ.—ಇದು ಇಡೀ ವರ್ಷವೇ ಆಯಿತು. ಕೆಲವರು ವಿಷ ಕು ದಿದ್ದಾರೆ, ಕೆಲವರು ಉರುಳು ಹಾಕಿಕೊಂಡಿದ್ದಾರೆ, ಇನ್ನೆ ಕೆಲವರು ಬಾವಿಯಲ್ಲಿ ಬಿದ್ದು ಸತ್ತಿದ್ದಾರೆ. ಇನ್ನು ಯಾವ ಯಾವ ಮಟ್ಟದಲ್ಲಿ ಜನ ಸಾಯಬೇಕು ಹೇಳಿ. ಆದ್ದರಿಂದ ಈಗಲಾದರೂ ಯಾವಾಗ ಸಭೆಯನ್ನು ಕರೆಯುತ್ತೀರಿ ಎಂದು ಹೇಳಬೇಕು.

ಶ್ರೀ ಜೆ. ಹೆಚ್. ಪಟೇಲ್.—ಒಂದು ಮಾರ್ಗದಲ್ಲಿ ಹೋಗಬೇಕಲ್ಲವೇ? ಹಾರುವುದಕ್ಕೆ ಆಗುವುದಿಲ್ಲ. ನಡೆದುಕೊಂಡೇ ಹೋಗಬೇಕು. ನನಗೆ ವಿಶ್ವಾಸ ಇದೆ. ನಮ್ಮ ಸರ್ಕಾರಕ್ಕೆ ವಿಶ್ವಾಸ ಇದೆ, ಪ್ರಯತ್ನ ಮಾಡುತ್ತೇವೆ.

ಶ್ರೀ ಪಂಪಾಪತಿ.—ಮೀಟಿಂಗ್ ಕರೆಯುವುದು ಯಾವಾಗ?

ಶ್ರೀ ಜೆ. ಹೆಚ್. ಪಟೇಲ್.—ತ್‌ರೀಖನ್ನು ಗೊತ್ತು ಮಾಡುತ್ತೇವೆ.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಎರಡು ಮೀಟಿಂಗ್ ಆಗಿದೆ. ಕಾರ್ಮಿಕ ಸಚಿವರು ಮತ್ತು ಕೈಗಾರಿಕೆ ಸಚಿವರ ಜೊತೆಯಲ್ಲಿ ಆಗಿದೆ. ನೀವು ಅವರನ್ನು ಕರೆಸಿ ಮೀಟಿಂಗ್ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಜೆ. ಹೆಚ್. ಪಟೇಲ್ ಆದಷ್ಟು ಬೇಗ ಕರೆಸಿ ಮಾತನಾಡುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಆದಷ್ಟು ಬೇಗ ಅವರನ್ನು ಕರೆಸಿ ಮಾತನಾಡುತ್ತೇವೆ.

ಶ್ರೀ ಪಂಪಾಪತಿ.—ಎಷ್ಟು ದಿವಸ ಬೇಕಾಗುತ್ತದೆ ಅವರನ್ನು ಕರೆಸುವುದಕ್ಕೆ. ಒಂದು ಸಭೆ ನಡೆಸುವುದಕ್ಕೋಸ್ಕರ ಎಷ್ಟು ದಿವಸ ಬೇಕಾಗುತ್ತದೆ.

ಅಧ್ಯಕ್ಷರು.—ಕರೆಸುತ್ತೇವೆಂದು ಹೇಳಿದ್ದಾರೆ, ಕರೆಸುತ್ತಾರೆ.

ಶ್ರೀ ಪಂಪಾಪತಿ.—ಅವರೇನು ಬೇರೆ ದೇಶದವರೇ, ಎಷ್ಟು ದಿವಸ ಬೇಕು ಅವರನ್ನು ಕರೆಸುವುದಕ್ಕೆ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಎಸ್. ಕೆ. ಕಾಂತ.—ಮಾತುಕತೆಯಲ್ಲಿ ಅವರೂ ಇದ್ದರು. ಎಲ್ಲಾ ರೀತಿಯಲ್ಲಿ ಅವರು ಸಹಕಾರ ಕೊಟ್ಟರು. ಒಂದು ವಿಷಯದಲ್ಲಿ ಮಾತ್ರ ನಿಧಾನ ಆಯಿತು. ಡಿ. ಎ. ಫ್ರೀಜ್ ಆಗಬೇಕು ಎಂದು ಮ್ಯಾನೇಜ್‌ಮೆಂಟ್‌ನವರು ಕೇಳುತ್ತಿದ್ದಾರೆ. ೩೫ ರೂಪಾಯಿ ಕೊಡಬೇಕೆಂದು, ಕಾರ್ಮಿಕ ವರ್ಗದವರು ಹೇಳುತ್ತಾರೆ. ಮ್ಯಾನೇಜ್‌ಮೆಂಟ್‌ನವರು ವೇಜಸ್ ಅನ್ನು ಜಾಸ್ತಿ ಕೊಡುವಾಗ ನಮ್ಮ ಫ್ಯಾಕ್ಟರಿ ಫೀಸಿಬಿಲಿಟಿ ನೋಡಿಕೊಂಡು ಮಾಡುತ್ತೇವೆ ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಪಟೇಲ್ ಅವರೊಂದಿಗೆ ಮಾತನಾಡಿ ಆದಷ್ಟು ಬೇಗ ಅವರ ಜೊತೆ ಮೀಟಿಂಗ್ ಮಾಡಲು ಕಾರ್ಮಿಕ ಸಂಘದ ಪದಾಧಿಕಾರಿಗಳನ್ನು ಕರೆಸುತ್ತೇನೆ.

ಶ್ರೀ ಪಂಪಾಪತಿ.—ತಾರೀಖು ಹೇಳಿಬಿಡಿ.

ಶ್ರೀ ಜೆ. ಹೆಚ್. ಪಟೇಲ್.—ಈ ಸದನದಲ್ಲಿ ಹೀಗೆ ಹೇಳಬಾರದು, ಆದಷ್ಟು ಬೇಗ ಕರೆಸುತ್ತೇವೆ.

ಶ್ರೀ ಎಸ್. ಕೆ. ಕಾಂತ.—೨೦ನೇ ತಾರೀಖಿನೊಳಗೆ ಕರೆಸುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.—ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಬಗ್ಗೆ ಮಾತನಾಡುವಾಗ ಗುಲ್ಬರ್ಗಾದಲ್ಲಿ ೧೭–೧೮ ಮಿನಿ ಸಿಮೆಂಟ್ ಪ್ಲಾಂಟ್ ನಡೆಯುತ್ತಿದೆ ಎಂದು ಅದರಲ್ಲಿ ಕೆಲವು ಡಿಫಂಕ್ಟ್ ಆಗಿದೆ ಎಂದೂ ಹೇಳಿದ್ದಾರೆ. ಆದರೆ ೨–೩ ಸಿಮೆಂಟ್ ಪ್ಲಾಂಟ್‌ಗಳು ಬಹಳ ಕಷ್ಟದಿಂದ ನಡೆಯುತ್ತಿವೆ. ಸೆಂಟ್ರಲ್ ಗವರ್ನ್‌ಮೆಂಟ್‌ನವರು ಮತ್ತು ಸ್ಟೇಟ್ ಗವರ್ನಮೆಂಟ್‌ನವರು ಸಬ್ಸಿಡಿಯನ್ನು ಕೊಟ್ಟು ಎನ್‌ಕರೇಜ್ ಮಾಡಬೇಕು. ನೀವು ಸಬ್ಸಿಡಿ ಕಾರ್ಯಕ್ರಮದಲ್ಲಿ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಏಕೆಂದರೆ ಎಸ್. ಸಿ. ವ್ಯಕ್ತಿಯೊಬ್ಬ ಸಿಮೆಂಟ್ ಪ್ಲಾಂಟ್ ಹಾಕಿಕೊಂಡು ಮುಂದೆ ಬಂದು ಕಾರ್ಖಾನೆಯನ್ನು ನಡೆಸುತ್ತಿದ್ದಾನೆ. ಸಬ್ಸಿಡಿ ಮಾತ್ರ ಇನ್ನೂ ಬಂದಿಲ್ಲ, ೧೯೮೭–೮೮ರ ಸಬ್ಸಿಡಿ ಇನ್ನೂ ಬರಬೇಕಾಗಿದೆ. ೭ ಲಕ್ಷ ರೂಪಾಯಿ ಕೊಟ್ಟು ಡಿಸ್ಟ್ರಿಬ್ಯೂಟ್ ಮಾಡಿ ಎಂದರೆ ಒಬ್ಬರಿಗೆ ಇಪ್ಪತ್ತು ಸಾವಿರ ಕೂಡ ಬರುವುದಿಲ್ಲ, ಸಬ್ಸಿಡಿಯನ್ನು ಹೆಚ್ಚು ಕೊಟ್ಟು ಎನ್‌ಕರೇಜ್ ಮಾಡಬೇಕು, ಆದರೆ ಅಮೌಂಟ್ ಅನ್ನು ಏಕೆ ಇನ್ನೂ ರಿಲೀಸ್ ಮಾಡಿಲ್ಲ, ಇವರುಗಳಿಗೆ ಕೆಲವು ಕನ್‌ಸೆಷನ್ ಅನ್ನು ಕೊಡಬೇಕು. ಯಾಕೆಂದರೆ ಟಾಟಾ, ಬಿರ್ಲಾ ಇವರುಗಳು ತಿಮಿಂಗಿಲ ತರಹ ಇದ್ದಾರೆ. ಇವರುಗಳ ಮಧ್ಯೆ ಕಾಂಪಿಟಿಷನ್ ಮಾಡಿದರೆ ಇವರುಗಳು ಬದುಕುವುದು ಕಷ್ಟವಾಗುತ್ತದೆ. ಇವರಿಗೆ ಎಲೆಕ್ಟ್ರಿಸಿಟಿಯನ್ನು ಹೆಚ್ಚು ಕೊಡಬೇಕು, ಯೂನಿಟ್‌ಗಳನ್ನು ಹೆಚ್ಚು ಕೊಡಬೇಕು ಮತ್ತು ಸೇಲ್ಸ್ ಟ್ಯಾಕ್ಸ್ ಎಕ್ಸೈಜ್ ಇನ್ನು ಏನಾದರೂ ಇತರ ಕನ್ಸೆಷನ್ ಕೊಡಬೇಕು. ಮತ್ತು ಕೋಲ್ ಪರ್ಚೇಸ್ ಬಗ್ಗೆ ಹೆಚ್ಚಿಗೆ ಅನುಕೂಲವನ್ನು ಮಾಡಿಕೊಡಬೇಕು. ಸರ್ಕಾರ ಇವುಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಾರೆಯೋ ಎಂದು ಕೇಳುತ್ತೇನೆ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಲೋನ್ ೧೦ ಪರ್ಸೆಂಟ್ ಸೆಂಟ್ರಲ್ ಡೆವಲಪ್‌ಮೆಂಟ್ ಕೊಡುತ್ತಾರೆ. ಅದನ್ನು ಸ್ಟಾಪ್ ಮಾಡಿದ್ದಾರೆ. ಆ ಲೋನ್ ಅನ್ನು ಪುನಃ ಕೊಡುವುದಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. To encourage the small units will the Government take steps in this connection ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಅವರು ಯಾವ ವಿಚಾರವನ್ನು ಹೇಳುತ್ತಾರೆ ಅದನ್ನು ನಾನು ಒಪ್ಪುತ್ತೇನೆ. ಮೊದಲು ಮಿನಿ ಸಿಮೆಂಟ್ ಪ್ಲಾಂಟ್ ಬಗ್ಗೆ ಗವರ್ನಮೆಂಟ್ ಆಫ್ ಇಂಡಿಯಾದವರು ಎನ್‌ಕರೇಜ್ ಮಾಡಿದ್ದರು. ಸ್ಟೇಟ್ ಗವರ್ನಮೆಂಟ್‌ನವರೂ ಎನ್‌ಕರೇಜ್ ಮಾಡುತ್ತಿದ್ದಾರೆ. ಎಕನಾಮಿಕ್ಸ್ ಮತ್ತು ಎಂಪ್ಲಾಯ್‌ಮೆಂಟ್ ದೃಷ್ಟಿಯಿಂದ ಮಿನಿ ಸಿಮೆಂಟ್ ಪ್ಲಾಂಟ್‌ಗಳಿಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಾ ಇದ್ದೇವೆ. ಐ.ಡಿ.ಬಿ.ಐ.ನಿಂದ ರೀ ಇಂಬರ್ಸ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮಿನಿ ಪ್ಲಾಂಟ್ ಬಗ್ಗೆ ಸ್ಟೇಟ್ ಗವರ್ನಮೆಂಟ್ಸ್

ನವರೂ ಎನ್‌ಕರೇಜ್‌ಮೆಂಟ್ ಹೆಚ್ಚು ಕೊಡುತ್ತಿದ್ದೇವೆ. ಗುಲ್ಬರ್ಗಾ ಮತ್ತು ಹೊಸದುರ್ಗ ಮಿಲ್‌ಗಳು ತೊಂದರೆಯಲ್ಲಿದೆ. ಅದಕ್ಕೋಸ್ಕರ ಗವರ್ನಮೆಂಟ್ ಆಫ್ ಇಂಡಿಯಾಗೆ ಒಂದು ರೆಕಮೆಂಡೇಷನ್ ಕಳಿಸಿದ್ದೇವೆ. Mini cement plants have more cogent argument in their favour. ಇದರಿಂದ ಅವರುಗಳು ಎಷ್ಟು ದಿವಸದಲ್ಲಿ ಕೆಲಸ ಮಾಡಬಹುದೋ, ಅಷ್ಟು ದಿವಸದಲ್ಲೇ ಹೆಚ್ಚು ಉತ್ಪತ್ತಿ ಮಾಡಬಹುದು. It is a very good case, I agree, with him. We will pursue the Government of India and the Central financing institutions to continue the facilities which they are giving. ಈ ವರ್ಷ ಪರಿಸ್ಥಿತಿ ಉತ್ತಮವಾಗುವ ಲಕ್ಷಣಗಳು ಕಾಣುತ್ತಿವೆ. ಮಳೆ ಚೆನ್ನಾಗಿ ಬಂದರೆ ನಾವು ಹೆಚ್ಚು ವಿದ್ಯುತ್‌ನ್ನು ಉತ್ಪಾದನೆ ಮಾಡಬಹುದು. ಆಗ ಈ ಸೆಕ್ಟಾರ್‌ನವರಿಗೆ ನಾವು ಸಹಾಯ ಮಾಡುತ್ತೇವೆ.

ಶ್ರೀ ಯು. ಭೂಪತಿ.—ನಾನು ಇಲ್ಲಿ ಒಂದೇ ಒಂದು ಕೈಗಾರಿಕೆ ಬಗ್ಗೆ ಹಲವಾರು ಸಲ ಪ್ರಸ್ತಾಪ ಮಾಡಿದ್ದೇನೆ. ಆದರೆ ಸರ್ಕಾರ ಇನ್ನೂ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ತುಂಗಭದ್ರಾ ಫೈಬರ್ಸ್ ಲಿಮಿಟೆಡ್‌ನಲ್ಲಿ ಸರ್ಕಾರದ ಬಂಡವಾಳ ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟು ಇದೆ. ಇದೊಂದು ಹೊಸ ಕೈಗಾರಿಕೆಯಾಗಿದ್ದು, ಇದು ಪ್ರಾರಂಭದ ಹಂತದಲ್ಲಿಯೇ ಸತ್ತು ಹೋಯಿತು. ನಾನು ಹೋದ ವರ್ಷ ಇದೇ ಕೈಗಾರಿಕೆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿ ಸರ್ಕಾರದ ಮುಂದೆ ಒಂದು ಬೇಡಿಕೆಯನ್ನು ಇಟ್ಟಿದ್ದೆ, ಏನೆಂದರೆ, ನಾನು ಅಲ್ಲಿನ ಕಾರ್ಮಿಕ ಸಂಘದ ಅಧ್ಯಕ್ಷನಾದ ಕಾರಣ, ಈ ಕೈಗಾರಿಕೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಮತ್ತು ಇದರ ಮಾಲೀಕರ ಒಂದು ಸಭೆಯನ್ನು ಕರೆಯಿರಿ ಎಂದು, ನೀವು ಸಭೆ ಕರೆದಿದ್ದರೆ ಆ ಕೈಗಾರಿಕೆಯ ಮ್ಯಾನೇಜಿಂಗ್ ಡೈರೆಕ್ಟರ್ ಅವರ ಮುಖವನ್ನಾದರೂ ನೋಡಬಹುದಾಗಿತ್ತು. ಆದರೆ ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ಈ ಕೈಗಾರಿಕೆಯನ್ನು ಉಳಿಸುತ್ತೇವೆ ಇಲ್ಲವೇ ಬೇರೆ ಏನಾದರೂ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಿದಿರಿ ಅಷ್ಟೇ ಅಲ್ಲ, ಇದನ್ನು ಮಾರಾಟ ಮಾಡುವುದಕ್ಕೆ ಸಾಧ್ಯವಾದರೆ ಅದನ್ನು ಸಹ ಯೋಚನೆ ಮಾಡುತ್ತೇವೆಂದು ಹೇಳಿದಿರಿ. ಆದ್ದರಿಂದ ಈಗ ಇದು ಯಾವ ಹಂತದಲ್ಲಿದೆ? ಅದನ್ನು ಏನಾದರೂ ಉಳಿಸುವುದಕ್ಕೆ ಪ್ರಯತ್ನ ಮಾಡಿದ್ದೀರಾ ಎಂಬುದನ್ನು ತಾವು ತಿಳಿಸಬೇಕು?

ಶ್ರೀ ಜೆ. ಹೆಚ್. ಪಟೇಲ್.—ಇದು ಖಾಸಗೀ ಕ್ಷೇತ್ರದಲ್ಲಿದೆ. ನಾವು ಏನೋ ಮಾಡುವುದಕ್ಕೆ ಹೋಗಿ 3 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟು ಈಗ ಸಿಕ್ಕಿಹಾಕಿಕೊಂಡಿದ್ದೇವೆ. ಆ ಮನುಷ್ಯ ನಮಗೆ ಸರಿಯಾಗಿ ಸಿಗುತ್ತಿಲ್ಲ. ಇತ್ತೀಚೆಗೆ ಒಂದು ನೋಟೀಸ್ ಕೊಟ್ಟು, ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಬೇರೆಯವರಿಗೆ ಮಾರಾಟ ಮಾಡುತ್ತೇವೆಂದು ತಿಳಿಸಿದ್ದೇವೆ. ಕೆ. ಆರ್. ಮಿಲ್‌ನವರ ತರಹ ಸೂಕ್ತ ಕ್ರಮ ತೆಗೆದುಕೊಳ್ಳುವ ಬಗ್ಗೆ ಅವಾಯ್ಡ್ ಮಾಡುತ್ತಿದ್ದಾನೆ. ವಾರದ ಕೆಳಗೆ ಆತನನ್ನು ಕರೆಸಿ ಕೊನೆಯದಾಗಿ ಹೇಳಿದ್ದೇವೆ. ನಮಗೆ ಬರುವ ದುಡ್ಡಿಗಾಗಿ ಆ ಕೈಗಾರಿಕೆಯನ್ನು ಹರಾಜು ಹಾಕಬೇಕಾಗುತ್ತದೆಂದು ನಾವು ಹೇಳಿದ್ದೇವೆ. ಅದು ಈಗಲೂ ಸಹ ಚೆನ್ನಾಗಿ ನಡೆಸುವಂತಹ ವಯಬಲ್ ಯೂನಿಟ್ ಆಗಿದೆ. ಅದಕ್ಕೆ ಒಳ್ಳೆಯ ಭವಿಷ್ಯ ಇದೆ. ಅಲ್ಲಿ ಅತ್ಯಾಧುನಿಕ ಮೆಷಿನರಿಗಳಿವೆ. ಆದರೂ ಆತ ಅದನ್ನು ನಡೆಸುವುದಕ್ಕೆ ತಯಾರಿಲ್ಲ. ಅದು ಎಲ್ಲ ವಿಧದಲ್ಲಿಯೂ ಉತ್ತಮವಾದಂಥ ಕಾರ್ಖಾನೆ ಆಗಿದೆ. ಹತ್ತು ಕೋಟಿ ರೂಪಾಯಿಗಳ ಬಂಡವಾಳ ಹಾಕಿದರೆ ಬಹಳ ಚೆನ್ನಾಗಿ ನಡೆಸಬಹುದು. ಆದರೆ ಆತನ ಕೈಯಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಸಹ ಹೊರಗಡೆಯಿಂದ ತರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಇದನ್ನು ಚೆನ್ನಾಗಿ ನಡೆಸುವವರಿಗೆ ಕೊಡಬೇಕಾಗಿದೆ. ಈಗ ಇದರ 'ಕೀ' ನಮ್ಮ ಕೈಯಲ್ಲಿದೆ. ಆದ್ದರಿಂದ ಅಲ್ಟಿಮೇಟ್ ನೋಟೀಸ್ ಕೊಟ್ಟು ಇದನ್ನು ನಡೆಸಬೇಕು ಇಲ್ಲದಿದ್ದರೆ ಬೇರೆಯವರಿಗೆ ವಹಿಸಿಕೊಡುತ್ತೇವೆ ಎಂದು ಹೇಳುತ್ತೇವೆ. ಒಟ್ಟಿನಲ್ಲಿ ಇದು ಮತ್ತೆ ನಡೆಸುವಂತಹ ಕೈಗಾರಿಕೆ ಆಗಿದೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಇನ್‌ಸೆಂಟೀವ್ ಪ್ಯಾಕೇಜ್ ಬಗ್ಗೆ ಹೇಳಿದರು. ಇದರಿಂದ ಕೈಗಾರಿಕೆಗಳ ಬೆಳವಣಿಗೆಗೆ ಯಾವರೀತಿ ಅನುಕೂಲವಾಗುತ್ತದೆ ಎಂಬುದನ್ನು ತಾವು ತಿಳಿಸಬೇಕು. ಈ ಇನ್‌ಸೆಂಟೀವ್ ಸಿಕ್—ಇಂಡಸ್ಟ್ರಿಗಳಿಗೂ ಸಹ ಅನ್ವಯವಾಗುತ್ತದೆಯೋ ಹೇಗೆ ಎಂಬುದನ್ನು ಸಹ ತಿಳಿಸಬೇಕು. ಈ ಸಿಕ್—ಇಂಡಸ್ಟ್ರಿಗಳ ಬಗ್ಗೆ ಮಾನ್ಯ

ಮಂತ್ರಿಗಳು ಬಹಳ ಉತ್ಸಾಹವಾಗಿ ಮಾತನಾಡಿದರು. ಇಂತಹ ಇಂಡಸ್ಟ್ರಿಗಳು ಬೇಕಾದರೆ ಸತ್ತು ಹೋಗಲಿ, ಆದರೆ ಇರುವ ಇಂಡಸ್ಟ್ರಿಗಳನ್ನು ಬದುಕಿಸೋಣ ಎಂದು ಹೇಳಿದರು. ಆದರೆ ಈ ಸಿಕ್ ಇಂಡಸ್ಟ್ರಿಗಳಲ್ಲಿ ಸಾರ್ವಜನಿಕರು ಮತ್ತು ಹಣಕಾಸಿನ ಸಂಸ್ಥೆಗಳು ಹಣ ತೊಡಗಿಸಿರುವುದರಿಂದ, ಇಂತಹ ಹಣವನ್ನು ವಾಪಸ್ ಅಲ್ಲಿಂದ ತೆಗೆದುಕೊಳ್ಳಲು ನೀವು ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಜೆ. ಹೆಚ್. ಪಟೇಲ್.— ಸ್ಮಾಲ್‌ಸ್ಕೇಲ್ ಇಂಡಸ್ಟ್ರಿಗಳಲ್ಲಿ ಸಾರ್ವಜನಿಕರ ಹಣ ಇರುತ್ತದೆಯೇ ?

ಶ್ರೀ ಸಿ. ಪಿ. ಮೂಡಲಗಿರಿಯಪ್ಪ.—ಈಗ ನಷ್ಟದಲ್ಲಿರುವ ಕೆಲವು ಯೂನಿಟ್‌ಗಳು ಮುಚ್ಚಿ ಹೋಗದಿರಲು ನೀವು ಪ್ರಿವೆಂಟಿವ್ ಮೆಜರ್ಸ್ ಏನು ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು ?

ಶ್ರೀ ಎಂ. ರಘುಪತಿ.—ಇದರ ಬಗ್ಗೆ ನಾನು ಈಗಾಗಲೇ ವಿವರವಾಗಿ ಹೇಳಿದ್ದೇನೆ. ನಮ್ಮಲ್ಲಿರುವ ಸಣ್ಣ ಕೈಗಾರಿಕೆಗಳ ಪೈಕಿ ಶೇಕಡಾ ೧೭ ರಷ್ಟು ಕೈಗಾರಿಕೆಗಳು ಸಿಕ್ ಆಗಿವೆ. ಇಂತಹ ಕೆಲವು ಕೈಗಾರಿಕೆಗಳನ್ನು ಮತ್ತೆ ವಯಬಲ್ ಆಗಿ ನಡೆಸುವುದಕ್ಕೆ ಸಾಧ್ಯವಿದೆ. ಇಂತಹ ನಷ್ಟದಲ್ಲಿರುವ ಕೈಗಾರಿಕೆಗಳನ್ನು ಲಾಭದಲ್ಲಿ ನಡೆಸಲು ಹಣಕಾಸಿನ ತೊಂದರೆ ಏನಾದರೂ ಇದ್ದರೆ, ನಾವು ಸಹಾಯ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಪಿ. ಬಸವರಾಜ್.—ಮಾನ್ಯ ಅಧ್ಯಕ್ಷರೇ, ನಮ್ಮ ಬೀದರ್ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಹಿಂದುಳಿದಿರುವುದರಿಂದ, ಅಲ್ಲಿ ಕೈಗಾರಿಕೆಗಳನ್ನು ಹೊಸದಾಗಿ ಸ್ಥಾಪನೆ ಮಾಡುವವರಿಗೆ ಸರ್ಕಾರದಿಂದ ಸಿಗುವಂತಹ ಕೆಲವೊಂದು ಸೌಲಭ್ಯಗಳನ್ನು ಮತ್ತೆ ಮೂರು ವರ್ಷಗಳ ಕಾಲ ಮುಂದುವರೆಸಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮ ಭಾಗ ಕೈಗಾರಿಕಾ ಕ್ಷೇತ್ರದಲ್ಲಿ ಮುಂದೆ ಬರಬೇಕೆಂದು ಕೊಂಡು ಸರ್ಕಾರದವರು ಹೊಸದಾಗಿ ಕೈಗಾರಿಕೆಯನ್ನು ಪ್ರಾರಂಭ ಮಾಡುವವರಿಗೆ ಶೇಕಡಾ ೨೫ ರಷ್ಟು ಸೆಂಟ್ರಲ್ ಸಬ್ಸಿಡಿ ಎಂದು ಕೊಡುತ್ತಿದ್ದಾರೆ. ಈ ಸಬ್ಸಿಡಿ ಹಣ ಸಿಗುತ್ತದೆಂಬ ಕಾರಣದಿಂದ ಕೆಲವರು ಈಗಾಗಲೇ ಕೆ.ಎಸ್.ಎಫ್.ಸಿ.ಯಿಂದ ಸಾಲ ಪಡೆದು ತಮ್ಮ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ, ಆದರೆ ಕೆಲವರು ತಮ್ಮ ಕೆಲಸ ಪ್ರಾರಂಭ ಮಾಡಿ ಒಂದು ವರ್ಷ, ಎರಡು ವರ್ಷಗಳಾದ ಮೇಲೂ ಸಹ ಸರ್ಕಾರದವರು ಈ ಸಬ್ಸಿಡಿ ಹಣವನ್ನು ಅವರಿಗೆ ಬಿಡುಗಡೆ ಮಾಡಿಲ್ಲ. ಇದರಿಂದ ಅವರು ತಮ್ಮ ಕೆಲಸವನ್ನು ಮುಗಿಸುವುದಕ್ಕೆ ಬಹಳ ತೊಂದರೆಯಾಗುತ್ತಿದೆ. ತಾವು ಅವರಿಗೆ ಸಬ್ಸಿಡಿ ಹಣ ಕೊಡುವುದು ತಡವಾಗುವುದಿದ್ದರೆ ತಾವು ಹಣ ಬಿಡುಗಡೆ ಮಾಡುವವರೆಗೆ ಬೇರೆ ಹಣಕಾಸಿನ ಸಂಸ್ಥೆಗಳ ಮೂಲಕ ಅವರಿಗೆ ಹಣಕಾಸಿನ ನೆರವನ್ನು ಕೊಡಿಸಲು ವ್ಯವಸ್ಥೆ ಮಾಡುತ್ತೀರಾ ಹೇಗೆ ಎಂದು ನಾನು ತಮ್ಮನ್ನು ಕೇಳುತ್ತೇನೆ? ಅವರಿಂದ ಅಗ್ರಿಮೆಂಟ್ ಬಾಂಡ್‌ಗೆ ಸಹಿ ಮಾಡಿಸಿಕೊಂಡು ಕೆ.ಎಸ್.ಎಫ್.ಸಿ. ಮೂಲಕವಾದರೂ ಸಾಲ ಕೊಡಿಸಲು ತಾವು ವ್ಯವಸ್ಥೆ ಮಾಡಬೇಕು.

೨-೩೦ ಪಿ.ಎಂ.

ಎರಡನೆಯದು. ಈಗಾಗಲೇ ಮಂತ್ರಿಗಳು ಹೇಳಿದರು. ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಹುಮ್ನಾಬಾದ್‌ನಲ್ಲಿ ೫೦೦ ಎಕರೆ ಭೂಮಿ ತೆಗೆದುಕೊಂಡಿದ್ದಾರೆ, ಬಾವಿ, ಟ್ಯಾಂಕ್ ಎಲ್ಲಾ ಮಾಡಿದ್ದಾರೆ. ಆದರೂ ಅಲ್ಲಿ ನೀರು ಸರಿಯಾಗಿ ಬರುತ್ತಾ ಇಲ್ಲ. ಅಲ್ಲಿ ನಾರಂಜ ಪ್ರಾಜೆಕ್ಟ್ ೧೦-೧೨ ಕಿಲೋಮೀಟರ್ ಮೇಲೆ ಇದೆ. ಅಲ್ಲಿಂದ ಏನಾದರೂ ಪೈಪ್ ಲೈನ್ ಹಾಕಿ ನೀರು ಬಂದರೆ ಸಾಕಷ್ಟು ಇಂಡಸ್ಟ್ರಿಗಳು ಆಗುತ್ತವೆ. ಹುಮ್ನಾಬಾದ್‌ನಲ್ಲಿ ನೀರು ಇಲ್ಲದೆ ಫ್ಯಾಕ್ಟರಿಗಳು ಆಗುತ್ತಾ ಇಲ್ಲ. ಆದುದರಿಂದ ಅಲ್ಲಿಗೆ ಪೈಪ್ ಲೈನ್ ಹಾಕಿ ನೀರಿನ ವ್ಯವಸ್ಥೆ ಮಾಡಿ ಆ ಭಾಗ ಡೆವಲಪ್ ಮಾಡುವುದಕ್ಕೆ ಸರ್ಕಾರ ಏನಾದರೂ ವಿಚಾರ ಮಾಡುತ್ತದೆಯೇ ?

ಶ್ರೀ ಜೆ. ಹೆಚ್. ಪಟೇಲ್.—ಆಗಲೇ ತಾವು ಇರಲಿಲ್ಲ ಎಂದು ಕಾಣುತ್ತದೆ. ಮಾನ್ಯ ಸಚಿವರು ಹೇಳಿದರು. ಆ ಸ್ಥಳಕ್ಕೆ ನಾನು ಬರುತ್ತೇನೆ; ಬಂದು ನೋಡಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎಂದು ಅಲ್ಲಿ ಡೆವಲಪ್‌ಮೆಂಟ್ ಲೋನ್, ಸಬ್ಸಿಡಿ ಬಾಕಿ ಇದೆ, ಅವುಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. We have honoured our commitment. ಕಮಿಟ್‌ಮೆಂಟ್ ಇದೆ ಎಂದು ಹೇಳಿದ್ದೇನೆ, ಇಲ್ಲ ಎಂದು ಹೇಳುವುದಿಲ್ಲ.

ಯಾವಾಗ, ಏನು ಎನ್ನುವುದನ್ನು, ಸಮಯ, ನಮ್ಮ ಸ್ಥಿತಿಯ ಆಧಾರದ ಮೇಲೆ ಮಾಡುತ್ತೇವೆ, ಇದು ಒಂದನೆಯದು. ಇನ್ನೊಂದು, ಏರಿಯ ಡೆವಲಪ್‌ಮೆಂಟ್ ಬೋರ್ಡ್‌ನವರು ಇನ್‌ಫ್ರಾಸ್ಟ್ರಕ್ಚರಲ್ ಫೆಸಿಲಿಟೀಸ್ ಏನು ಮಾಡಿದ್ದಾರೆ, ಇನ್ನೂ ಏನು ಮಾಡಬೇಕು ಎನ್ನುವುದು ಒಂದು. ಬಿದರೆಯವರಿಗೆ ತೊಂದರೆಯಾಗದ ಹಾಗೆ ನೋಡಬೇಕು. ಅವರು ಬರುತ್ತೇವೆ ಎಂದು ಹೇಳಿದ್ದಾರೆ. ಅವರು ಬಂದಾಗ ನೀವು ಪ್ರಸ್ತಾಪ ಮಾಡಬಹುದು.

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲೆ ಚರ್ಚೆಗೆ ಉತ್ತರ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ.—

"೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೬ ಮತ್ತು ೮ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ - 6

ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು, ರೇಷ್ಮೆ ವ್ಯವಸಾಯದ ಮತ್ತು ಸಹಕಾರಿ ಉದ್ಯಮಗಳ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮ ೬೩,೮೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೭,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 8

ಚಿಕ್ಕಪುಟ್ಟ ಉದ್ಯಮಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೪,೯೩,೧೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೮೭,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸೋಮವಾರ ತೆಗೆದುಕೊಳ್ಳೋಣ.

MR. SPEAKER.—Then replies will have to be laind on the Table of the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮುಂಡೇ ರಿಪೀಟ್ ಮಾಡೋಣ.

ಶ್ರೀ ಎ. ಲಕ್ಷ್ಮೀಸಾಗರ್.—ಮುಂಡೇ ಕೊಶ್ಚನ್ಸ್ ಯಾವಾಗ ತೆಗೆದುಕೊಳ್ಳುವುದು ? That is not proper. These questions and answers will be placed on the Table of the House.

MR. CHAIRMAN.—Questions and Answers ಬೇಗ ಮುಗಿಸೋಣ.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಗದಗ ಕೋ-ಆಪರೇಟಿವ್ ಕಾಟನ್ ಸೇಲ್ ಸೊಸೈಟಿಯು ಬಗ್ಗೆ

೨೫೧೫. ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗದಗ ಕೋ-ಆಪರೇಟಿವ್ ಕಾಟನ್ ಸೇಲ್ ಸೊಸೈಟಿಯು ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಸಹಕಾರ ಇಲಾಖೆಯಲ್ಲಿ ಬಾಕಿ ಇರುವ ಪಂಚಾಯಿತ ದಾವಾ ಪ್ರಕರಣಗಳ ಸಂಖ್ಯೆ.

ಆ) ಪ್ರಕರಣಗಳು ಎಂದಿನಿಂದ ಬಾಕಿ ಇದೆ ಮತ್ತು ತಡವಾದುದಕ್ಕೆ ಕಾರಣಗಳು.

ಶ್ರೀ ಹೆಚ್ ಏಕಾಂತಯ್ಯ (ಸಹಕಾರ ಸಚಿವರು).—

ಅ)	೧. ಗೌರವ ಮಧ್ಯಸ್ಥದಾರರಿಗೆ ವಹಿಸಿರುವ ಪ್ರಕರಣಗಳು	— ೧೬೪
	೨. ಧಾರವಾಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿರುವ ಪ್ರಕರಣಗಳು	— ೩೪
	ಒಟ್ಟು	— ೧೯೮

ಆ) ೧೬೪ ಪ್ರಕರಣಗಳಲ್ಲಿ ೧೨೧ ಪ್ರಕರಣಗಳನ್ನು ದಿನಾಂಕ ೧೨-೯-೮೬ ರಂದು ಮತ್ತು ಉಳಿದ ೪೩ ಪ್ರಕರಣಗಳನ್ನು ದಿನಾಂಕ ೨೯-೧೦-೮೭ ರಂದು ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಗೆ ಸಲ್ಲಿಸಲಾಗಿತ್ತು. ಆದರೆ ಈ ದಾವಾ ಅರ್ಜಿಗಳು ಅಪೂರ್ಣವಾಗಿದ್ದುದರಿಂದ, ಸಂಘವು ದಿನಾಂಕ ೦೮-೦೪-೧೯೮೮ ರಂದು ೧೨೧ ಪ್ರಕರಣಗಳನ್ನು ಮತ್ತು ದಿನಾಂಕ ೦೬-೦೫-೧೯೮೮ ರಂದು ೪೩ ಪ್ರಕರಣಗಳನ್ನು ಸರಿಪಡಿಸಿ ಸಲ್ಲಿಸಿತು. ಆ ನಂತರ ೧೨೧ ಪ್ರಕರಣಗಳನ್ನು ದಿನಾಂಕ ೨೨-೪-೧೯೮೮ ರಂದು ಮತ್ತು ೪೩ ಪ್ರಕರಣಗಳನ್ನು ದಿನಾಂಕ ೨೧-೫-೮೮ ರಂದು ಗೌರವ ಮಧ್ಯಸ್ಥದಾರರಿಗೆ ಇತ್ಯರ್ಥಕ್ಕಾಗಿ ವಹಿಸಿ ಕೊಡಲಾಗಿದೆ.

ಉಳಿದ ೩೪ ಪ್ರಕರಣಗಳು ದಿನಾಂಕ ೨೯-೪-೧೯೮೮ ರಂದು ಉಪನಿಬಂಧಕರ ಕಛೇರಿಗೆ ಬಂದಿದ್ದು, ಮುಂದಿನ ಕ್ರಮಕ್ಕಾಗಿ ಧಾರವಾಡ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಅವುಗಳನ್ನು ಪರಿಶೀಲಿಸಲಾಗುತ್ತಿದೆ. ದಾವಾ ಅರ್ಜಿಗಳು ಅಪೂರ್ಣವಾಗಿದ್ದು ಸರಿಪಡಿಸದಿದ್ದುದು ವಿಳಂಬವಾಗಲು ಕಾರಣವಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಅಪೂರ್ಣವಾಗಿದ್ದು ಯಾವಾಗ ಗೊತ್ತಾಯಿತು, ಮತ್ತು ಏನು ಅಪೂರ್ಣವಾಗಿದೆ ? ಇದಕ್ಕೆ ಒಬ್ಬೊಬ್ಬರು ಡೆಪ್ಯುಟಿ ರಿಜಿಸ್ಟ್ರಾರನ್ನು ಇಟ್ಟುಕೊಂಡರೆ ವಸೂಲಿ ಕೆಲಸ ಹೇಗೆ ಆಗುತ್ತದೆ, ಮತ್ತು ಇಷ್ಟು ದಿವಸ ಎಂದು ಅವರಿಗೆ ಮಿತಿ ಹಾಕಿದ್ದೀರಾ ? ಹಾಗೇನಾದರೂ ಅವರಿಗೆ ವ್ಯವಸ್ಥೆ ಮಾಡಿದರೆ ಸಾಕೆ ? ಉಳಿದ ೧೬೦-೧೭೦ ಪ್ರಕರಣಗಳನ್ನು ಈಗ ರೆಫರ್ ಮಾಡಿದ್ದಾರೆ. ಮೊದಲಿನಿಂದಲೂ ಇದ್ದ ಆಫೀಸರ್ ಹತ್ತಿರ ಉಳಿಯುತ್ತವೆ. ಆದಕ್ಕೆ ಅಂಥವರ ಬಗ್ಗೆ ಏನಾದರೂ ತನಿಖೆ ಮಾಡುತ್ತೀರಾ ?